ದಶಮಾನ ಕಂಡ ಜಿಲ್ಲೆಯ ಮೊದಲ ಪ್ರಾದೇಶಿಕ ದಿನ ಪತ್ರಿಕೆ

ದಾವಣಗೆರೆ, ಉಡುಪಿ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಗದಗ, ಬೆಂಗಳೂರು ಗ್ರಾಮಾಂತರ

KB 10 2013

# ಕನ್ನಡ ಭಾರತಿ

ನೊಂದವರ ನೈಜ ಕನ್ನಡಿ

ಸಂಪಾದಕರು : ಮಲ್ಲಿಕಾರ್ಜುನ್ ಕಬ್ಬೂರು

ಸಂಪುಟ : 12 ಸಂಚಿಕೆ : 204

5-2-2025 ಬುಧವಾರ

₹3 KA/SK/DVG-006/2023-2025 KARKAN/2013/50807 KANNADA BHARATHI REGIONAL DALIY DAVANAGERE dvgkanndabharathi@gmail.com Page : 6 VOLUME : 12 ISSUE : 204

## ಜಿಲ್ಲಾ ಮಟ್ಟದ ಕಾರ್ಯಪಡೆ ಪರಿಸರ ಆರೋಗ್ಯ ಸಮಿತಿ ಸಭೆ

**ದಾವಣಗೆರೆ:** ಜಿಲ್ಲಾ ಮಟ್ಟದ ಪರಿಸರ ಆರೋಗ್ಯ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿ ಸಭೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಫೆಬ್ರವರಿ 5 ರಂದು ಮಧ್ಯಾಹ್ನ 4 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆಯಲಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಷಣ್ಮುಖಪ್ಪ ತಿಳಿಸಿದ್ದಾರೆ.

## ನಗರಕ್ಕೆ ಶ್ರಮಿಕ ಸಮ್ಮಾನ್ ಯಾತ್ರೆ

**ದಾವಣಗೆರೆ:** ಎಲ್ಲ ವರ್ಗದ ಕಾರ್ಮಿಕ ವರ್ಗದವರಿಗೆ ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮಾನದಂಡಗಳು ಸೇರಿದಂತೆ ಇತರೆ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಫೆ.5ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕರ್ನಾಟಕ ಶ್ರಮಿಕ ಸಮ್ಮಾನ್ ಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ.

ಫೆ.6ರಂದು ಸಂಜೆ 6 ಗಂಟೆಗೆ ನಗರದ ಜಯದೇವ ವೃತ್ತದ ಮಾರ್ಗವಾಗಿ ಯಾತ್ರೆಯು ತೆರಳಲಿದ್ದು, ಹೆಚ್ಚಿನ ಮಾಹಿತಿಗಾಗಿ ಮತ್ತು ಯಾತ್ರೆಯನ್ನು ಬೆಂಬಲಿಸಲು ಹಾಗೂ ಯಾತ್ರೆಯಲ್ಲಿ ಭಾಗವಹಿಸಲು ಜಿಲ್ಲಾಧ್ಯಕ್ಷ ಕೆ.ಮಂಜುನಾಥ್ ಮೊ: 9341011321 ಮತ್ತು ಪ್ರಧಾನ ಕಾರ್ಯದರ್ಶಿ ಸೈಯದ್ ಸೈಪುಲ್ಲಾ ಮೊ: 97417 31566 ಗೆ ಸಂಪರ್ಕಿಸಬಹುದು.

## ನೇರ ಸಂದರ್ಶನ

**ಚಿಕ್ಕಮಗಳೂರು: ಫೆ. 04:** ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಚಿಕ್ಕಮಗಳೂರು ಕಛೇರಿಯಲ್ಲಿ ಫೆಬ್ರವರಿ 07 ರಂದು ಬೆಳಿಗ್ಗೆ 10.30 ಗಂಟೆಗೆ ಖಾಸಗಿ ಕಂಪನಿಯಾದ ಅಪೊಲೋ ಹೋಂ ಹೆಲ್ತ್ ಕೇರ್ ಲಿ., ಬೆಂಗಳೂರು ಇವರು ತಮ್ಮಲ್ಲಿ ಖಾಲಿ ಇರುವ ನರ್ಸಿಂಗ್ ಹುದ್ದೆಗೆ ನೇರ ಸಂದರ್ಶನವನ್ನು ಏರ್ಪಡಿಸಲಾಗಿದೆ.

ಉಚಿತ ಪ್ರವೇಶವಾಗಿದ್ದು, ಎಎನ್‌ಎಂ ನರ್ಸಿಂಗ್, ಜಿಎನ್‌ಎಂ ನರ್ಸಿಂಗ್, ಜಿಡಿಎ ಮತ್ತು ಬಿಎಸ್ಸಿ ನರ್ಸಿಂಗ್ ವಿದ್ಯಾರ್ಹತೆ ಹೊಂದಿರುವ 18 ರಿಂದ 40 ವರ್ಷ ವಯೋಮಿತಿಯ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ದೂರವಾಣಿ: 9945198500/ 08262-295538 ಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ನೇರ ಫೋನ್ ಇನ್

**ಚಿತ್ರದುರ್ಗ:** ಶಾಲಾ ಶಿಕ್ಷಣ ಇಲಾಖೆ ಹಾಗೂ ಪ್ರಸಾರ ಭಾರತಿ ಆಕಾಶವಾಣಿ ಸಹಯೋಗದಲ್ಲಿ ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಮಕ್ಕಳ ಫಲಿತಾಂಶ ಸುಧಾರಣೆಗಾಗಿ ಇದೇ ಫೆ.05ರಂದು ಬೆಳಿಗ್ಗೆ 10ಕ್ಕೆ ಆಂಗ್ಲಭಾಷೆಗೆ ಸಂಬಂಧಿಸಿದಂತೆ ನೇರ ಫೋನ್ ಇನ್ ಸರಣಿಯು ಪ್ರಸಾರವಾಗಲಿದೆ. ಫೋನ್ ಇನ್ ಕಾರ್ಯಕ್ರಮದಲ್ಲಿ ಆಂಗ್ಲ ಭಾಷೆಯ ವಿಷಯ ಪರಿವೀಕ್ಷಕ ಎಚ್.ಟಿ.ಚಂದ್ರಣ್ಣ, ಸಂಪನ್ಮೂಲ ವ್ಯಕ್ತಿಗಳಾದ ಚಿಕ್ಕಗೊಂಡನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕ ಟಿ.ಸಂತೋಷ್, ಜಿ.ಆರ್.ಹಳ್ಳಿ ಸಹ ಶಿಕ್ಷಕ ಹೆಚ್.ಕೆ.ಮಹೇಶ್ ಭಾಗವಹಿಸುವರು.

### ಬೇನಾಮಿ ಆಸ್ತಿ ಆರೋಪ:

# ಸಿದ್ದರಾಮಯ್ಯ ವಿರುದ್ಧ ಮತ್ತೊಂದು ದೂರು ದಾಖಲಿಸಿದ ಸ್ನೇಹಮಯಿಕೃಷ್ಣ




**ಮೈಸೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಬೇನಾಮಿ ಆಸ್ತಿ ಸಂಪಾದಿಸಿದ್ದಾರೆ ಎಂದು ಆರೋಪಿಸಿ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಲೋಕಾಯುಕ್ತಕ್ಕೆ ಮತ್ತೊಂದು ದೂರು ಸಲ್ಲಿಸಿದ್ದಾರೆ. ತನಿಖೆಗೆ ಆಗ್ರಹಿಸಿದ್ದು, ಅಧಿಕಾರಿಗಳು ವಿಳಂಬ ಮಾಡಿದರೆ ಕಾನೂನು ಕ್ರಮ ಜರುಗಿಸುವುದಾಗಿ ಅವರು ಎಚ್ಚರಿಕೆ ನೀಡಿದ್ದಾರೆ.

ಸಿದ್ದರಾಮಯ್ಯನವರು ಕೆಸರೆ ಗ್ರಾಮದ ಜಾಗವನ್ನ ಅರಿಶಿನ ಕುಂಕುಮ ರೂಪದಲ್ಲಿ ಪತ್ನಿಗೆ ಕೊಟ್ಟಿದ್ದಾರೆ ಎಂದಿದ್ದರು. ಈಗ ಮತ್ತೆ ಮಲ್ಲಿಕಾರ್ಜುನಸ್ವಾಮಿ ಒಂದು ಎಕರೆ ದಾನ ಮಾಡಿದ್ದಾರೆ. ಯಾಕೆ ಮಲ್ಲಿಕಾರ್ಜುನಸ್ವಾಮಿ ಖರೀದಿ ಮಾಡಿದ ಭೂಮಿಗಳನ್ನೇ ದಾನ ಮಾಡ್ತಿದ್ದಾರೆ. ಈ ಬಗ್ಗೆ ಸಿದ್ದರಾಮಯ್ಯನವರು ಎಲ್ಲಿಯೂ ಹೇಳಿಲ್ಲ ಯಾಕೆ? " ಎಂದು ಪ್ರಶ್ನೆ ಮಾಡಿದ್ದಾರೆ.

ಪಾರ್ವತಿ ಅವರ ಕುಟುಂಬದ ಒಡೆತನದ ಒಟ್ಟು ಆಸ್ತಿ ಮತ್ತು ಮಲ್ಲಿಕಾರ್ಜುನ ಸ್ವಾಮಿ ಅವರು ಸಂಪಾದಿಸಿರುವ ಆಸ್ತಿಗಳ ಬಗ್ಗೆ ತನಿಖೆ ನಡೆಸಬೇಕು ಎಂದು ಅವರು ಒತ್ತಾಯಿಸಿದ್ದಾರೆ

ಆಲನಹಳ್ಳಿಯಲ್ಲಿ 1 ಎಕರೆ ಡಿನೋಟಿಫೈ: 1983ರಲ್ಲಿ ಆಲನಹಳ್ಳಿಯ ಸರ್ವೇ ನಂಬರ್ 113/4ರಲ್ಲಿ 1 ಎಕರೆ ಖರೀದಿ ಮಾಡಿದ್ದಾರೆ. 1996ರಲ್ಲಿ ಮುಡಾ ಅಂತಿಮ ಅಧಿಸೂಚನೆ ಹೊರಡಿಸಿದ್ದರೂ ಡಿನೋಟಿಫೈ ಆಗಿದೆ. ಸಿದ್ದರಾಮಯ್ಯ ಪ್ರಭಾವದಿಂದ ಡಿನೋಟಿಫೈ ಆಗಿದೆ. ಅದೇ ಭೂಮಿಯನ್ನ 2010 ಅಕ್ಟೋಬರ್‌ನಲ್ಲಿ ಪಾರ್ವತಿಗೆ ದಾನ ಮಾಡಲಾಗಿದೆ. ತದನಂತರ ಅದನ್ನು ಒಂದು ತಿಂಗಳೊಳಗೆ ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ಅವರಿಗೆ ವರ್ಗಾಯಿಸಲಾಗಿದೆ. ಇದಾದ ನಾಲ್ಕು ತಿಂಗಳಲ್ಲಿ ಯತೀಂದ್ರ ಆ ಭೂಮಿಯನ್ನು ಮೂರನೇ ವ್ಯಕ್ತಿಗೆ ಮಾರಾಟ ಮಾಡಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಆರೋಪ ಮಾಡಿದ್ದಾರೆ.

ಈ ವ್ಯವಹಾರಗಳನ್ನು ಸಿದ್ದರಾಮಯ್ಯ ಏಕೆ ಸಾರ್ವಜನಿಕವಾಗಿ ಬಹಿರಂಗಪಡಿಸಿಲ್ಲ ಎಂದು ಪ್ರಶ್ನಿಸಿರುವ ಕೃಷ್ಣ, ಮಲ್ಲಿಕಾರ್ಜುನ ಸ್ವಾಮಿ ಅವರ ಹೆಸರಿನಲ್ಲಿ ಸಿಎಂ ಬೇನಾಮಿ ಆಸ್ತಿಗಳನ್ನು ಸಂಗ್ರಹಿಸುತ್ತಿದ್ದಾರೆ. ಈ ಬಗ್ಗೆ ಲೋಕಾಯುಕ್ತರು ಸೂಕ್ತ ರೀತಿಯಲ್ಲಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿರುವ ಸ್ನೇಹಮಯಿ ಕೃಷ್ಣ, ಅಧಿಕಾರಿಗಳು ಕ್ರಮ ಕೈಗೊಳ್ಳಲು ವಿಳಂಬ ಮಾಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

# ಆವರಗೆರೆಯ ನಿರಾಶ್ರಿತರಿಗೆ ಹಕ್ಕುಪತ್ರ ನೀಡಲು ಒತ್ತಾಯ



**ದಾವಣಗೆರೆ:** ಆವರಗೆರೆಯ ಹಳ್ಳದ ಖರಾಬು ಜಮೀನಿನಲ್ಲಿ ಮನೆಗಳನ್ನು ಕಟ್ಟಿಕೊಂಡಿರುವ ಬಡವರಿಗೆ ಹಕ್ಕುಪತ್ರವನ್ನು ನೀಡುವಂತೆ ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ (ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ) ಸಮಿತಿಯಿಂದ ಜಿಲ್ಲಾಡಳಿತ ಮುಂಭಾಗ ಪ್ರತಿಭಟನೆ ನಡೆಸಿ, ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಇದೇ ವೇಳೆ ಮಾತನಾಡಿದ ಸಮಿತಿಯ ಅಧ್ಯಕ್ಷ ಡಿ. ಹನುಮಂತಪ್ಪ, ನಗರದ ಆವರಗೆರೆ ಸರ್ವೆ.ನಂ 264, 265, 225, 110 ರ ಮಧ್ಯ ಇರುವ ಖರಾಬು ಜಮೀನಿನಲ್ಲಿ ಸುಮಾರು 7 ವರ್ಷಗಳಿಂದ 200-250 ಮನೆಗಳನ್ನು ನಿರ್ಮಿಸಿಕೊಂಡು ವಾಸವಾಗಿರುವ ಬಡಜನರಿಗೆ ಕಳೆದ 2021ರ ಮಾರ್ಚ್‌ನಲ್ಲಿ ಪಾಲಿಕೆಯಿಂದ ಯಾವುದೇ ನೋಟೀಸ್ ನೀಡದೆ ಅಲ್ಲಿನ ನಿವಾಸಿಗಳನ್ನು ಒಕ್ಕಲೆಬ್ಬಿಸಲಾಗಿದೆ ಎಂದು ಹರಿಹಾಯ್ದರು.

ಇಷ್ಟೇ ಅಲ್ಲದೇ ಕೆಲವೊಬ್ಬ ನಿರ್ಗತಿಕರ ಮೇಲೆ ಪ್ರಕರಣವನ್ನು ದಾಖಸಲಾಗಿದೆ. ನಿರಾಶ್ರಿತರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದಾಗ ಜಿಲ್ಲಾಧಿಕಾರಿಗಳು ಮುಂದಿನ ದಿನಗಳಲ್ಲಿ ವಸತಿ ಕಲ್ಪಿಸಿ ಕೊಡುವುದಾಗಿ ಭರವಸೆ ನಿಡಿದ್ದರು. ಆದ್ದರಿಂದ ನೊಂದ ನಿರಾಶ್ರಿತರು ಅಲ್ಲಿಯ ಪಕ್ಕದ ಜಮೀನು ಮತ್ತು ಇತರೆಯವರ ಜಮೀನಿನಲ್ಲಿ ತಾತ್ಕಲಿಕ ಮನೆಗಳನ್ನು ನಿರ್ಮಿಸಿಕೊಂಡು ಜೀವನ ನಡೆಸುತ್ತಿದ್ದು, ಇನ್ನು ಕೆಲವರು ಬಾಡಿಗೆ ಮನೆಗಳಲ್ಲಿ ವಾಸವಿದ್ದಾರೆ. ಆದ್ದರಿಂದ ಸರ್ಕಾರದ ಖರಾಬು ಜಮೀನಿನಲ್ಲಿ ಮನೆಗಳನ್ನು ನಿರ್ಮಿಸಿಕೊಂಡು ಜೀವನ ನಡೆಸಲು ಅವಕಾಶ ಮಾಡಿಕೊಟ್ಟು ಹಕ್ಕುಪತ್ರಗಳನ್ನು ನೀಡಬೇಕೆಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಕಾಳಪ್ಪ, ಎಂ. ಮಲ್ಲೇಶಪ್ಪ, ಶಾಂತ, ತಿಪ್ಪಣ್ಣ, ನವೀನ, ಮಂಜು, ಬಸಪ್ಪ, ಗಂಗಾಧರ, ಚಂದ್ರು, ವೆಂಕಟೇಶ್, ಜಯಮ್ಮ, ಮಾಲತಿ, ಲತಾ, ದುರುಗಮ್ಮ, ಕೆಂಚಮ್ಮ, ಮಂಜಮ್ಮ, ಸಂಗೀತ ಸೇರಿದಂತೆ ಮತ್ತಿತರರು ಇದ್ದರು.

# ಸಮಾಜದ ಶ್ರೇಷ್ಠತೆಗೆ ಶ್ರಮಿಸಿದ ಮಹಾನ್ ಯುಗ ಪುರುಷ ಸವಿತಾ ಮಹರ್ಷಿಗಳು

**ಚಿಕ್ಕಮಗಳೂರು: ಫೆ. 04:** ಸವಿತಾ ಮಹರ್ಷಿಗಳು ಸಮಾಜದ ಶ್ರೇಷ್ಠತೆಗೆ ಶ್ರಮಿಸಿದ ಮಹಾನ್ ಯುಗ ಪುರುಷ ಎಂದು ಶಾಸಕ ಹೆಚ್.ಡಿ. ತಮ್ಮಯ್ಯ ಅವರು ಹೇಳಿದ್ದಾರೆ.

ನಗರದ ಕುವೆಂಪು ಕಲಾ ಮಂದಿರದ ಹೇಮಾಂಗಣ ಸಭಾಂಗಣದಲ್ಲಿ ಜಿಲ್ಲಾಡಳಿತದ ವತಿಯಿಂದ ಏರ್ಪಡಿಸಲಾಗಿದ್ದ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಸವಿತಾ ಮಹರ್ಷಿಗಳು ಸಮಾಜಮುಖಿಯಾಗಿ ಬೆಳೆದು ದಾರಿದೀಪವಾಗಿದ್ದಾರೆ ಇಂತಹ ಮಹಾತ್ಮರ ಜಯಂತಿಗಳನ್ನು ಆಚರಿಸುವ ಮೂಲಕ ಸರ್ಕಾರ ಇವರ ಆದರ್ಶಗಳ ಹಾದಿಯಲ್ಲಿ ನಡೆಯಲು ನಮಗೆ ಬೆಳಕು ತೋರಿಸಿದೆ ಎಂದ ಅವರು ಸವಿತಾ ಸಮಾಜದ ಬಂಧುಗಳು ಮಹರ್ಷಿಗಳ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯಬೇಕು ಎಂದು ಹೇಳಿದರು.

ಸವಿತಾ ಸಮಾಜ ಹಿಂದುಳಿದ ಸಮಾಜವಾಗಿದ್ದು, ಸಮಾಜವು



ಸಂಘಟನೆಯಿಂದ ಸರಕಾರದ ಸೌಲಭ್ಯಗಳನ್ನು ಬಳಸಿಕೊಂಡು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಬೆಳೆಯಬೇಕು. ಜೊತೆಗೆ ಸಹಕಾರ ಸಂಘಗಳ ಮೂಲಕ, ಆರ್ಥಿಕ ಚಟುವಟಿಕೆಗಳ ಮೂಲಕ ಸಂಘವನ್ನು ಸ್ಥಾಪಿಸಿಕೊಂಡು ಮುಂದೇ ಬರಲು ಪ್ರಯತ್ನಿಸಬೇಕು. ಸವಿತಾ ಸಮಾಜಕ್ಕೆ ಜಾಗವನ್ನು ಮಂಜೂರು ಮಾಡಿಸಲು ಕ್ರಮಕೈಗೊಳ್ಳಲಾಗುವುದು ಎಂದರು.ಸಾಹಿತಿ ಬಿ. ತಿಪ್ಪೇರುದ್ರಪ್ಪ ಅವರು ಉಪನ್ಯಾಸ ನೀಡಿ ಪೌರಾಣಿಕ ವ್ಯಕ್ತಿಯಾದ ಸವಿತಾ ಮಹರ್ಷಿಯು ರಥ ಸಪ್ತಮಿಯ ದಿನ ಜನಿಸಿದರು ಎಂದ ಅವರು ಧಾರ್ಮಿಕವಾಗಿ ಶಿವನ ಬಲಗಣ್ಣಿನಿಂದ ಜನಿಸಿದವರೇ ಸವಿತಾ ಮಹರ್ಷಿ ಎಂಬ ಪ್ರತೀತ ಇದೆ ಸವಿತಾ ಸಮಾಜದವರು ಸೂರ್ಯ ವಂಶಕ್ಕೆ ಸೇರಿದವರೆಂದು ಹೇಳಿದರು. ಅವರು ಅಪಾರ ಜ್ಞಾನ ಭಂಡಾರ ಹೊಂದಿದ ಮಹರ್ಷಿಗಳು ನಾಲ್ಕನೇ ವೇದವಾದ ಸಾಮವೇದ ಕೃತಿ ರಚಿಸಿದ್ದಾರೆ ಎಂದು ಹೇಳಿದರು.

# ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ತಾಲ್ಲೂಕು ಅಗಸನಕಟ್ಟೆ ಗ್ರಾಮದ ವಾಸಿ
ಶಿವಪ್ಪರ ದಿ. ಸಿದ್ದಲಿಂಗಪ್ಪನವರ ಮಕ್ಕಳಾದ
ಶ್ರೀ ಎಸ್. ರೇವಣಸಿದ್ದಪ್ಪ ಮತ್ತು ಶ್ರೀ ಎಸ್ ಶಿವಮೂರ್ತಿ, ಮಾಜಿ ಪ್ರಧಾನರು

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 26.1.2025ರ ಭಾನುವಾರ ರಾತ್ರಿ 8.45ಕ್ಕೆ ನಮ್ಮ ಪೂಜ್ಯ ತಾಯಿಯವರಾದ
**ಶತಾಯುಷಿ ಶಿವಪ್ಪರ ಶ್ರೀಮತಿ ಬಸಮ್ಮ**
ಇವರು ಶಿವಾಧೀನರಾಧ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

## ಕೈಲಾಸ ಶಿವಗಣಾರಾಧನೆಯನ್ನು

ದಿನಾಂಕ : 5-2-2025 ನೇ ಬುಧವಾರ ಬೆಳಿಗ್ಗೆ 10-30 ಗಂಟೆಗೆ ದಾವಣಗೆರೆ ತಾ// ಅಗಸನಕಟ್ಟೆ ಗ್ರಾಮದ ಮೃತರ. ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

### -: ಇಂತಿ ದುಃಖತಪ್ತರು :-

- ಶ್ರೀಮತಿ ದ್ರಾಕ್ಷಾಯಣಮ್ಮ ಮತ್ತು ಶ್ರೀ ಎಸ್. ರೇವಣಸಿದ್ದಪ್ಪ ಮತ್ತು ಮಕ್ಕಳು, ಆಗಸಕಟ್ಟೆ
- ಶ್ರೀಮತಿ ಪಾರ್ವತಮ್ಮ, ಶ್ರೀ ಎಸ್. ಶಿವಮೂರ್ತಿ ಮತ್ತು ಮಕ್ಕಳು, ಅಗಸನಕಟ್ಟೆ
- ಶ್ರೀಮತಿ ಗಂಗಮ್ಮ ದಿ. ಶ್ರೀ ಎಸ್. ಬಸಪ್ಪನವರ ಮಕ್ಕಳು, ಅಗಸನಕಟ್ಟೆ
- ಶ್ರೀಮತಿ ಗುರುಸಿದ್ದಮ್ಮ ದಿ. ಶ್ರೀ ಕೆ.ಬಿ. ಸಿದ್ದಬಸಪ್ಪನವರ ಮಕ್ಕಳು, ಬೆಳವನೂರು
- ಶ್ರೀಮತಿ ಅನುಸೂಯಮ್ಮ ದಿ. ಶ್ರೀ ಚಂದ್ರಪ್ಪ ಮತ್ತು ಮಕ್ಕಳು, ಸೀಗೆಹಳ್ಳಿ
- ಶ್ರೀಮತಿ ಚನ್ನಬಸಮ್ಮ ಮತ್ತು ಶ್ರೀ ಕೆ.ಎಂ. ವಿಶ್ವನಾಥ ಮತ್ತು ಮಕ್ಕಳು, ಬಿ.ಕಲಪನಹಳ್ಳಿ
- ಶ್ರೀಮತಿ ಶಾರದಮ್ಮ ದಿ. ಶ್ರೀ ಸಿದ್ದಬಸಪ್ಪನವರ ಮಕ್ಕಳು, ಆನಗೋಡು
- ಶ್ರೀಮತಿ ಪಾರ್ವತಮ್ಮ, ಶ್ರೀ ಪರಮೇಶ್ವರಪ್ಪ ಮತ್ತು ಮಕ್ಕಳು, ಈಚಘಟ್ಟ
- ಶ್ರೀಮತಿ ನಾಗರತ್ನಮ್ಮ ಶ್ರೀ ಎನ್. ಬಿಷ್ಟನಗೌಡ್ರು ಮತ್ತು ಮಕ್ಕಳು, ಬಳಿಗನೂರು

ಶಿವಪ್ಪರ ವಂಶಸ್ಥರು, ಬಂಧು-ಮಿತ್ರರು, ಅಗಸನಕಟ್ಟೆ ಗ್ರಾಮಸ್ಥರು.

ಶ್ರೀ ನಂದಿ ಆಗ್ರೋ ಸೀಡ್ಸ್ ಕಾರ್ಪೋರೇಷನ್,
ಎ.ಪಿ.ಎಂ.ಸಿ ಯಾರ್ಡ್

ಶ್ರೀ ವೆಂಕಟೇಶ್ವರ ಆಗ್ರೋ ಏಜೆನ್ಸೀಸ್,
ಎ ಬ್ಲಾಕ್, ದಾವಣಗೆರೆ.

ಶ್ರೀ ಗುರುಬಸವ ಆಗ್ರೋ ಏಜೆನ್ಸೀಸ್,
ನರಸರಾಜ ರಸ್ತೆ, ದಾವಣಗೆರೆ.

ವಿಶೇಷ ಸೂಚನೆ :- ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಇಂದಿನ ರಾಶಿ ಭವಿಷ್ಯ

### ಮೇಷ ರಾಶಿ

ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಿ ಮತ್ತು ನಿಮ್ಮ ವ್ಯಾಯಾಮವನ್ನು ಕೈಬಿಡಬೇಡಿ. ನಿಮ್ಮ ತಾಯಿ ಅಥವಾ ತಂದೆಯ ಆರೋಗ್ಯಕ್ಕಾಗಿ ನೀವು ಇಂದು ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗಬಹುದು. ಇದು ನಿಮ್ಮ ಹಣಕಾಸಿನ ಸ್ಥಿತಿಯನ್ನು ಹದಗೆಡಿಸುತ್ತದೆ ಆದರೆ ಸಂಬಂಧವನ್ನು ಬಲಪಡಿಸುತ್ತದೆ. ನಿಮ್ಮ ಸಮಸ್ಯೆಗಳನ್ನು ಮರೆತು ಕುಟುಂಬದ ಸದಸ್ಯರೊಂದಿಗೆ ಒಳ್ಳೆಯ ಸಮಯ ಕಳೆಯುತ್ತೀರಿ.

### ವೃಷಭ ರಾಶಿ

ಮನರಂಜನೆ ಮತ್ತು ಮೋಜಿನ ಒಂದು ದಿನ. ಇಂದು, ನೀವು ಸಾಕಷ್ಟು ಸಕಾರಾತ್ಮಕತೆಯೊಂದಿಗೆ ಮನೆಯಿಂದ ಹೊರಬರುತ್ತೀರಿ, ಆದರೆ ಕೆಲವು ಅಮೂಲ್ಯ ವಸ್ತುವಿನ ಕಳ್ಳತನದಿಂದಾಗಿ, ನಿಮ್ಮ ಮನಸ್ಥಿತಿಗೆ ತೊಂದರೆಯಾಗಬಹುದು. ಇಂದು ಹಣದ ಬಗ್ಗೆ ಕುಟುಂಬ ಸದಸ್ಯರಲ್ಲಿ ಗೊಂದಲ ಉಂಟಾಗಬಹುದು. ಹಣಕಾಸಿನ ವಿಷಯದ ಬಗ್ಗೆ ನೀವು ಕುಟುಂಬದ ಎಲ್ಲ ಸದಸ್ಯರಿಗೆ ಸ್ಪಷ್ಟವಾಗಿರಲು ಸಲಹೆ ನೀಡಬೇಕು.

### ಮಿಥುನ ರಾಶಿ

ಆಹಾರದ ಸ್ವಾದ ಉಪ್ಪಿನಿಂದ ಬರುವಂತೆ ಅತೃಪ್ತಿಯಿದ್ದಾಗಲೇ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ. ನೀವು ಮನೆಯಿಂದ ಹೊರ ಇದ್ದು ಉದ್ಯೋಗ ಅಥವಾ ಅಧ್ಯಯನ ಮಾಡುತ್ತಿದ್ದರೆ, ನಿಮ್ಮ ಹಣ ಮತ್ತು ಸಮಯವನ್ನು ವ್ಯರ್ಥ ಮಾಡುವಂತಹ ಜನರಿಂದ ದೂರವಿರುವುದು ಕಲಿತುಕೊಳ್ಳಬೇಕು. ನಿಮ್ಮ ಸಂಗಾತಿಯ ಜೊತೆಗಿನ ಸಂಬಂಧ ನಿಮ್ಮ ಕಚೇರಿ ಕೆಲಸದ ಕಾರಣ ಹಾಳಾಗಬಹುದು. ಇಂದು ಪ್ರಣಯದ ಭಾವನೆಗಳಿಗೆ ಪ್ರತಿಕ್ರಿಯೆ ದೊರಕುತ್ತದೆ.

### ಕರ್ಕ ರಾಶಿ

ಸ್ನೇಹಿತರೊಂದಿಗಿನ ಸಂಜೆ ಆಹ್ಲಾದಕರವಾಗಿದ್ದರೂ ವಿಪರೀತ ತಿನ್ನುವುದು ಮತ್ತು ಹಾರ್ಡ್ ಡ್ರಿಂಕ್ ಗಳ ಬಗ್ಗೆ ಎಚ್ಚರಿಕೆಯಿಂದಿರಿ. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ. ಅದರೆ ಹಾಗೆ ಮಾಡಿದಲ್ಲಿ ನೀವು ವಿಷಾದಿಸುತ್ತೀರಿ. ಗೃಹ ಜೀವನ ಶಾಂತಿಯುತ ಮತ್ತು ಉತ್ತಮವಾಗಿರುತ್ತದೆ ಹೊಸ ಪ್ರೀತಿಯ ಸಂಪರ್ಕವನ್ನು ಹೊಂದುವ ಅವಕಾಶಗಳು ಬಲವಾಗಿದ್ದರೂ ವೈಯಕ್ತಿಕವಾದ ಮತ್ತು ಗೌಪ್ಯವಾದ ಮಾಹಿತಿಯನ್ನು ಬಹಿರಂಗಪಡಿಸಬೇಡಿ. ನಿಮ್ಮ ಕೆಲಸಕ್ಕೆ ಮೆಚ್ಚುಗೆ ದೊರಕಲಿದೆ.

### ಸಿಂಹ ರಾಶಿ

ಉತ್ತಮ ಆರೋಗ್ಯ ಏನಾದರೂ ಅಸಾಮಾನ್ಯವಾಗಿದ್ದನ್ನು ಸಾಧಿಸಲು ಸಾಧ್ಯವಾಗಿಸುವ ಒಂದು ವಿಶೇಷ ದಿನ. ನೀವು ನಿಮ್ಮ ಇಂದಿನ ದಿನವನ್ನು ಉತ್ತಮಗೊಳಿಸಲು ಕಳೆದ ದಿನಗಳಲ್ಲಿ ಹಣವನ್ನು ಹೂಡಿಕೆ ಮಾಡಿದ್ದರೆ, ಅದರ ಪ್ರಯೋಜನವನ್ನು ಇಂದು ನೀವು ಪಡೆಯಬಹುದು. ನಿಮ್ಮ ಜೀವನದಲ್ಲಿ ಒಂದು ಭವ್ಯವಾದ ಲಯವನ್ನು ರೂಪಿಸಿಕೊಳ್ಳಿ ಮತ್ತು ಶರಣಾಗತಿಯ ಮತ್ತು ಹೃದಯದಲ್ಲಿ ಪ್ರೀತಿಯ ಜೊತೆ ನೇರವಾಗಿ ಮತ್ತು ಕೃತಜ್ಞತೆಯಿಂದ ನಡೆಯುವ ಕಲೆಯ ಮೌಲ್ಯಗಳನ್ನು ತಿಳಿದುಕೊಳ್ಳಿ. ಇದು ನಿಮ್ಮ ಕೌಟುಂಬಿಕ ಜೀವನವನ್ನು ಹೆಚ್ಚು ಅರ್ಥಪೂರ್ಣವಾಗಿಸುತ್ತದೆ.

### ಕನ್ಯಾ ರಾಶಿ

ನಿಮ್ಮಲ್ಲಿ ಕೆಲವರು ಇದು ಇಂದು ಬಲವಂತವಾಗಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಬೇಕಾಗಬಹುದು ಹಾಗೂ ಇದು ನಿಮ್ಮನ್ನು ಉದ್ವೇಗಭರಿತರನ್ನಾಗಿಯೂ ಹಾಗೂ ಗಾಬರಿಯಿರುವವರನ್ನಾಗಿಯೂ ಮಾಡಬಹುದು. ಇಂದು ನೀವು ಒಳ್ಳೆಯ ಹಣ ಮಾಡುತ್ತೀರಿ – ಆದರೆ ವೆಚ್ಚಗಳಲ್ಲಿ ನಿಮಗೆ ಉಳಿಸಲು ಕಷ್ಟವಾಗಿಸುತ್ತದೆ. ಒಂದು ಕುಟುಂಬದ ಒಟ್ಟಾಗುವಿಕೆಯಲ್ಲಿ ನೀವೇ ಕೇಂದ್ರಬಿಂದುವಾಗಿರುತ್ತೀರಿ.

### ತುಲಾ ರಾಶಿ

ನೀವು ಹೇರಳ ಶಕ್ತಿಯನ್ನು ಹೊಂದಿರುತ್ತೀರಿ – ಆದರೆ ಕೆಲಸದ ಒತ್ತಡ ನಿಮ್ಮನ್ನು ಉದ್ವಿಗ್ನಗೊಳಿಸುವಂತೆ ತೋರುತ್ತದೆ. ನಿಮ್ಮ ಹಣವನ್ನು ಸಂಗ್ರಹಿಸಿದಾಗ ಮಾತ್ರ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ. ಇದನ್ನು ನೀವು ಚೆನ್ನಾಗಿ ಅರ್ಥಮಾಡಿಕೊಳ್ಳಿ ಇಲ್ಲದಿದ್ದರೆ ನೀವು ಮುಂಬರುವ ಸಮಯದಲ್ಲಿ ವಿಷಾದಿಸಬೇಕಾಗುತ್ತದೆ. ಇಂದು ನೀವು ಮನೆಯಲ್ಲಿ ಸೂಕ್ಷ್ಮ ಸಮಸ್ಯೆಯನ್ನು ಬಗೆಹರಿಸಲು ನಿಮ್ಮ ಬುದ್ಧಿವಂತಿಕೆ ಮತ್ತು ಪ್ರಭಾವವನ್ನು ಬಳಸಬೇಕಾಗುತ್ತದೆ.

### ವೃಶ್ಚಿಕ ರಾಶಿ

ನಿಮ್ಮ ಆಹಾರವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ ಮತ್ತು ಫಿಟ್ ಆಗಿ ಉಳಿಯಲು ವ್ಯಾಯಾಮ ಮಾಡಿ. ಇಂದು ನೀವು ಯಾವುದೇ ಅಜ್ಞಾತ ಮೂಲಗಳಿಂದ ಹಣವನ್ನು ಪಡೆಯಬಹುದು, ಇದರಿಂದ ನಿಮ್ಮ ಅನೇಕ ಆರ್ಥಿಕ ಸಮಸ್ಯೆಗಳು ದೂರವಾಗುತ್ತವೆ. ನಿಮಗೆ ಗೊತ್ತಿದ್ದ ಯಾರಾದರೂ ಹಣಕಾಸಿಗೆ ಸಂಬಂಧಿಸಿದ ವಿಷಯಗಳಿಗೆ ಅತಿಯಾಗಿ ಪ್ರತಿಕ್ರಿಯಿಸಬಹುದು, ಇದು ಮನೆಯಲ್ಲಿ ಆತಂಕದ ಕ್ಷಣಗಳು ತರುತ್ತದೆ. ಸಮಯ, ಕೆಲಸ, ಹಣ, ಸ್ನೇಹಿತರು, ಕುಟುಂಬ, ಬಂಧುಗಳು; ಎಲ್ಲವೂ ಒಂದು ಕಡೆ ಮತ್ತು ನಿಮ್ಮ ಸಂಗಾತಿಯ ಜೊತೆ ನೀವು ಇನ್ನೊಂದು ಕಡೆಗಿರುತ್ತೀರಿ.

### ಧನು ರಾಶಿ

ಬಸುರಿಯು ನೆಲದ ಮೇಲೆ ನಡೆದುಕೊಂಡು ಹೋಗುವಾಗ ವಿಶೇಷ ಕಾಳಜಿ ವಹಿಸಬೇಕು. ಇಂದು ನೀವು ಹಣಕ್ಕೆ ಸಂಬಂಧಿಸಿದ ಸಮಸ್ಯೆಯ ಕಾರಣದಿಂದ ತೊಂದರೆಗೊಳಗಾಗಬಹುದು. ಇದಕ್ಕಾಗಿ ನೀವು ನಿಮ್ಮ ಯಾವುದೇ ವಿಶ್ವಾಸಾರ್ಹರಿಂದ ಸಲಹೆಯನ್ನು ತೆಗೆದುಕೊಳ್ಳಬೇಕು. ಸ್ನೇಹಿತರು ನಿಮಗೆ ಬೆಂಬಲ ನೀಡಿದರೂ –ಆದರೆ ಮಾತುಗಳ ಬಗ್ಗೆ ಎಚ್ಚರದಿಂದಿರಿ ಪ್ರೀತಿಪಾತ್ರರಲ್ಲದೇ ನಿಮ್ಮ ಸಮಯ ಕೊಲ್ಲುವುದು ಕಷ್ಟ. ಶ್ರೇಷ್ಠ ಜನರೊಡನೆ ಸಂಬಂಧ ನಿಮ್ಮಲ್ಲಿ ಒಳ್ಳೆಯ ವಿಚಾರಗಳು ಮತ್ತು ಯೋಜನೆಗಳನ್ನು ತರುತ್ತದೆ.

### ಮಕರ ರಾಶಿ

ನಿಮ್ಮ ಪ್ರಚಂಡ ಪ್ರಯತ್ನ ಹಾಗೂ ಕುಟುಂಬದ ಸದಸ್ಯರ ಸಕಾಲಿಕ ಬೆಂಬಲ ಬಯಸಿದ ಫಲಿತಾಂಶಗಳು ತರುತ್ತದೆ. ಆದರೆ ಪ್ರಸ್ತುತ ಚೇತನವನ್ನು ಕಾಯ್ದುಕೊಳ್ಳಲು ಶ್ರಮಿಸುತ್ತಿರಿ. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ.

### ಕುಂಭ ರಾಶಿ

ನೀವು ಪರಿಸ್ಥಿತಿಯ ನಿಯಂತ್ರಣ ಹೊಂದುತ್ತಿದ್ದಂತೆ ನಿಮ್ಮ ಆತಂಕ ಕಣ್ಮರೆಯಾಗುತ್ತದೆ. ಇದು ಧೈರ್ಯದ ಮೊದಲ ಸ್ಪರ್ಶದಲ್ಲಿ ಕುಸಿದುಹೋಗುವ ಸಾಬೂನಿನ ಗುಳ್ಳೆಯಷ್ಟೇ ಗಟ್ಟಿಯೆಂದು ನೀವು ಅರ್ಥ ಮಾಡಿಕೊಳ್ಳುತ್ತೀರಿ. ಇಂದು ನೀವು ಒಳ್ಳೆಯ ಹಣ ಮಾಡುತ್ತೀರಿ – ಆದರೆ ವೆಚ್ಚಗಳಲ್ಲಿ ನಿಮಗೆ ಉಳಿಸಲು ಕಷ್ಟವಾಗಿಸುತ್ತದೆ. ಮನೆಯಲ್ಲಿ ಧರ್ಮಕಾರ್ಯಗಳನ್ನು ನಡೆಸಲಾಗುವುದು. ನಿಮ್ಮ ಗೆಳತಿ ನಿಮಗೆ ಮೋಸ ಮಾಡಬಹುದು.

### ಮೀನ ರಾಶಿ

ತುಂಬಾ ಚಿಂತೆ ಮತ್ತು ಒತ್ತಡ ನಿಮ್ಮ ಆರೋಗ್ಯವನ್ನು ನಾಶಮಾಡಬಹುದು. ನೀವು ಮಾನಸಿಕ ಸ್ಪಷ್ಟತೆಯನ್ನು ಕಾಯ್ದುಕೊಳ್ಳಲು ಗೊಂದಲ ಮತ್ತು ಹತಾಶೆಯನ್ನು ತಡೆಗಟ್ಟಬೇಕು. ಕೆಲವರಿಗೆ ಪ್ರಯಾಣದ ಗಡಿಬಿಡಿ ಮತ್ತು ಒತ್ತಡದಿಂದ ಕೂಡಿರುತ್ತವೆ – ಆದರೆ ಆರ್ಥಿಕವಾಗಿ ಲಾಭದಾಯಕವಾಗಿರುತ್ತವೆ. ನಿಮ್ಮ ಕುಟುಂಬದ ಸದಸ್ಯರ ಭಾವನೆಗಳನ್ನು ನೋಯಿಸುವುದನ್ನು ತಪ್ಪಿಸುವ ಮೂಲಕ ನಿಮ್ಮ ಕೋಪವನ್ನುನಿಯಂತ್ರಿಸಿ.

# ಉತ್ತಮ ಗುಣ ಬೆಳೆಸಿಕೊಂಡು ಸ್ವಾಭಿಮಾನಿಗಳಾಗಿ ಬದುಕುತ್ತೇವೆಂಬ ಗಟ್ಟಿ ನಿರ್ಧಾರದ ಕ್ರಾಂತಿ ಆಗಬೇಕು: ಜಿ. ಬಿ. ವಿನಯ್ ಕುಮಾರ್



**ದಾವಣಗೆರೆ:** ಕೆಟ್ಟ ವ್ಯವಸ್ಥೆ ವಿರುದ್ಧ ದಂಗೆ ಏಳುವುದು ಕ್ರಾಂತಿ ಅಲ್ಲ. ನಮ್ಮೊಳಗೆ ಧೈರ್ಯ, ಉತ್ತಮ ಗುಣಗಳು, ಗಟ್ಟಿ ನಿರ್ಧಾರ ತೆಗೆದುಕೊಳ್ಳುವ, ಸ್ವಾಭಿಮಾನಿಗಳಾಗಿ ಬದುಕುತ್ತೇವೆಂಬ ನಿಲುವು ಹೊಂದುವ ಕ್ರಾಂತಿ ಆಗಬೇಕು. ಅರಿವು ಮತ್ತು ಜಾಗೃತಿ ಬೆಳೆಸಿಕೊಳ್ಳುವ ಕ್ರಾಂತಿ ಆಗಬೇಕಿದೆ ಎಂದು ಇನ್ ಸೈಟ್ಸ್ ಐಎಎಸ್ ಸಂಸ್ಥೆ ಸಂಸ್ಥಾಪಕರೂ ಆದ ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ. ಬಿ. ವಿನಯ್ ಕುಮಾರ್ ಹೇಳಿದರು.

ಹೊನ್ನಾಳಿ ಪಟ್ಟಣದ ಹಿರೇಕಲ್ಮಠದ ಸಮುದಾಯ ಭವನದಲ್ಲಿ ಸ್ವಾಭಿಮಾನಿ ಬಳಗವು ಶ್ರೀ ಚನ್ನಪ್ಪ ಸ್ವಾಮಿ ಜನಕಲ್ಯಾಣ ಟ್ರಸ್ಟ್ ಸಹಯೋಗದಲ್ಲಿ ಆಯೋಜಿಸಿದ್ದ ಪಿಯುಸಿ, ಡಿಗ್ರಿ, ಐಟಿಐ ಹಾಗೂ ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ ದಿಕ್ಸೂಚಿ ಕಾರ್ಯಾಗಾರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಜ್ಞಾನದ ರೂಪದಲ್ಲಿ ಹೆಚ್ಚಾಗಿ ತಿಳಿದುಕೊಳ್ಳಿ. ಉತ್ತಮ ವ್ಯಕ್ತಿತ್ವ ಬೆಳೆಸಿಕೊಂಡು ಹ ತೋ ೀ ಟಿ೦ು ಲ್ಲಿ ಟ್ಟು ಕೊ ೦ ಡಾ ಗ ಸಮಾಜದಲ್ಲಿರುವ ದೊಡ್ಡ ದೊಡ್ಡ ವ್ಯಕ್ತಿಗಳು, ಶ್ರೀಮಂತರು, ಖ್ಯಾತನಾಮರು, ಅಧಿಕಾರದಲ್ಲಿರುವವರು ನಿಮಗೆ ಅವಕಾಶ ಕಲ್ಪಿಸುತ್ತಾರೆ. ಬಡತನ ಇದೆ, ಬೆಂಬಲ ಇಲ್ಲ. ಹಣವಿಲ್ಲ ಎಂದು ಕೊರಗಬೇಡಿ. ನಿಮ್ಮೊಂದಿಗೆ ಯಾರಾದರೂ ಸಹಾಯಕ್ಕೆ ಬಂದೇ ಬರುತ್ತಾರೆ. ನೀವೆಲ್ಲರೂ ಮನಸ್ಸು ಭವಿಷ್ಯದಲ್ಲಿ ಅಂಬೇಡ್ಕರ್ ರಂತೆ ಸಾಧಕರಾಗಬಹುದು ಎಂದು ಕಿವಿಮಾತು ಹೇಳಿದರು.

ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅನುಭವಿಸಿದ ನೋವು, ಯಾತನೆ, ಅಸ್ಪೃಶ್ಯತೆ ಸೇರಿದಂತೆ ಎಲ್ಲಾ ವಿಚಾರಗಳು ಓದಿ ತಿಳಿದಿದ್ದೇವೆ. ಇಂದಿನ ದಿನಮಾನಗಳಲ್ಲಿ ನಮಗೆ ಸ್ವಾತಂತ್ರ್ಯ ಸಿಕ್ಕರೂ ಅಂಬೇಡ್ಕರ್ ರಂಥ ಮಹನೀಯರು ಅನುಭವಿಸಿದ ಕಷ್ಟಗಳು ದೂರವಾಗಿಲ್ಲ ಎಂದೆನಿಸುತ್ತದೆ. ಸ್ವಾತಂತ್ರ್ಯ ಸಿಕ್ಕರೂ ಅಸಮಾನತೆ ಇಂದಿಗೂ ತಾಂಡವವಾಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇನ್ ಸೈಟ್ಸ್ ಐಎಎಸ್ ಸಂಸ್ಥೆಯು ಇಂದು ದೇಶದಲ್ಲಿ ಗುರುತಿಸಿಕೊಳ್ಳುವಂತೆ ಆಗಿದೆ. ದೆಹಲಿ, ಹೈದರಾಬಾದ್, ಜಮ್ಮುಕಾಶ್ಮೀರದ ಶ್ರೀನಗರ, ಬೆಂಗಳೂರು ಹಾಗೂ ದಾವಣಗೆರೆಯಲ್ಲಿಯೂ ತನ್ನ ಶಾಖೆ ಹೊಂದಿದೆ. ಲಕ್ಷಾಂತರ ವಿದ್ಯಾರ್ಥಿಗಳೊಂದಿಗೆ ಒಡನಾಟ ಇದೆ. ಸಾವಿರಾರು ವಿದ್ಯಾರ್ಥಿಗಳು ಐಎಎಸ್ ಟಾಪರ್ ಆಗಿದ್ದಾರೆ. 2016ರಲ್ಲಿ ದೇಶಕ್ಕೆ ರ್ಯಾಂಕ್ ಬಂದ ಕೋಲಾರದ ನಂದಿನಿ ಈಗ ಮಂಡ್ಯ ಜಿಲ್ಲಾ ಪಂಚಾಯಿಸಿ ಸಿಇಒ ಆಗಿದ್ದಾರೆ. ಕಷ್ಟಪಟ್ಟು ಸಾಧಿಸಲೇಬೇಕೆಂಬ ಹಠ ತೊಟ್ಟರೆ ಯಾವುದೂ ಅಸಾಧ್ಯವಲ್ಲ ಎಂದು ಅಭಿಪ್ರಾಯಪಟ್ಟರು.

ಹೊನ್ನಾಳಿಯಲ್ಲಿ ನಮ್ಮ ನಡೆ ಸರ್ಕಾರಿ ಶಾಲೆಗಳ ಕಡೆ ಅಭಿಯಾನ ನಡೆಸಿದ್ದೇವೆ. 25ರಿಂದ 30 ಶಾಲೆಗಳಿಗೆ ಭೇಟಿ ನೀಡಿ ವಾಸ್ತವ ಪರಿಸ್ಥಿತಿ ಪರಾಮರ್ಶಿಸಿ ಅಧ್ಯಯನ ಮಾಡಿದ್ದೇವೆ. ಪ್ರತಿಯೊಂದು ಶಾಲೆಗೆ ಹೋದಾಗ ಕಾರ್ಯನಿರತ ಗ್ರಂಥಾಲಯ, ಶೌಚಾಲಯಗಳು ಇಲ್ಲದಿರುವುದು ಕಂಡು ಬಂದಿದೆ. ನಾಲ್ಕೈದು ಶಾಲೆಗಳನ್ನು ಬಿಟ್ಟರೆ ಉಳಿದ ಶಾಲೆಗಳಲ್ಲಿ ಆಟದ ಮೈದಾನಗಳೇ ಇಲ್ಲ. ಕುಳಿತುಕೊಳ್ಳಲು ಡೆಸ್ಕ್ ಗಳಿಲ್ಲ. ಎಷ್ಟೋ ವಿದ್ಯಾರ್ಥಿಗಳ ಕಾಲಲ್ಲಿ ಚಪ್ಪಲಿ, ಶೂ ಇರಲಿಲ್ಲ. ಸಮವಸ್ತ್ರವೂ ಹರಿದು ಹೋಗಿತ್ತು. ಸರ್ಕಾರಿ ಶಾಲೆಗಳ ಪರಿಸ್ಥಿತಿ ಈ ಮಟ್ಟಕ್ಕೆ ಬಂದು ತಲುಪಿದೆ. ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಮೂರನೇ ತರಗತಿಯ ಇಂಗ್ಲೀಷ್ ಪಠ್ಯ ಓದಲು ಬರಲ್ಲ. ಏಳನೇ ತರಗತಿ ವಿದ್ಯಾರ್ಥಿಗಳಿಗೆ ಕನ್ನಡ ಓದಲು ಬರಲ್ಲ ಎಂಬ ವರದಿ ಬಂದಿದೆ. ಯಾವ ರೀತಿಯ ಶಿಕ್ಷಣ ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳಲ್ಲಿ ಸಿಗುತ್ತಿದೆ ಎಂಬುದು ಜ್ವಲಂತ ಉದಾಹರಣೆ ಎಂದು ಹೇಳಿದರು.

ಲಕ್ಷಾಂತರ ಕೋಟಿ ರೂಪಾಯಿ ಹೊಂದಿರುವ ಶ್ರೀಮಂತರು ಹಾಗೂ ಬಡವನು ಹಾಕುವ ವೋಟಿಗೆ ರಾಜಕೀಯದಲ್ಲಿ ಸಮಾನಾದ ಮೌಲ್ಯವಿದೆ. ಇದು ಭಾರತದ ಸಂವಿಧಾನ ನಮಗೆ ಕೊಟ್ಟಿರುವ ಹಕ್ಕು. ನಮ್ಮಿಂದ ಆರಿಸಿ ಹೋಗುವವರು ಕೊಟ್ಟ ಭರವಸೆ, ತಮ್ಮ ಕರ್ತವ್ಯ ಮರೆಯುತ್ತಿದ್ದಾರೆ. ಜನಪರ, ಶೈಕ್ಷಣಿಕವಾಗಿ ಕೆಲಸ ಮಾಡದೇ ಮರೆಯುತ್ತಿದ್ದಾರೆ. ಶ್ರೀಮಂತರಿಗೆ ಸಿಗುವ ಸೌಲಭ್ಯಗಳು ಬಡವರ ಮಕ್ಕಳಿಗೂ ಸಿಗುವಂತಾಗಬೇಕು ಎಂಬುದು ಅವರ ಮನಸ್ಸಿನಲ್ಲಿ ಬರಬೇಕು ಎಂದು ಅಭಿಪ್ರಾಯಪಟ್ಟರು.

ಹಿರೇಕಲ್ಮಠದ ಡಾ. ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಸ್ವಾಭಿಮಾನಿ ಬಳಗದ ರಾಜ್ಯ ಉಪಾಧ್ಯಕ್ಷ ಶಿವಕುಮಾರ್ ಶೆಟ್ಟರ್, ರಾಜ್ಯ ಪ್ರಧಾನ ಕಾರ್ಯದರ್ಶಿ ರಾಜು ಮೌರ್ಯ, ರಾಜ್ಯ ಸಂಘಟನಾ ಕಾರ್ಯದರ್ಶಿ ವಿರೂಪಾಕ್ಷಪ್ಪ ಪಂಡಿತ್, ರಾಜಣ್ಣ ಕನಗಣ್ಣನವರ್, ಹಿರಿಯರಾದ ಶಿವಕುಮಾರ್ ಸಂಬಳಿ, ರಾಜ್ಯ ಸಂಚಾಲಕ ಅಯ್ಯಣ್ಣ ಹುಲ್ಕಲ್, ಸ್ವಾಭಿಮಾನಿ ಬಳಗದ ಸದಸ್ಯರು, ಪದಾಧಿಕಾರಿಗಳಾದ ರಮೇಶ್ ಮೈಸೂರು, ಧನುಷ್ ಕತ್ತಲಗೆರೆ, ನಾಗರಾಜ್ ಹಲವರು ಉಪಸ್ಥಿತರಿದ್ದರು.

ದಿಕ್ಸೂಚಿ ಕಾರ್ಯಕ್ರಮದಲ್ಲಿ ನೂರಾರು ಸಂಖ್ಯೆಯಲ್ಲಿ ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು. ಅರ್ಥಪೂರ್ಣ ಮಾಹಿತಿ ಹಾಗೂ ಸಂವಾದ ನಡೆಯಿತು. ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಜಿ. ಬಿ. ವಿನಯ್ ಕುಮಾರ್ ಅವರು ಉತ್ತರಿಸಿದರು.

## ಸಾಹಿತಿ ಕಲೀಂ ಭಾಷಾ ನಿಧನಕ್ಕೆ ಎಐಎಂಎಸ್‌ಎಸ್ ಸಂತಾಪ



**ದಾವಣಗೆರೆ:** ಹರಿಹರದ ಸಾಹಿತಿಗಳಾದ ಕಲೀಂ ಬಾಷರವರ ಅಗಲಿಕೆ ವಿಷಯವನ್ನು ಕೇಳಿ ಆಘಾತವುಂಟಾಗಿದೆ ಎಂದು ಎಐಎಂಎಸ್ ಎಸ್ ಕಂಬನಿ ಮಿಡಿದಿದೆ.

ಶ್ರೀಯುತರು ಎಐಎಂಎಸ್ ಎಸ್ ನ ರಾಜ್ಯ ಮಹಿಳಾ ಸಮ್ಮೇಳನದ ಸ್ವಾಗತ ಸಮಿತಿಯ ಸದಸ್ಯರಾಗಿದ್ದರು ಹಾಗೂ ಸಮ್ಮೇಳನದಲ್ಲಿ ಓರ್ವ ಮುಖ್ಯ ಭಾಷಣಕಾರರಾಗಿ ಭಾಗವಹಿಸಿದ್ದರು. ಇವರು ಸಾಕಷ್ಟು ಸಾಮಾಜಿಕ ಹೋರಾಟಗಳಲ್ಲಿ ಮತ್ತು ಪ್ರಗತಿಪರ ಚಟುವಟಿಕೆಗಳಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡವರು.

ಇವರ ಅಗಲಿಕೆಯಿಂದ ಸಾಮಾಜಿಕ ಹೋರಾಟಕ್ಕೆ ದೊಡ್ಡ ನಷ್ಟ ಸಂಭವಿಸಿದೆ. ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿ ಅವರ ಕುಟುಂಬಕ್ಕೆ ದೊರೆಯಲಿ ಎಂದು ಜಿಲ್ಲಾ ಸಮಿತಿಯು ಸಂತಾಪ ಸೂಚಿಸುತ್ತದೆ ಎಂದು ತಿಳಿಸಿದೆ.

## ಕಲಾಕುಂಚದಿಂದ ರಾಜ್ಯ ಮಟ್ಟದ ಕಾರ್ಡಿನಲ್ಲಿ ಕಥೆ ಉಚಿತ ಸ್ಪರ್ಧೆಯ ಫಲಿತಾಂಶ

**ದಾವಣಗೆರೆ:** ದಾವಣಗೆರೆಯ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯು ಪ್ರತೀ ವರ್ಷದಂತೆ ಈ ವರ್ಷವೂ 50 ಪೈಸೆ ಅಂಚೆ ಕಾರ್ಡಿನಲ್ಲಿ ರಾಜ್ಯ ಮಟ್ಟದ ಉಚಿತವಾಗಿ ಕಾರ್ಡಿನಲ್ಲಿ ಕಥೆ ಸ್ಪರ್ಧೆ ಹಮ್ಮಿಕೊಂಡಿದ್ದು ಫಲಿತಾಂಶ ಈ ಕೆಳಗಿದೆ ಎಂದು ತೀರ್ಪುಗಾರರಲ್ಲಿ ಒಬ್ಬರಾದ ಹೇಮಾ ಶಾಂತಪ್ಪ ಪೂಜಾರಿ ತಿಳಿಸಿದ್ದಾರೆ.

ಪ್ರಥಮ ಬಹುಮಾನ ಬೆಂಗಳೂರಿನ ಶ್ರೀಮತಿ ಭಾರ್ಗವಿ ಪಿ, ದ್ವಿತೀಯ ಬಹುಮಾನ ಬೆಂಗಳೂರಿನ ಉಮೇಶ್ ಸಿ.ಎನ್. ತೃತೀಯ ಬಹುಮಾನ ಬೆಂಗಳೂರಿನ ಸಂಜಯ್ ಹೆಚ್.ಪಾಟೀಲ್, ಸಮಾಧಾನಕರ ಬಹುಮಾನಗಳು ಉಡುಪಿ ಜಿಲ್ಲೆಯ ಕುತ್ಪಾಡಿಯ ಶ್ರೀಮತಿ ಸರಿತಾ ಅಂಬರೀಶ್ ಭಂಡಾರಿ, ದಾವಣಗೆರೆಯ ಶ್ರೀಮತಿ ಕುಸುಮಾ ಲೋಕೇಶ್ ಪಡೆದಿರುತ್ತಾರೆ.

ಸ್ಪರ್ಧೆಯ ನಿಯಮದಂತೆ ಯಾವುದೇ ಸಭೆ, ಸಮಾರಂಭ ಇಲ್ಲದೇ ಬಹುಮಾನ ವಿಜೇತರ ವ್ಯಾಟ್ಸಪ್‌ಗೆ ಅವರವರ ಫಲಿತಾಂಶ ಅಭಿನಂದನಾ ಪತ್ರ ಕಳಿಸಲಾಗುತ್ತದೆ ಎಂದು ಕಲಾಕುಂಚದ ಸಂಸ್ಥಾಪಕರಾದ ಸಾಲಿಗ್ರಾಮ ಗಣೇಶ್ ಶೆಣೈ ಪ್ರಕಟಿಸಿದ್ದಾರೆ.

## ಬೆಳ್ಳುಳ್ಳಿ ಕೊಟ್ರೇಶ್ ಅವರಿಗೆ ಪಿಎಚ್ಡಿ



**ದಾವಣಗೆರೆ :** ದಾವಣಗೆರೆ ವಿದ್ಯಾನಗರ ವಾಸಿ ಶ್ರೀ ಬೆಳ್ಳುಳ್ಳಿ ಕೊಟ್ರೇಶ್ ರವರು ಕುಪ್ಪಂನ ದ್ರಾವಿಡಯಾನ ವಿ ಶ್ವ ವಿ ದ್ಯಾ ನಿ ಲ ಂ ು ದ ಅರ್ಥಶಾಸ್ತ್ರ ವಿಭಾಗಕ್ಕೆ ಸಲ್ಲಿಸಿದ ಮಾರ್ಕೆಟಿಂಗ್ ಆಫ್ ಕಮರ್ಷಿಯಲ್ ಕ್ರಾಪ್ಸ್ ಇನ್ ದಾವಣಗೆರೆ ಡಿಸ್ಟ್ರಿಕ್ಟ್– ಎ ಕ್ರಿಟಿಕಲ್ ಇವಾಲುಯೇಶನ್. ಎಂಬ ಮಹಾ ಪ್ರಬಂಧವನ್ನು ಪರಿಗಣಿಸಿ ಪಿ ಎಚ್ ಡಿ ಪದವಿಯನ್ನು ನೀಡಿರುತ್ತದೆ. ಬೆಳ್ಳುಳ್ಳಿ ಕೊಟ್ರೇಶ್ ಅವರು ಹುಬ್ಬಳ್ಳಿಯ ನೆಹರು ಕಾಲೇಜ್ ಮತ್ತು ಸ್ನಾತಕೋತ್ತರ ಕೇಂದ್ರದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ ರೇವಣಸಿದ್ದಯ್ಯ ಅವರ ಮಾರ್ಗದರ್ಶನದಲ್ಲಿ ಮಹಾ ಪ್ರಬಂಧವನ್ನು ಸಲ್ಲಿಸಿದರು. ಪ್ರಸ್ತುತ ಬೆಳ್ಳುಳ್ಳಿ ಕೊಟ್ರೇಶ್ ರವರು ರಾಣೇಬೆನ್ನೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಹ ಪ್ರಾಧ್ಯಾಪಕರಾಗಿ ಅರ್ಥಶಾಸ್ತ್ರ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

## ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆ

**ದಾವಣಗೆರೆ :** ಹರಿಹರ ತಾಲ್ಲೂಕು ರಾಜನಹಳ್ಳಿಯಲ್ಲಿ ಫೆ.8 ಮತ್ತು 9 ರಂದು ನಡೆಯುವ 7ನೇ ವರ್ಷದ ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜನವರಿ 28 ರಂದು ಮಧ್ಯಾಹ್ನ 12 ಗಂಟೆಗೆ ರಾಜನಹಳ್ಳಿಯ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ಆಯೋಜಿಸಲಾಗಿದೆ ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಪರಿಶಿಷ್ಟ 12 12 ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

## ಅವಧಿ ವಿಸ್ತರಣೆ

**ದಾವಣಗೆರೆ:** ಪ್ರಸಕ್ತ ಸಾಲಿನ ಡಿ.ದೇವರಾಜು ಅರಸು ವಿದೇಶಿ ವ್ಯಾಸಂಗ ವೇತನಕ್ಕಾಗಿ ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳಿಂದ ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಫೆಬ್ರವರಿ 5 ರವರೆಗೆ ವಿಸ್ತರಿಸಲಾಗಿದೆ ಎಂದು ಬಿಸಿಎಂ ಅಧಿಕಾರಿ ಗಾಯತ್ರಿ ತಿಳಿಸಿದ್ದಾರೆ.

# ಕ್ರೀಡಾ ಕೂಟದಿಂದ ಸಮಾಜದಲ್ಲಿ ಸೌಹಾರ್ದತೆ ವೃದ್ಧಿ



**ಚಿಕ್ಕಮಗಳೂರು:** ಕ್ರೀಡಾಕೂಟದಲ್ಲಿ ಭಾಗವಹಿಸುವುದರಿಂದ ಕ್ರಿಯಾಶೀಲತೆಯ ಜೊತೆಗೆ ಸಮಾಜದಲ್ಲಿ ಇತರರೊಂದಿಗೆ ಪರಸ್ಪರ ಸೌಹಾರ್ದತೆ ಹೆಚ್ಚಿಸುತ್ತದೆ ಎಂದು ವಾಣಿಜ್ಯ ತೆರಿಗೆ ಆಯುಕ್ತರಾದ ಟಿ.ಕೆ ಸುನಿಲ್ ಕುಮಾರ್ ಹೇಳಿದರು.

ಜಿಲ್ಲಾ ಆದಾಯ ಮತ್ತು ತೆರಿಗೆ ಸಲಹೆಗಾರರ ಸಂಘದವತಿಯಿಂದ ನಗರದ ಎಐಟಿ ಕಾಲೇಜಿನಬಿಜಿಎಸ್ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ದೈಹಿಕ ಮತ್ತು ಮಾನಸಿಕ ಅರೋಗ್ಯವನ್ನು ಸುಸ್ಥಿತಿಯಲ್ಲಿರಿಸಿಕೊಳ್ಳಲು ಕ್ರೀಡೆಯು ಉತ್ತಮ ಮಾರ್ಗವಾಗಿದೆ ಪ್ರತಿಯೊಬ್ಬರೂ ಕ್ರೀಡಾ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಆರೋಗ್ಯಯುತ ಜೀವನ ನಿರ್ವಹಿಸಿ ಎಂದರು.

ಆದಾಯ ತೆರಿಗೆ ಅಧಿಕಾರಿ ಕೆ.ಯು ಪ್ರವೀಣ್‌ಮಾತನಾಡಿ ಅಧಿಕಾರಿಗಳು ಕೆಲಸದ ಒತ್ತಡದಿಂದ ಹೊರಬರಲು ಪ್ರತಿನಿತ್ಯ ಕ್ರೀಡಾಭ್ಯಾಸ ಮಾಡಬೇಕು ಕ್ರೀಡೆಯಲ್ಲಿ ಗೆಲುವು ಸೋಲು ಮುಖ್ಯವಲ್ಲ ಭಾಗವಿಹಿಸುವಿಕೆ ಮುಖ್ಯ ಎಂದರು.ಜಿಲ್ಲಾ ಆದಾಯ ಮತ್ತು ತೆರಿಗೆ ಸಲಹೆಗಾರರ ಸಂಘದ ಅಧ್ಯಕ್ಷೆ ಶ್ಯಾಮಲಾ ಎಂ ರಾವ್‌ಮಾತನಾಡಿ ಕ್ರೀಡೆಯಿಂದ ದೇಹಮತ್ತುಮನಸ್ಸನ್ನುಸಧೃಡವಾಗಿರಿಸಿಕೊಂಡು ಆರೋಗ್ಯವಂತರಾಗಿರಬಹುದು. ಆಡಿಟರ್ಸ್ ಅಸೋಶಿಯೆಷನ್ ವತಿಯಿಂದ ಈ ಕ್ರೀಡಾಕೂಟವನ್ನು ಆಯೋಜಿಸಲಾಗಿದ್ದುಕ್ರೀಡಾಪಟುಗಳ ಉತ್ಸಾಹ ಮತ್ತು

ಭಾಗವಹಿಸುವಿಕೆಯು ಇನ್ನು ಹೆಚ್ಚಿನ ಪಂದ್ಯಾವಳಿಗಳನ್ನು ಆಯೋಜಿಸಲು ಪ್ರೇರೇಪಿಸುತ್ತದೆ ಎಂದರು. ಈ ಸಂಧರ್ಭದಲ್ಲಿ ಸಂಘದ ಕಾರ್ಯದರ್ಶಿ ಎಂ.ಎನ್ ಮಂಜುನಾಥ್, ಖಜಾಂಚಿಗಳಾದ ಆಡಿಟರ್ ರವಿ, ಆದಾಯ ತೆರಿಗೆ ಅಧಿಕಾರಿಗಳಾದ ದೀಪಕ್, ಚಂದ್ರು, ವಿನಿತ್ ಇತರರು ಉಪಸ್ಥಿತರಿದ್ದರು.


## ಗ್ರಾಮ ಪಂಚಾಯಿತಿ ಕಾರ್ಯಾಲಯ ಪಲ್ಲಾಗಟ್ಟೆ

ಕ್ರ.ಸಂ.ಗ್ರಾ.ಪಂ.ಗು/ಪ/ಪ್ರೋ/1/2024-25 ದಿನಾಂಕ : 03-02-2025

### ಇ-ಪ್ರಕ್ಯೂರ್ ಮೆಂಟ್ ಮೂಲಕ ಟೆಂಡರ್ ಪ್ರಕಟಣೆ

ಪಲ್ಲಾಗಟ್ಟೆ ಗ್ರಾಮ ಪಂಚಾಯಿತಿಯಲ್ಲಿ ಟೆಂಡರ್‌ನಲ್ಲಿ ಷರತ್ತುಗಳ ಪ್ರಕಾರ 2024-25ನೇ ಸಾಲಿನ ಪಲ್ಲಾಗಟ್ಟೆ ಗ್ರಾಮ ಪಂಚಾಯಿತಿಯ 15ನೇ ಹಣಕಾಸು ಯೋಜನೆಯಡಿ ಪಲ್ಲಾಗಟ್ಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಅಗತ್ಯ ಕುಡಿಯುವ ನೀರಿನ ಸಾಮಗ್ರಿ ಖರೀದಿ/ಕು.ನೀರಿನ ಮೊ.ಪಂಪ್.ದುರಸ್ಥಿಗಾಗಿ ಒಟ್ಟು ಅಂದಾಜು ಮೊತ್ತ: 7,97,740.00 ಲಕ್ಷ ಗಳಿಗೆ ಕೆ.ಟಿ.ಪಿ.ಪಿ ನಿಯಾಮಾನುಸಾರ ಇ-ಪ್ರಕೂರ್ ಮೆಂಟ್ ಮೂಲಕ ಟೆಂಡರ್ ಗಾಗಿ ಅರ್ಹ ಟೆಂಡರ್‌ದಾರರು/ಸಂಸ್ಥೆಗಳು ಭರ್ತಿ ಮಾಡಿದ ಟೆಂಡರ್ ಗಳನ್ನು ಈ ಕೆಳಕಂಡಂತೆ ಆಹ್ವಾಅನಿಸಲಾಗಿದ್ದು (ಟೆಂಡರ್ ಸಂಸ್ಥೆ ಸಂಖ್ಯೆ RDPR/2024-25/SE2131, RDPR/2024-25/IND7149, RDPR/2024-25/IND7150)ಸದರಿ ಟೆಂಡರ್ ಗೆ ಸಂಬಂದಿಸಿದ ದಾಖಲೆಗಳನ್ನು ಇ-ಪ್ರಕ್ಯೂರ್ ಮೆಂಟ್ ವೆಬ್ ಸೈಟ್ ವೆಬ್ ಸೈಟ್ (wwwktpp.karnatka.gov.in) ಇಂದ ದಿನಾಂಕ: 03-02-2025 ರಿಂದ 11-02-2025 ಸಾಯಂಕಾಲ 5.00 ಗಂಟೆಯೊಳಗೆ ಡೌನ್ ಲೋಡ್ ಮಾಡಿಕೊಂಡು ದಿನಾಂಕ; ಸಂಜೆ 5 ಗಂಟೆಯ ವರೆಗೆ ಇ-ಟೆಂಡರ್‌ನ್ನು ಸಲ್ಲಿಸಬಹುದು ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಪಲ್ಲಾಗಟ್ಟೆ ಗ್ರಾಮ ಪಂಚಾಯಿತಿ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

**ಟೆಂಡರ್ ವೇಳಾಪಟ್ಟಿ**

| | | |
|---|---|---|
| 1 | ಖಾಲಿ ಟೆಂಡರ್ ಅರ್ಜಿಗಳನ್ನು (ಅನುಬಂಧ-1ನ್ನು ಮತ್ತು ಅನುಬಂಧ-2ನ್ನು)ಇ-ಪ್ರಕ್ಯೂರ್‌ಮೆಂಟ್ ಮೂಲಕ ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ ಮತ್ತು ಸಮಯ | ದಿನಾಂಕ:03-02-2025ರಿಂದ 11-02-2025 ಸಾಯಂಕಾಲ5-30 ಗಂಟೆಯೊಳಗೆ |
| 2 | ಇ-ಪೋರ್ಟನಲ್ಲಿ ಟೆಂಡರ್ ನ್ನು ಇಂಧೀಕರಿಸಲು ಕೊನೆಯ ದಿನಾಂಕ | ದಿನಾಂಕ: 11-02-2025 ರಿಂದ ಸಾಯಂಕಾಲ 5-30 ಗಂಟೆಯೊಳಗೆ |
| 3 | ಇ-ಪೋರ್ಟನಲ್ಲಿ ದಾಖಲೆಗಳ/ ತಾಂತ್ರಿಕ ಬೆಡ್ ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ದಿನಾಂಕ:13-02-2025 ರಿಂದ ಸಾಯಂಕಾಲ 11-00 ಗಂಟೆಯ ನಂತರ |
| 4 | ಇ-ಪೋರ್ಟನಲ್ಲಿ ದಾಖಲಾತಿಗಳ/ ಆರ್ಥಿಕ ಬೆಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ದಿನಾಂಕ: 14-02-2025 ರಿಂದ ಸಾಯಂಕಾಲ 11-00 ಗಂಟೆಯ ನಂತರ |

ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಪೋರ್ಟಲ್ wwwktpp.karnatka.gov.in ಸಂಪರ್ಕಿಸಬಹುದಾಗಿದೆ

ಸಹಿ/-
ಅಧ್ಯಕ್ಷರು
ಗ್ರಾಮ ಪಂಚಾಯಿತಿ,
ಪಲ್ಲಾಗಟ್ಟೆ

ಸಹಿ/-
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯಿತಿ ,
ಪಲ್ಲಾಗಟ್ಟೆ

## ಗ್ರಾಮ ಪಂಚಾಯಿತಿ ಕಾರ್ಯಾಲಯ ಗುತ್ತಿದುರ್ಗ

ಕ್ರ.ಸಂ.ಗ್ರಾ.ಪಂ.ಗು/ಇ/ಪ್ರೋ/1/2024-25 ದಿನಾಂಕ : 03-02-2025

### ಇ-ಪ್ರಕ್ಯೂರ್ ಮೆಂಟ್ ಮೂಲಕ ಟೆಂಡರ್ ಪ್ರಕಟಣೆ

ಗುತ್ತಿದುರ್ಗ ಗ್ರಾಮ ಪಂಚಾಯಿತಿಯಲ್ಲಿ ಟೆಂಡರ್‌ನಲ್ಲಿ ಷರತ್ತುಗಳ ಪ್ರಕಾರ 2024-25ನೇ ಸಾಲಿನ ಗುತ್ತಿದುರ್ಗ ಗ್ರಾಮ ಪಂಚಾಯಿತಿಯ 15ನೇ ಹಣಕಾಸು ಯೋಜನೆಯಡಿ ಗುತ್ತಿದುರ್ಗ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಅಗತ್ಯ ಕುಡಿಯುವ ನೀರಿನ ಸಾಮಗ್ರಿ ಖರೀದಿ/ಕು.ನೀರಿನ ಮೊ.ಪಂಪ್.ದುರಸ್ಥಿಗಾಗಿ ಒಟ್ಟು ಅಂದಾಜು ಮೊತ್ತ: 7,97,740.00 ಲಕ್ಷ ಗಳಿಗೆ ಕೆ.ಟಿ.ಪಿ.ಪಿ ನಿಯಾಮಾನುಸಾರ ಇ-ಪ್ರಕೂರ್ ಮೆಂಟ್ ಮೂಲಕ ಟೆಂಡರ್ ಗಾಗಿ ಅರ್ಹ ಟೆಂಡರ್‌ದಾರರು/ಸಂಸ್ಥೆಗಳು ಭರ್ತಿ ಮಾಡಿದ ಟೆಂಡರ್ ಗಳನ್ನು ಈ ಕೆಳಕಂಡಂತೆ ಆಹ್ವಾಅನಿಸಲಾಗಿದ್ದು (ಟೆಂಡರ್ ಸಂಸ್ಥೆ ಸಂಖ್ಯೆ RDPR/2024-25/SE2132, RDPR/2024-25/ಐಓಡಿ7152 , RDPR/2024-25/IND7153)ಸದರಿ ಟೆಂಡರ್ ಗೆ ಸಂಬಂದಿಸಿದ ದಾಖಲೆಗಳನ್ನು ಇ-ಪ್ರಕ್ಯೂರ್ ಮೆಂಟ್ ವೆಬ್ ಸೈಟ್ ವೆಬ್ ಸೈಟ್ (wwwktpp.karnatka.gov.in) ಇಂದ ದಿನಾಂಕ: 03-02-2025 ರಿಂದ 11-02-2025 ಸಾಯಂಕಾಲ 5.30 ಗಂಟೆಯೊಳಗೆ ಡೌನ್ ಲೋಡ್ ಮಾಡಿಕೊಂಡು ದಿನಾಂಕ; ಸಂಜೆ 5 ಗಂಟೆಯ ವರೆಗೆ ಇ-ಟೆಂಡರ್‌ನ್ನು ಸಲ್ಲಿಸಬಹುದು ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಗುತ್ತಿದುರ್ಗ ಗ್ರಾಮ ಪಂಚಾಯಿತಿ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

**ಟೆಂಡರ್ ವೇಳಾಪಟ್ಟಿ**

| | | |
|---|---|---|
| 1 | ಖಾಲಿ ಟೆಂಡರ್ ಅರ್ಜಿಗಳನ್ನು (ಅನುಬಂಧ-1ನ್ನು ಮತ್ತು ಅನುಬಂಧ-2ನ್ನು)ಇ-ಪ್ರಕ್ಯೂರ್‌ಮೆಂಟ್ ಮೂಲಕ ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ ಮತ್ತು ಸಮಯ | ದಿನಾಂಕ:03-02-2025ರಿಂದ 11-02-2025 ಸಾಯಂಕಾಲ5-30 ಗಂಟೆಯೊಳಗೆ |
| 2 | ಇ-ಪೋರ್ಟನಲ್ಲಿ ಟೆಂಡರ್ ನ್ನು ಇಂಧೀಕರಿಸಲು ಕೊನೆಯ ದಿನಾಂಕ | ದಿನಾಂಕ: 11-02-2025 ರಿಂದ ಸಾಯಂಕಾಲ 5-30 ಗಂಟೆಯೊಳಗೆ |
| 3 | ಇ-ಪೋರ್ಟನಲ್ಲಿ ದಾಖಲೆಗಳ/ ತಾಂತ್ರಿಕ ಬೆಡ್ ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ದಿನಾಂಕ:13-02-2025 ರಿಂದ ಸಾಯಂಕಾಲ 11-00 ಗಂಟೆಯ ನಂತರ |
| 4 | ಇ-ಪೋರ್ಟನಲ್ಲಿ ದಾಖಲಾತಿಗಳ/ ಆರ್ಥಿಕ ಬೆಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ದಿನಾಂಕ: 14-02-2025 ರಿಂದ ಸಾಯಂಕಾಲ 11-00 ಗಂಟೆಯ ನಂತರ |

ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಪೋರ್ಟಲ್ wwwktpp.karnatka.gov.in ಸಂಪರ್ಕಿಸಬಹುದಾಗಿದೆ

ಸಹಿ/-
ಅಧ್ಯಕ್ಷರು
ಗ್ರಾಮ ಪಂಚಾಯಿತಿ,
ಗುತ್ತಿದುರ್ಗ

ಸಹಿ/-
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯಿತಿ ,
ಗುತ್ತಿದುರ್ಗ


## ನಿಧನ ಸುದ್ದಿಗಳು

### ಎಂ.ಜಿ. ಪ್ರಕಾಶ್ ರಾವ್ ನಿಧನ

**ದಾವಣಗೆರೆ :** ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್, 1ನೇ ಮುಖ್ಯ ರಸ್ತೆ, 5ನೇ ತಿರುವು (ನ್ಯಾಯಾಲಯ ಸಂಕೀರ್ಣದ ಹಿಂಭಾಗ) ವಾಸಿ ಪ್ರಕಾಶ್ ರಾವ್ ದಿನಾಂಕ: 03.02.20258 ಸೋಮವಾರ ರಾತ್ರಿ 10 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 74 ವರ್ಷ ವಯಸ್ಸಾಗಿತ್ತು. ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.02.2025ರ ಮಂಗಳವಾರ ಬೆಳಿಗ್ಗೆ 11.30ಕ್ಕೆ ಬೂದಾಳ್ ರಸ್ತೆಯಲ್ಲಿರುವ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.
-ದುಃಖತಪ್ತ ಕುಟುಂಬ ವರ್ಗ

### ಶ್ರೀ ಕೆ.ಎಸ್. ಭೀಮಲ್ ನಿಧನ

**ದಾವಣಗೆರೆ :** ಜಿಲ್ಲೆ, ಚನ್ನಗಿರಿ ತಾಸೇವಾನಗರ (ರುದ್ರಾಪುರ) ವಾಸಿ ದಿ. ಡಾ॥ ಸುರೇಂದ್ರರವರ ಮಗನಾದ ಶ್ರೀ ಕೆ.ಎಸ್. ಭೀಮಲ್‌ಇವರು ದಿನಾಂಕ : 03.02.2025ಗಂಟೆಗೆದೈವಾಧೀನರಾಗಿರುತ್ತಾರೆ. ಮೃತರಿಗೆ 61 ವರ್ಷ ವಯಸ್ಸಾಗಿತ್ತು. ಮೃತರು ತಾಯಿ, ಪತ್ನಿ, ಮಕ್ಕಳು, ಸಹೋದರರು, ಅಳಿಯಂದಿರರು ಹಾಗೂ ಸೇವಾನಗರ ಗ್ರಾಮಸ್ಥರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ : 04.02.2025 ರಂದು ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮವಾದ ಸೇವಾನಗರದ ಮೃತರ ತೋಟದಲ್ಲಿ ನೆರವೇರಲಿದೆ. **ಇಂತಿ ದುಃಖತಪ್ತರು** : ತಾಯಿ ಶ್ರೀಮತಿ ಗಿರಿಜಾ ಬಾಯಿ, ಮೃತರ ಪತ್ನಿ ಮತ್ತು ಮಕ್ಕಳು, ಸಹೋದರರು, ಅಳಿಯಂದಿರು ಹಾಗೂ ಸೇವಾನಗರ ಗ್ರಾಮಸ್ಥರು ಹಾಗೂ ಅಪಾರ ಬಂಧು-ಮಿತ್ರರು

## ಬಣ ಬಡಿದಾಟ ಸರಿಪಡಿಸಿಕೊಳ್ಳಿ

**ಕಡೂರು:** ಶಾಸಕ ಆನಂದ್ ಅವರ ಬಣ ಯಾವುದಾದರೂ ಇರಲಿ ಅದನ್ನು ನಿಮಗೆ ತಿಳಿಸುವ ಅವಶ್ಯಕತೆ ಇಲ್ಲ. ತಮ್ಮ ಪಕ್ಷದಲ್ಲಿ ಇರುವ ಬಣ ಬಡಿದಾಟ ಸರಿಮಾಡಿಕೊಳ್ಳಿ ಎಂದು ಬಿಜೆಪಿ ಮುಖಂಡ ಭರತ್ ಕೆಂಪರಾಜು ಅವರು ಪತ್ರಿಕಾ ಹೇಳಿಕೆ ಮೂಲಕ ಕೇಳಿರುವ ಪ್ರಶ್ನೆಗಳಿಗೆ ಕಾಂಗ್ರೆಸ್ ವಕ್ತಾರ ಪ್ರಕಾಶ್ ನಾಯ್ಕ ಉತ್ತರಿಸಿದರು. ಪಟ್ಟಣದ ಕಾಂಗ್ರೆಸ್ ಕೇರಿಯಲ್ಲಿ ಪತಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆ ಶಾಸಕರಾಗಿದ್ದ ಕೆ.ಎಂ.ಕೃಷ್ಣಮೂರ್ತಿ ಅವರು ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಗೆದ್ದು ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಅವರಿಗೆ ಇಂದಿಗೂ ಕ್ಷೇತ್ರದ ಜನತೆ ಕೃತಜ್ಞರಾಗಿದ್ದರೆ. ಅವರ ಕುಟುಂಬದ ನೀವು ನಿಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡಿ ಎಲ್ಲಿಯೂ ಸಲ್ಲದೆ ಬಿಜೆಪಿಯ ಬಾವುಟ ಹಿಡಿದಿದ್ದೀರಿ. ನಿಮ್ಮಿಂದ ನಮ್ಮ ಶಾಸಕರು ರಾಜಕೀಯ ಪಾಠ ಕಲಿಯುವ ಅಗತ್ಯವಿಲ್ಲ ಎಂದರು. ಶಾಸಕರ ಆನಂದ್ ಅವರು ಮೊದಲಿನಿಂದ ಕಾಂಗ್ರೆಸ್ಸಿನ ಬಣದಲ್ಲಿ ಇದ್ದಾರೆ, ಅವರು ಎಲ್ಲಿ ಇದ್ದಾರೆ ಎಂಬುದರ ಬಗ್ಗೆ ತಮಗೆ ಸ್ಪಷ್ಟನೆ ನೀಡುವ ಅಗತ್ಯವಿಲ್ಲ. ತಮ್ಮಂತೆ ಹಣ ಮತ್ತು ಅಧಿಕಾರಕ್ಕಾಗಿ ದಿನಕ್ಕೊಂದು ಪಕ್ಷ ಬದಲಿಸಿಲ್ಲ. ಅವರಿಗೆ ನಿಮ್ಮಿಂದ ಪಕ್ಷ ನಿಷ್ಠೆಯ ಪಾಠ ಕಲಿಯುವ ಅಗತ್ಯವಿಲ್ಲ. ನಿಮ್ಮ ಪಕ್ಷದಲ್ಲಿರುವ ಬಣ ಬಡಿದಾಟವನ್ನು ರಾಜ್ಯದ ಜನ ದಿನವೂ ನೋಡುತ್ತಿದ್ದಾರೆ. ಸದ್ಯ ನೀವು ಯಾವ ಬಣದಲ್ಲಿ ಇದ್ದೀರಿ ಎಂಬುದನ್ನು ಸ್ಪಷ್ಟಪಡಿಸಿ ಎಂದರು. ಗೋಷ್ಠಿಯಲ್ಲಿ ಶ್ರೀನಿವಾಸ ನಾಯ್ಕ, ಸಂತೋಷ್ ಬಳ್ಳೇಕೆರೆ, ಪ್ರಮೋದ್ ಕನಕ, ಲಿಂಗರಾಜ, ಯರದಕೆರೆ ಲೋಹಿಯಾ, ತರುಣ್, ಸಚಿನ್, ನವೀನ್ ಮತ್ತು ಕೆಂಚಪ್ಪ ಇದ್ದರು.

## ಕುವೆಂಪು ವಿ.ವಿ.ಮುಚ್ಚುವ ದಿನ ದೂರವಿಲ್ಲ

**ಶಿವಮೊಗ್ಗ;** ಕುವೆಂಪು ವಿವಿಯು ಮುಚ್ಚುವ ದಿನಗಳು ದೂರವಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಡಿ.ಎಸ್.ಅರುಣ್ ಆತಂಕ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಕುವೆಂಪು ವಿವಿಯಲ್ಲಿ ಭ್ರಷ್ಟಾಚಾರ ಸೇರಿದಂತೆ ಅನೇಕ ಅಧ್ವಾನಗಳು ನಡೆಯ ತೊಡಗಿವೆ. ಈ ಬಗ್ಗೆ ಸರ್ಕಾರವಾಗಲೀ ಅಲ್ಲಿನ ಕುಲಪತಿಗಳಾಗಲಿ ಕಿಂಚಿತ್ತೂ ಯೋಚಿಸುತ್ತಿಲ್ಲ. ಹೀಗೆ ಮುಂದುವರೆದರೆ ಕುವೆಂಪು ವಿವಿ ಮುಚ್ಚುವ ದಿನಗಳು ಹತ್ತಿರ ಬರುತ್ತವೆ. ಅದಕ್ಕೂ ಮುಂಚೆ ಸರ್ಕಾರ ಈ ಬಗ್ಗೆ ಗಮನಹರಿಸಬೇಕು ಎಂದರು.ಇತ್ತೀಚೆಗೆ ಕುವೆಂಪು ವಿವಿಯಲ್ಲಿ ಘಟಿಕೋತ್ಸವ ಕಾರ್ಯಕ್ರಮ ನಡೆಯಿತು. ಅಂದು ಸಾವಿರಾರು ವಿದ್ಯಾರ್ಥಿಗಳಿಗೆ ಸಂಭ್ರಮದ ದಿನವಾಗಿತ್ತು, ರ್‍ಯಾಂಕ್ ಬಂದ ವರು ತಮ್ಮ ಪೋಷಕರ ಜೊತೆಗೆ ಬಂದಿದ್ದರು. ಇಂತಹ ಒಂದು ಸಂಭ್ರಮದ ಕಾರ್ಯಕ್ರಮವೊಂದು ಅಲ್ಲಿನ ಅವ್ಯವಸ್ಥೆಗಳಿಗೆ ಸಾಕ್ಷಿಯಾಯಿತು ಎಂದು ಬೇಸರ ವ್ಯಕ್ತಪಡಿಸಿದರು.ಈ ಎಲ್ಲಕ್ಕಿಂತ ಮುಖ್ಯವಾಗಿ ಈ ಸಮಾರಂಭಕ್ಕೆ ಉನ್ನತ ಶಿಕ್ಷಣ ಸಚಿವರು ಬರ ಬೇಕಿತ್ತು. ಇಲ್ಲಿನ ಸಮಸ್ಯೆಗಳ ಬಗ್ಗೆ ಆಲಿಸಬೇಕಿತ್ತು. ನಾವು ಕೂಡ ಅವರು ಬರುತ್ತಾರೆ ಎಂದುಕೊಂಡಿದ್ದೆವು. ಆದರೆ ಅವರು ಬರಲಿಲ್ಲ. ಕಳೆದ ವರ್ಷವೂ ಅವರು ಬಂದಿರಲಿಲ್ಲ. ಕುವೆಂಪು ವಿವಿ ಬಗ್ಗೆ ಯಾಕಿಷ್ಟು ತಾತ್ಸಾರ ಎಂದು ಅರ್ಥ ವಾಗುತ್ತಿಲ್ಲ. ರಾಜ್ಯಪಾಲರು ಕಾರ್ಯಕ್ರಮಕ್ಕೆ ಬರುತ್ತಾರೆ ಎಂಬ ಕಾರಣಕ್ಕೆ ಅವರು ಬರಲಿಲ್ಲ ಎಂಬ ಅನುಮಾನ ನಮಗಿದೆ. ಅವರು ಹೇಳಿದ ದಿನಾಂಕವನ್ನೇ ಗೊತ್ತುಪಡಿಸಲಾಗಿತ್ತು. ಆದರೂ ಕೂಡ ಬರಲಿಲ್ಲ ಎಂದರು.ಇದೇ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಪಕ್ಷದವರೇ ಆದ ಹಿರಿಯ ಮುತ್ಸದ್ಧಿ ರಾಜ ಕಾರಣಿ ಕಾಗೋಡು ತಿಮ್ಮಪ್ಪ ಅವರಿಗೆ ಗೌರವ ಡಾಕ್ಟರೇಟ್ ನೀಡಿದರು. ಇದಕ್ಕಾದರೂ ಅವರು ಬರಬಹುದಿತ್ತು. ಆದರೆ, ಬರಲಿಲ್ಲ. ಏನಾಗಿದೆ ಅವರಿಗೆ ಎಂದು ಗೊತ್ತಿಲ್ಲ ಎಂದರು.ಇನ್ನು ಅಲ್ಲಿನ ಸಾಫ್ಟ್‌ವೇರ್ ಹಗರಣ ದೊಡ್ಡದಿದೆ. ಸದ್ಯದರಲ್ಲೇ ಈ ಹಗರಣದ ಬಗ್ಗೆ ತನಿಖೆಯಾಗಲಿದೆ. 25 ಲಕ್ಷಕ್ಕೂ ಹೆಚ್ಚು ಮೊತ್ತದ ಹಗರಣ ಇದಾಗಿದೆ. ಕುವೆಂಪು ವಿವಿಯಲ್ಲಿ 500ಕ್ಕೂ ಹೆಚ್ಚು ನೌಕರರಿದ್ದಾರೆ. ವಿದ್ಯಾರ್ಥಿಗಳಿಂದ ಪಡೆದ ಶುಲ್ಕದಲ್ಲಿ ಅರೆಕಾಲಿಕ ಉದ್ಯೋಗಿಗಳಿಗೆ ವೇತನ ಬಳಸಿಕೊಳ್ಳುತ್ತಾರೆ ಎಂದರೆ ಕುವೆಂಪು ವಿವಿ ಸ್ಥಿತಿ ಎಲ್ಲಿಗೆ ಬಂದಿದೆ ಎಂದು ಅರ್ಥವಾಗುತ್ತದೆ ಎಂದರು.ರಾಜ್ಯ ಸರ್ಕಾರ ಈಗ ಮತ್ತೊಂದು ನಿರ್ಧಾರ ಕೈಗೊಂಡಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿವಿ ಸ್ಥಾಪಿಸಲು ಹೊರಟಿದೆ. ಈ ವಿವಿಗೆ ಮುಖ್ಯಮಂತ್ರಿಗಳು ಕುಲಾಧಿಪತಿಗಳಾಗಿರಬೇಕು ಎಂಬ ನಿರ್ಣಯ ಕೈಗೊಳ್ಳ ಲಾಗಿದೆ. ಇದು ಎಷ್ಟರಮಟ್ಟಿಗೆ ಸರಿಯೋ ಅರ್ಥವಾಗುತ್ತಿಲ್ಲ. ಬಹುಶಃ ರಾಜ್ಯಪಾ ಲರೇ ಕುಲಪತಿಗಳಾಗಬೇಕು ಎಂಬ ಈಗಿರುವ ನಿಯಮದಿಂದ ರಾಜ್ಯ ಸರ್ಕಾರ ಆತಂಕಗೊಂಡಂತೆ ಕಾಣುತ್ತದೆ ಎಂದರು.ಸಚಿವ ಮಧು ಬಂಗಾರಪ್ಪ ಅವರು ಸಂಸದರ ಬಗ್ಗೆ ಹಗುರವಾಗಿ ಮಾತನಾಡು ವುದನ್ನು ನಿಲ್ಲಿಸಬೇಕು ಎಂದು ಹೇಳಿದ ಅರುಣ್, ರಾಜ್ಯ ಹಾಗೂ ಜಿಲ್ಲೆಯ ಪಕ್ಷದ ಅಧ್ಯಕ್ಷರ ಆಯ್ಕೆಗೆ ಸಂಬಂಧಿಸಿದಂತೆ ಬಿಜೆಪಿಯಲ್ಲಿ ಒಂದು ಶಿಸ್ತು ಇದೆ. ಆ ಶಿಸ್ತಿನ ಪ್ರಕಾರವೇ ನಡೆಯುತ್ತದೆ. ಗೊಂದಲಗಳಿದ್ದರೆ ಹಿರಿಯರು ಅದನ್ನು ಸರಿ ಪಡಿಸುತ್ತಾರೆ ಎಂದರು.ಪತ್ರಿಕಾಗೋಷ್ಠಿಯಲ್ಲಿ ಶಾಸಕ ಎಸ್.ಎನ್. ಚನ್ನಬಸಪ್ಪ, ಮಾಲತೇಶ್, ಅಣ್ಣಪ್ಪ ಕೆ.ವಿ., ಚಂದ್ರಶೇಖರ್, ಇದ್ದರು.

# ಕಾರ್ಪೊರೇಟ್ ಏಕಸ್ವಾಮ್ಯ: ಹೆಚ್ಚಿದ ಬಡತನ

ಜಗತ್ತಿನಲ್ಲಿ ಹಿಂದೆಂದೂ ಇಲ್ಲದ ರೀತಿಯಲ್ಲಿ ಆರ್ಥಿಕ ಅಸಮಾನತೆ ಹೆಚ್ಚಾಗಿದ್ದು, ಉಳ್ಳವರು ಮತ್ತು ಇಲ್ಲದವರ ನಡುವೆ ಬೃಹತ್ ಕಂದಕ ಸೃಷ್ಟಿಯಾಗಿದೆ; ಶತಕೋಟ್ಯಧಿಪತಿಗಳು ರಾಜಕೀಯ ಪ್ರಭಾವವನ್ನೂ ಬೆಳೆಸಿಕೊಂಡಿದ್ದಾರೆ ಎಂದು ಆಕ್ಸಾಮ್ ಸಂಸ್ಥೆಯ ಅಸಮಾನತೆ ಕುರಿತ ವರದಿ ತಿಳಿಸಿದೆ. ವರದಿ ಪ್ರಕಾರ, 2020ರಿಂ ದ ಈಚೆಗೆ ಜಗತ್ತಿನ 500 ಕೋಟಿ ಮಂದಿ ಮತ್ತಷ್ಟು ಬಡವರಾಗಿದ್ದಾರೆ. ಇದೇ ಹೊತ್ತಿಗೆ ವಿಶ್ವದ ಐವರು ಅತಿ ದೊಡ್ಡ ಶ್ರೀಮಂತರ ಸಂಪತ್ತು ದುಪ್ಪಟ್ಟಾಗಿದ್ದು, ಅವರ ಸಂಪತ್ತು ಇಂದು 80 ಸಾವಿರ ಕೋಟಿ ಡಾಲರ್ಗಿಂತಲೂ (ಸುಮಾರು 68 ಲಕ್ಷ ಕೋಟಿ) ಹೆಚ್ಚಿದೆ. ಜಗತ್ತಿನ ಲಕ್ಷಾಂತರ ಮಂದಿ ಕಡುಬಡತನದಲ್ಲಿ ಬದುಕುತ್ತಿದ್ದು, ಕುಡಿಯುವ ನೀರು, ಆರೋಗ್ಯ ಸೇವೆ, ವಸತಿ, ಮಕ್ಕಳಿಗೆ ಶಿಕ್ಷಣದಂಥಮೂಲಭೂತ ಅಗತ್ಯಗಳಿಂದ ವಂಚಿತರಾಗಿದ್ದರೆ, ಕಳೆದಮೂರು ವರ್ಷಗಳಲ್ಲಿ ಶತಕೋಟ್ಯಧಿಪತಿಗಳ ಸಂಪತ್ತು 3 ಲಕ್ಷ ಕೋಟಿ ಡಾಲರ್ನಷ್ಟು (ಸುಮಾರು 259 ಲಕ್ಷ ಕೋಟಿ) ಹೆಚ್ಚಾಗಿದೆ. ಜಗತ್ತಿನ ಶೇ75ರಷ್ಟು ಆನ್ಲೈನ್ ಜಾಹೀರಾತುಗಳು ಮೆಟಾ, ಆಲ್ಫಬೆಟ್ ಮತ್ತು ಅಮೆಜಾನ್ ಪಾಲಾಗುತ್ತಿದ್ದು, ಈಮೂರೂ ತಂತ್ರಜ್ಞಾನ ಸಂಸ್ಥೆಗಳುಮಾರುಕಟ್ಟೆಯಲ್ಲಿ ಹಿಡಿತ ಸಾಧಿಸಿವೆ.ಎರಡು ದಶಕಗಳಲ್ಲಿ (1995–2015) 60 ಔಷಧ ಕಂಪನಿಗಳು 10 ಕಂಪನಿಗಳಲ್ಲಿ ವಿಲೀನವಾಗಿವೆ. ಭಾರತದಲ್ಲಿಯೂಐದು ಕಂಪನಿಗಳು ಉದ್ಯಮ ರಂಗದಲ್ಲಿ ಏಕಸ್ವಾಮ್ಯ ಸಾಧಿಸಿವೆ ಎಂದು ವರದಿ ತಿಳಿಸಿದೆ.

ಖಾಸಗೀಕರಣ: ಜಗತ್ತಿನಾದ್ಯಂತ ಶಿಕ್ಷಣ, ಆರೋಗ್ಯ ಸೇವೆ ಮತ್ತು ನೀರು ಪೂರೈಕೆಯಂಥ ಕ್ಷೇತ್ರಗಳಲ್ಲೂ ಖಾಸಗಿಯವರು ಅಡಿಯಿಟ್ಟಿದ್ದು, ಈ ಸೌಲಭ್ಯಗಳು ಜನಸಾಮಾನ್ಯರಿಗೆ ಲಭ್ಯವಾಗದಂತಾಗಿವೆ. ಜನರಮೂಲಭೂತ ಅಗತ್ಯಗಳನ್ನೂ ಖಾಸಗಿ ಕಂಪನಿಗಳು ವ್ಯಾಪಾರದ ಸರಕಾಗಿಸಿಕೊಂಡು, ದೊಡ್ಡ ಪ್ರಮಾಣದಲ್ಲಿ ಲಾಭ ಮಾಡುತ್ತಿವೆ. ವಿಶ್ವ ಬ್ಯಾಂಕ್ನಂಥ ಹಣಕಾಸು ಸಂಸ್ಥೆಗಳೂ ಈ ಪ್ರವೃತ್ತಿಯನ್ನು ಬೆಂಬಲಿಸುತ್ತಿವೆ. ಅಗತ್ಯ ಸೇವೆಗಳನ್ನು ಒದಗಿಸುವ ಕೆಲಸವನ್ನು ಖಾಸಗಿಯವರಿಗೆ ಬಿಟ್ಟುಕೊಡುತ್ತಿರುವುದು, ಸರ್ಕಾರಿ ಸ್ವಾಮ್ಯದ ಉದ್ದಿಮೆಗಳನ್ನು ಖಾಸಗಿಯ ವರಿಗೆಮಾರುತ್ತಿರುವುದು ಖಾಸಗಿ ಬಂಡವಾಳಗಾರರ ಬೆಳವಣಿಗೆಗೆ ಕಾರಣವಾಗುತ್ತಿದೆ ಎಂದು ವರದಿ ಹೇಳಿದೆ. ಜಾಗತಿಕ ಆಸ್ಪತ್ರೆ ಸೇವೆಗಳ ವಲಯವು 2030ರಹೊತ್ತಿಗೆ 19 ಲಕ್ಷ ಕೋಟಿ ಡಾಲರ್ (ಸುಮಾರು 1,640 ಲಕ್ಷ ಕೋಟಿ) ಮೌಲ್ಯದ ಉದ್ದಿಮೆಯಾಗಲಿದೆ. ಹಣ ಖರ್ಚು ಮಾಡಬಲ್ಲವರಿಗೆ ಉತ್ತಮ ಆರೋಗ್ಯ ಮತ್ತು ಶಿಕ್ಷಣ ಸಿಗುತ್ತಿದೆ. ಹಣವಿಲ್ಲದಿರುವವರಿಗೆ ಇವೆರಡೂ ಎಟುಕದಂತಾಗಿವೆ. ಜಾತಿ, ಲಿಂಗ, ವರ್ಣದ ನೆಲೆಯಲ್ಲೂ ಅಸಮಾನತೆ ಉಂಟಾಗುತ್ತಿದೆ. ಉದಾಹರಣೆಗೆ, ಭಾರತದಲ್ಲಿ ಏರುತ್ತಿರುವ ಆರೋ ಗ್ಯ ಸೇ ವೆಗಳ ವೆಚ್ಚವನ್ನು ಭರಿಸಲಾಗದೇ ದಲಿತರು ಸಮಸ್ಯೆ ಅನುಭವಿಸುತ್ತಿದ್ದಾರೆ.

ಇದೇ ಕಾರಣಕ್ಕೆ ಅವರು ಖಾಸಗಿ ಶಿಕ್ಷಣ ಸಂಸ್ಥೆಗಳಿಂದಲೂ ದೂರ ಉಳಿದಿದ್ದಾರೆ. ಸಾರ್ವಜನಿಕರ ಬೃಹತ್ ಮೊತ್ತದ ಹಣಕ್ಕೆ



ಅಪಾಯ ಎದುರಾಗಿದೆ. ನೀತಿ ನಿರೂಪಕರು ತಮ್ಮ ಉದ್ಯಮಿ ಸ್ನೇಹಿತರು ಮತ್ತು ಇತರರ ಪರವಾಗಿ ಕೆಲಸ ಮಾಡುತ್ತಿರುವುದರಿಂದ ಭ್ರಷ್ಟಾಚಾರ ಹೆಚ್ಚಾಗಿದ್ದು, ಸರ್ಕಾರಗಳ ಆಡಳಿತದಲ್ಲಿ ಉದ್ಯಮಿಗಳ ಪಾತ್ರವೂ ಹೆಚ್ಚಾಗುತ್ತಿದೆ. ಸರ್ಕಾರಗಳಿಗೆ ಸಾರ್ವಜನಿಕ ಹಿತಾಸಕ್ತಿಗಳಿಗಿಂತ ಕಾರ್ಪೊರೇಟ್ ಹಿತಾಸಕ್ತಿಗಳು ಪ್ರಮುಖ ಆದ್ಯತೆಯಾಗಿ ಪರಿಣಮಿಸಿವೆ. ಈ ರೀತಿಯಾಗಿ ಖಾಸಗೀಕರಣವು ಕ್ರೋನಿಯಿಸಂ (ತನ್ನ ಅಧಿಕಾರ ಸ್ಥಾನದಮೂಲಕ ಉದ್ಯಮರಂಗದ ಮಿತ್ರರಿಗೆ ನೆರವಾಗುವುದು) ಹೆಚ್ಚಳಕ್ಕೆ ಕಾರಣವಾಗುತ್ತಿದೆ. ಉದ್ಯಮಿಗಳು ಸಾರ್ವಜನಿಕ ನೀತಿಗಳನ್ನು ಪ್ರಭಾವಿಸುವ ಪ್ರವೃತ್ತಿ ಹೆಚ್ಚಾಗಿದ್ದು, ಸಾರ್ವಜನಿಕರ ಹೆಸರಿನಲ್ಲಿ ಖಾಸಗಿ ಬಂಡವಾಳಗಾರರು ಹೆಚ್ಚು ಹೆಚ್ಚು ಸಂಪತ್ತು ಗಳಿಸುತ್ತಿದ್ದಾರೆ. ಜಗತ್ತಿನ ದಕ್ಷಿಣದ ಬಡ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ಅನೇಕರು ಖಾಸಗಿ ಆಸ್ಪತ್ರೆಗಳಿಂದ ದಿವಾಳಿಯಾಗಿದ್ದಾರೆ ಎಂದು 2023ರ ಆಕ್ಸಾಮ್ ಸಂಶೋಧನಾ ವರದಿ ಹೇಳಿತ್ತು. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮತ್ತಿತರ ಶ್ರೀಮಂತ ರಾಷ್ಟ್ರಗಳು ಮತ್ತು ವಿಶ್ವಬ್ಯಾಂಕ್ನಿಂದ ನೆರವು ಪಡೆದಿರುವ ಇವುಗಳನ್ನು ಆರೋಗ್ಯ ಸೇವೆಗಳ ಲಭ್ಯತೆಯನ್ನು ಖಾತರಿಪಡಿಸುವ ಸಲುವಾಗಿ ಸ್ಥಾಪಿಸಲಾಗಿದೆ ಎಂದು ಹೇಳಲಾಗಿತ್ತು. ಆದರೆ, ಭಾರತವೂ ಸೇರಿದಂತೆ ಕೆನ್ಯಾ, ನೈಜೀರಿಯಾ, ಉಗಾಂಡ ಮುಂತಾದದೇಶಗಳಲ್ಲಿ ಖಾಸಗಿ ಆಸ್ಪತ್ರೆಗಳು ರೋಗಿಗಳನ್ನು ಬಡತನಕ್ಕೆ ದೂಡಿವೆ. ದುಬಾರಿ ವೆಚ್ಚ ಪಾವತಿಸಲಾಗದ ರೋಗಿಗಳನ್ನು ಬಂಧನದಲ್ಲಿಡುವುದು, ಬೆದರಿಸುವುದು, ತುರ್ತು ಸಂದರ್ಭ ಗಳಲ್ಲೂ ಚಿಕಿತ್ಸೆ ನಿರಾಕರಿಸುವುದು, ಮಾನವ ಹಕ್ಕುಗಳ ಉಲ್ಲಂಘನೆ, ಅಂಗಾಂಗ ಕಳ್ಳಸಾಗಣೆ, ಅನಗತ್ಯವಾಗಿ ದುಬಾರಿ ಚಿಕಿತ್ಸಾ ವಿಧಾನಗಳ ಮೊರೆಹೋಗುವಂತೆ ಒತ್ತಾಯಿಸುವುದು ಸೇರಿದಂತೆ ಅನೇಕ ರೀತಿಯಲ್ಲಿ ರೋಗಿಗಳನ್ನು ಆಸ್ಪತ್ರೆಗಳು ಶೋಷಿಸುತ್ತಿವೆ ಎಂದು ವರದಿ ತಿಳಿಸಿದೆ.

ಭಾರತದಲ್ಲಿ ಸದ್ಯ ಆರೋಗ್ಯ ಸೇವೆಗಳ ಕ್ಷೇತ್ರವು 23,600 ಕೋಟಿ ಡಾಲರ್ ಮೌಲ್ಯದ (ಸುಮಾರು 20 ಲಕ್ಷ ಕೋಟಿ) ಉದ್ಯಮವಾಗಿದ್ದು, ತ್ವರಿತವಾಗಿ ಬೆಳೆಯುತ್ತಿದೆ. ವಿಶ್ವಬ್ಯಾಂಕ್ನ ಅಂಗಸಂಸ್ಥೆ ಅಂತರರಾಷ್ಟ್ರೀಯ ಹಣಕಾಸು ನಿಗಮ (ಐಎಫ್ಸಿ) ನೇರವಾಗಿ ದೇಶದ ಪ್ರಮುಖ ಕಾರ್ಪೊರೇಟ್ ಆಸ್ಪತ್ರೆಗಳ ಸಮೂಹದಲ್ಲಿ ಬಂಡವಾಳಹೂಡಿಕೆಮಾಡಿದೆ. ಆದರೂ, ಐಎಫ್ಸಿಯು 25 ವರ್ಷಗಳಿಂದ ತನ್ನ ಆರೋಗ್ಯ ಯೋಜನೆಗಳನ್ನು ಒಮ್ಮೆಯೂಪರಾಮರ್ಶೆ ಮಾಡಿಲ್ಲ. ಸೇವೆಗಳಿಗೆ ಅತಿಹೆಚ್ಚು ದರ ನಿಗದಿಪಡಿಸಿದ್ದು, ರೋಗಿಗಳಿಗೆ ದುಬಾರಿ ಶುಲ್ಕ ವಿಧಿಸಿದ್ದು, ಬಡ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡಲು ನಿರಾಕರಿಸಿದಂಥ ಆರೋಪಗಳು ಆರೋಗ್ಯ ಸೇವೆಗಳ ನಿಯಂತ್ರಣ ಸಂಸ್ಥೆಗಳಲ್ಲಿ ಹಲವು ಬಾರಿ ಸಾಬೀತಾಗಿವೆ. ಇವು ಆಸ್ಪತ್ರೆ ನಿರ್ಮಾಣಕ್ಕಾಗಿ ಸರ್ಕಾರದಿಂದ ಉಚಿತ ಭೂಮಿ ಪಡೆದಿವೆ. ಮುಖ್ಯ ವಿಚಾರವೇ ನೆಂದರೆ, ಐಎಫ್ಸಿ ಧನಸಹಾಯ ಪಡೆದಿರುವ 144 ಆಸ್ಪತ್ರೆಗಳ ಪೈಕಿ ಕೇವಲ ಒಂದು ಆಸ್ಪತ್ರೆ ಗ್ರಾಮೀಣ ಪ್ರದೇಶದಲ್ಲಿದೆ.

ಅಸಮಾನತೆ ಪೋಷಿಸುತ್ತಿರುವ ಕಾರ್ಪೊರೇಟ್ ಶಕ್ತಿಗಳು ಜಾಗತಿಕವಾಗಿ ಏಕಸ್ವಾಮ್ಯ ಹೊಂದಿರುವ ಕಾರ್ಪೊರೇಟ್ ಶಕ್ತಿಗಳು ಆರ್ಥಿಕ ಅಸಮಾನತೆಗೆ ನೀರುಣಿಸುತ್ತಿವೆ ಎಂದು ವರದಿ ಹೇಳಿದೆ. ಅದರ ಪ್ರಕಾರ, ಕಾರ್ಪೊರೇಟ್ ಕಂಪನಿಗಳು ನಾಲ್ಕು ರೀತಿಯಲ್ಲಿ ಅಸಮಾನತೆಯನ್ನು ಪೋಷಿಸುತ್ತಿವೆ...

1. ಕಾರ್ಮಿಕರಿಗಿಲ್ಲ ಪ್ರತಿಫಲ; ಶ್ರೀಮಂತರಿಗೇ ಎಲ್ಲ ಕಾರ್ಪೊರೇಟ್ ಕಂಪನಿಗಳು ತಮ್ಮಲ್ಲಿ ಕೆಲಸಮಾಡುವ ಉದ್ಯೋಗಿಗಳು/ ಕಾರ್ಮಿಕರಿಗೆ ನಿಯಮಾನುಸಾರ ವೇತನ ನೀಡುವುದಿಲ್ಲ. ಆದರೆ, ಕಂಪನಿಯ ಲಾಭಾಂಶವನ್ನು ಶ್ರೀಮಂತ ಷೇರುದಾರರಿಗೆ ನೀಡುತ್ತವೆ. ಜಾಗತಿಕವಾಗಿ 79.1 ಕೋಟಿ ಕಾರ್ಮಿಕರ ವೇತನವು ಹಣದುಬ್ಬರಕ್ಕೆ ಅನುಗುಣವಾಗಿ ಇಲ್ಲ. ಮಹಿಳೆಯರಿಗೆ ಅತಿ ಕಡಿಮೆ ವೇತನ ನೀಡಲಾಗುತ್ತಿದೆ ಮತ್ತು ಅವರಿಗೆ ಉದ್ಯೋಗ ಭದ್ರತೆಯೂಇಲ್ಲ. ಇದರ ಜೊತೆಗೆ, ಕಾರ್ಮಿಕರ ಪರವಾಗಿರುವ ಕಾರ್ಮಿಕ ಕಾನೂನು, ನೀತಿಗಳನ್ನು ವಿರೋಧಿಸಲು ಕಾರ್ಪೊರೇಟ್ ಕಂಪನಿಗಳು ತಮ್ಮ ಪ್ರಭಾವವನ್ನು ಬಳಸುತ್ತಿವೆ ಎಂದು ವರದಿ ಹೇಳಿದೆ.

2. ತೆರಿಗೆಯಿಂದ ತಪ್ಪಿಸಿಕೊಳ್ಳುವುದು ಕಾರ್ಪೊರೇಟ್ ಸಂಸ್ಥೆಗಳು ಮತ್ತು ಅದರ ಸಿರಿವಂತಮಾಲೀಕರು ಆಯಾದೇ ಶದ ತೆರಿಗೆ ಪದ್ಧತಿಯ ವಿರುದ್ಧ ಅತ್ಯಂತ ಪರಿಣಾಮಕಾರಿಯಾದಹೋ ರಾಟವನ್ನೇನಡೆಸುತ್ತಾರೆ. ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆಯ (ಒಇಸಿಡಿ) ಸದಸ್ಯ ರಾಷ್ಟ್ರಗಳಲ್ಲಿ ಶಾಸನಬದ್ಧ ಕಾರ್ಪೊರೇಟ್ ತೆರಿಗೆ ದರವು 1980ರಿಂದ ಈಚೆಗೆ ಅರ್ಧಕ್ಕಿಂತಲೂ ಹೆಚ್ಚು ಕಡಿತವಾಗಿದೆ. ಕಾರ್ಪೊರೇಟ್ ಕಂಪನಿಗಳ ಮೇಲೆ ವಿಧಿಸಲಾಗುತ್ತಿರುವ ತೆರಿಗೆಯನ್ನು ಕಡಿಮೆಮಾಡುವುದರಿಂದಲೂ ಆರ್ಥಿಕ ಅಸಮಾನತೆ ಉಂಟಾಗುತ್ತದೆ. ಕಂಪನಿಗಳು ಮತ್ತು ಶ್ರೀಮಂತರು ಕಡಿಮೆ ತೆರಿಗೆ ಪಾವತಿಸುವುದರಿಂದ ಸರ್ಕಾರದ ಬೊಕ್ಕಸಕ್ಕೆ ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ತೆರಿಗೆ ಆದಾಯ ಸಂಗ್ರಹವಾಗುವುದಿಲ್ಲ ಎಂದು ವರದಿ ಹೇಳಿದೆ.

3. ಸರ್ಕಾರಿ ಸೇವೆ ಖಾಸಗೀಕರಣಗೊಳಿಸುವುದು ಜಗತ್ತಿನಾದ್ಯಂತ ಬಹುತೇಕ ರಾಷ್ಟ್ರ ಗಳಲ್ಲಿ ಶಿಕ್ಷಣ, ಆರೋಗ್ಯ, ಕುಡಿಯುವ ನೀರು ಪೂರೈಕೆ ಸೇರಿದಂತೆ ನಾಗರಿಕರಿಗೆಮೂಲಭೂತವಾಗಿ ಬೇಕಾದ ಹಲವು ಪ್ರಮುಖ ಸೇವೆಗಳನ್ನು ಸರ್ಕಾರಗಳೇ ಒದಗಿಸುತ್ತಿವೆ. ಕಾರ್ಪೊರೇಟ್ ಕಂಪನಿಗಳು ತಮ್ಮ ಪ್ರಭಾವ ಬಳಸಿ, ಈ ಸೇವೆಗಳನ್ನು ಖಾಸಗೀಕರಣಗೊಳಿಸಲು ನಿರಂತರವಾಗಿ ಯತ್ನಿಸುತ್ತಿವೆ. ಕೆಲವು ಕಂಪನಿಗಳು ಈಗಾಗಲೇ ಕೆಲವು ಸಾರ್ವಜನಿಕ ಕ್ಷೇತ್ರಗಳಲ್ಲಿ ತೊಡಗಿಕೊಳ್ಳುವಮೂಲಕ ಭಾರಿ ಪ್ರಮಾಣದಲ್ಲಿ ಲಾಭಗಳಿಸುತ್ತಿವೆ. ಜನರಿಗೆ ಅತ್ಯಂತ ಗುಣಮಟ್ಟದ ಸೇವೆ ಒದಗಿಸಿ ಅಸಮಾನತೆಯನ್ನು ಕಡಿಮೆಮಾಡುವ ಸರ್ಕಾರದ ಪ್ರಯತ್ನಕ್ಕೆ ಇದು ಹಿನ್ನಡೆ ಉಂಟುಮಾಡುತ್ತದೆ. ಸೇವೆಗಳು ಅಥವಾ ಸರ್ಕಾರಿ ಸಂಸ್ಥೆಗಳ ಖಾಸಗೀಕರಣವು ಸಾರ್ವಜನಿಕ ಸೇವೆಗಳಲ್ಲೂ ಅಸಮಾನತೆಯನ್ನು ಸೃಷ್ಟಿಸುತ್ತವೆ. ಶ್ರೀಮಂತರು ಮತ್ತು ಬಡವರ ನಡುವಿನ ಕಂದಕವನ್ನು ಇನ್ನಷ್ಟು ಹೆಚ್ಚಿಸುತ್ತವೆ. ಯಾರಿಗೆ ಹಣ ಪಾವತಿಸಲು ಸಾಧ್ಯವಿದೆಯೋ ಅವರಿಗೆಮಾತ್ರ ಅತ್ಯುತ್ತಮ ಶಿಕ್ಷಣ ಮತ್ತು ಆರೋಗ್ಯ ಸೇವೆಯನ್ನು ಪಡೆಯುವುದಕ್ಕೆ ಸಾಧ್ಯವಿರುತ್ತದೆ ಎಂದು ವರದಿ ವಿವರಿಸಿದೆ.

4. ಜಾಗತಿಕ ಹವಾಮಾನ ಬದಲಾವಣೆಗೆ ಕಾರಣ ಕಾರ್ಪೊರೇಟ್ ಕಂಪನಿಗಳು ಜಾಗತಿಕ ಮಟ್ಟದಲ್ಲಿ ಹವಾಮಾನ ಬದಲಾವಣೆಗೂ ಕಾರಣವಾಗುತ್ತಿವೆ. ಇದು ಕೂಡ ಲಿಂಗ, ವರ್ಗ , ವರ್ಣದ ಅಸಮಾನತೆಗೆ ಕಾರಣವಾಗುತ್ತಿವೆ. ಜಗತ್ತಿನ ಹಲವು ಶತಕೋ ಟ್ಯಧಿಪತಿಗಳು ಹಸಿರು ಮನೆ ಅನಿಲಗಳನ್ನು ಹೊರಸೂಸುವ ಉದ್ದಿಮೆಗಳನ್ನು ಹೊಂದಿದ್ದಾರೆ. ಈ ಉದ್ಯಮಗಳಿಂದ ದೊಡ್ಡ ಪ್ರಮಾಣದಲ್ಲಿ ಲಾಭಗಳಿಸುವ ಅವರು, ಅದರಿಂ ದಾಗುವ ಹವಾಮಾನ ಬದಲಾವಣೆಯನ್ನು ನಿರಾಕರಿಸುತ್ತಾರೆ. ಅಲ್ಲದೇ , ಈ ಕೈಗಾರಿಕೆಗಳನ್ನು ವಿರೋಧಿಸುವವರನ್ನು ಬಗ್ಗುಬಡಿಯುತ್ತಾರೆ ಎಂದು ವರದಿ ತಿಳಿಸಿದೆ.

ಆರ್ಥಿಕ ಸಮಾನತೆ ತರಲು ಏನುಮಾಡಬೇಕು?

ಆರ್ಥಿಕ ಅಸಮಾನತೆಗೆ ಕಡಿವಾಣ ಹಾಕುವುದಕ್ಕಾಗಿ ಕಾರ್ಪೊರೇಟ್ ಪ್ರಭಾವವನ್ನು ತಗ್ಗಿಸಬೇಕು. ಇದಕ್ಕಾಗಿ ಸರ್ಕಾರಗಳು ಹೆಚ್ಚು ಬಲಿಷ್ಠವಾಗಬೇಕು ಎಂಬುದೂ ಸೇರಿದಂತೆ ಹಲವು ಸಲಹೆಗಳನ್ನು ಆಕ್ಸಾಮ್ ನೀಡಿದೆ.

* ಜನರ ಒಳಿತಿಗಾಗಿ ದೇಶದ ಅರ್ಥ ವ್ಯವಸ್ಥೆಗೆಹೊಸ ರೂಪ ನೀಡಲು ಸರ್ಕಾರಗಳು ಕ್ರಮ ವಹಿಸಬೇಕು
* ಆರೋಗ್ಯ, ಶಿಕ್ಷಣ, ಆಹಾರ ಭದ್ರತೆ ಸೇರಿದಂತೆ ಸಾರ್ವ ಜನಿಕ ಸೇವೆಗಳಿಗೆ ಹೆಚ್ಚು ಒತ್ತು ನೀಡಬೇಕು. ಸಾರ್ವಜನಿಕ ಸಾರಿಗೆ, ಇಂಧನ, ವಸತಿ ಸೇರಿದಂತೆ ಇತರ ಮೂಲಸೌಕರ್ಯ ಕ್ಷೇತ್ರಗಳಲ್ಲಿ ಹೆಚ್ಚು ಬಂಡವಾಳಹೂಡಬೇಕು
* ಖಾಸಗಿ ಕಂಪನಿಗಳು ಜನರ ಹಿತಾಸಕ್ತಿಗೆ ಅನುಗುಣವಾಗಿ ಕೆಲಸಮಾಡುವುದಕ್ಕಾಗಿ ನಿಯಂತ್ರಣ ನಿಯಮಗಳನ್ನು ಜಾರಿಗೊಳಿಸಬೇಕು
* ಕಾರ್ಪೊರೇಟ್ ಸಂಸ್ಥೆಗಳು ಕಾರ್ಮಿಕರಿಗೆ ಸರಿಯಾಗಿ ವೇತನ ನೀಡುವಂತೆ, ಲಿಂಗ ತಾರತಮ್ಯ ಹೋಗಲಾಡಿಸುವಂತೆ ನೋಡಿಕೊಳ್ಳಬೇಕು. ಕಾರ್ಮಿಕ ಸಂಘಟನೆಗಳಿಗೆ ಪ್ರೋತ್ಸಾಹ ನೀಡಬೇಕು
* ಶ್ರೀಮಂತರ ಮತ್ತು ಕಾರ್ಪೊರೇಟ್ ತೆರಿಗೆಯನ್ನು ಹೆಚ್ಚಿಸಬೇಕು

ಆಧಾರ: ಆಕ್ಸಾಮ್ನ 'ಇನ್ಇಕ್ವಾಲಿಟಿ ಐಎನ್ಸಿ' ವರದಿ

## ಚಂದ್ರಗುತ್ತಿ ಕೋಟೆಯೊಳಗೆ ವೀರಗಲ್ಲು ಪತ್ತೆ



**ಚಂದ್ರಗುತ್ತಿ:** ಐತಿಹಾಸಿಕ ಮಾನ್ಯತೆ ಇರುವ ಚಂದ್ರಗುತ್ತಿ ಕೋಟೆಯೊಳಗೆ ವೀರಗಲ್ಲೊಂದು ಪತ್ತೆ ಯಾಗಿದೆ. ಇಲ್ಲಿನ ಪ್ರೌಢಶಾಲೆ ನಿವೃತ್ತ ಶಿಕ್ಷಕ ಯಶವಂತಪ್ಪ ಅವರು ಈ ಶಾಸನ ಪತ್ತೆ ಹಚ್ಚಿದ್ದು ಲಿಪಿಯ ಶೋಧ ಆಗಬೇಕಿದೆ. ಇತಿಹಾಸ ಸಂಶೋಧಕ ಶ್ರೀಪಾದ ಬಿಚ್ಚುಗತ್ತಿ ಅವರಿಗೆ ಶಾಸನ ತೋರಿಸಿದ್ದು ವಿಜಯನಗರ ಕಾಲದ ವೀರಗಲ್ಲು ಎಂದಿದ್ದಾರೆ.

ಆರಗದ ದೇವಪ್ಪ ಒಡೆಯರ ಉಲ್ಲೇಖ ಕಾಣಿಸುತ್ತಿದ್ದು, ಸ್ವಚ್ಛ ಗೊಳಿಸಿ ಓದಬೇಕಿದೆ. ಇದು ಅಪ್ರಕಟಿತ ಶಾಸನವಾಗಿದ್ದು ಸದ್ಯದಲ್ಲಿಯೇ ಶಾಸನ ತಜ್ಞ ರಮೇಶ್ ಹಿರೇಜಂಬೂರು ಹಾಗೂ ಚುರ್ಚುಗುಂಡಿ ಮಂಜಪ್ಪ ಅವರನ್ನು ಕರೆಸಿ ಓದಿಸೋಣ ಎಂದಿದ್ದಾರೆ.ಚಂದ್ರಗುತ್ತಿಯಲ್ಲಿ ಇಲ್ಲಿಯವರೆಗೆ ಯಾವುದೇ ವೀರಗಲ್ಲು ಕಂಡು ಬಂದಿರಲಿಲ್ಲ, ಕೋಟೆಯೊಳಗೆ ಒಂದೇ ಒಂದು ಪರ್ಶಿಯನ್ ಲಿಪಿಯ ಶಾಸನವಿದ್ದು ದಿ.ರಘುನಾಥ್ ಭಟ್ ಓದಿ ಪ್ರಕಟಿಸಿದ್ದರು. ಹೊರವಲಯ ಬಸ್ತಿಕೊಪ್ಪದ ಕಂಚಿ ಶಿವರಾಂ ಅವರ ಜಾಗೆಯಲ್ಲಿ ಜೈನ ಶಾಸನ, ನಿಸದಿ ಕಲ್ಲು ಕಂಡು ಬಂದಿತ್ತು. ಲಿಪಿ ಪೂರ್ಣ ಹಾಳಾಗಿದ್ದು ಓದುವಂತಿರಲಿಲ್ಲ. ತದ ನಂತರ ಈ ಶಾಸನ ದೊರೆತಿದ್ದು ಇದು ಚಂದ್ರಗುತ್ತಿ ಕೋಟೆಯಲ್ಲಿ, ಇತಿಹಾಸದ ಮಹತ್ವಪೂರ್ಣ ದಾಖಲೆಯಾಗ ಲಿದೆ.ಚಂದ್ರಗುತ್ತಿ 14–15ನೇ ಶತಮಾನದಲ್ಲಿ ಪ್ರಮುಖ ವ್ಯಾಪಾರಿ ಕೇಂದ್ರವಾಗಿದ್ದ ಬಗ್ಗೆ, ಬನವಾಸಿ ಪನ್ನಿರ್ಛಾಸಿರದ ಪ್ರಮುಖ ವಿಭಾಗವಾಗಿ ಚಂದ್ರಗುತ್ತಿ 18 ಕಂಪಣವಾಗಿದ್ದ ಮಾಹಿತಿಯಿತ್ತು. ಇಲ್ಲಿನ ರೇಣುಕಾ ದೇಗುಲವೂ ಸೇರಿದಂತೆ ವಿಠ್ಠಲ ದೇವಸ್ಥಾನ, ಪಾಳುಗೊಂಡ ಚಂದ್ರನಾಥ ಬಸದಿ, ಕೋಟೆಯೊಳಗಿನ ಕೆಲವು ಪಾಳು ಕಟ್ಟಡ, ಊರೊಳಗಿನ ಕಲ್ಯಾಣಿ, ಈಶ್ವರ ದೇಗುಲದ ಅವಶೇಷ ಎಲ್ಲವೂ ವಿಜಯನಗರದ ಅವಧಿಯದ್ದಾಗಿವೆ.

ಈ ಎಲ್ಲಾ ಆಕರಗಳೊಂದಿಗೆ ಪ್ರಸ್ತುತ ದೊರಕಿರುವ ಶಾಸನ ಮಹತ್ವದ್ದು ಎಂದಿದ್ದಾರೆ. ವೀರಗಲ್ಲು ಭೇಟಿ ವೇಳೆ ಯಶವಂತಪ್ಪ ಮಾಸ್ತರ್ ಜೊತೆ, ಶ್ರೀಪಾದ ಬಿಚ್ಚುಗತ್ತಿ, ಅರಣ್ಯ ಇಲಾಖೆಯ ಮೌನೇಶ್, ಪತ್ರಕರ್ತ ಪುರುಷೋತ್ತಮ ಎನ್. ಗದ್ದೆಮನೆ ಇದ್ದರು.

## ಸಂವಿಧಾನದ ಮೂಲಕ ರಕ್ತರಹಿತ ದೇಶಕ್ಕೆ ಸಮಾನತೆ




**ಎನ್.ಆರ್.ಪುರ:** ಬಿಜೆಪಿ ದಲಿತ ವಿರೋಧಿ, ಸಂವಿಧಾನ ವಿರೋಧಿ ಎಂದು ಕಳೆದ 60 ವರ್ಷಗಳಿಂದ ಕಾಂಗ್ರೆಸ್ ಹಾಗೂ ಕೆಲವು ಬುದ್ಧಿಜೀವಿಗಳು ಸುಳ್ಳು ಹೇಳಿಕೊಂಡು ಬರುತ್ತಿದ್ದಾರೆ ಎಂದು ರಾಜ್ಯ ಬಿಜೆಪಿ ಘಟಕದ ಉಪಾಧ್ಯಕ್ಷ ಎನ್.ಮಹೇಶ್ ಆರೋಪಿಸಿದರು. ತಾಲ್ಲೂಕಿನ ದ್ವಾರಮಕ್ಕಿಯ ಡಿ.ಎನ್.ಜೀವರಾಜ್ ಮನೆಯ ಅಂಗಳದಲ್ಲಿ ಶೃಂಗೇರಿ ಕ್ಷೇತ್ರ ಮಟ್ಟದ ದಲಿತರು, ಹಿಂದುಳಿದ ವರ್ಗದವರಿಗಾಗಿ ಆಯೋಜಿಸಿದ್ದ ಭೀಮ ಸಂಗಮ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದವರು ಯಾರು ಗೌರವ ನೀಡುತ್ತಿರುವವರು ಯಾರು ಎಂದು ವಿಮರ್ಶೆ ಮಾಡಬೇಕಾಗಿದೆ. ಬಿಜೆಪಿ ಸಂವಿಧಾನವನ್ನು ದುರ್ಬಲಗೊಳಿಸುತ್ತಿದೆ ಎಂದು ಕಾಂಗ್ರೆಸ್‌ನವರು ಆರೋಪಿಸುತ್ತಿದ್ದಾರೆ. ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಇದೆ. ಸಂವಿಧಾನವನ್ನು ದುರ್ಬಲಗೊಳಿಸಿದೆಯೇ ಎಂದು ಪ್ರಶ್ನಿಸಿದರು.ಭಾರತದ ಏಕತೆ ಕಾಪಾಡಬೇಕು ಎಂದು ಡಾ.ಅಂಬೇಡ್ಕರ್ ಬರೆದ ಸಂವಿಧಾನ ಹೇಳುತ್ತಿದೆ. ಸಂವಿಧಾನದಿಂದ ಧಾರ್ಮಿಕ, ಆರ್ಥಿಕ, ಸಾಮಾಜಿಕ, ಆಹಾರ ಉತ್ಪಾದನೆ, ಉದ್ಯೋಗದಲ್ಲಿ ಸ್ವಾತಂತ್ರ್ಯ ಸಿಕ್ಕಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಬಿಜೆಪಿ ಮುಖಂಡ ಡಿ.ಎನ್.ಜೀವರಾಜ್ ಮಾತನಾಡಿ, ಕಾಂಗ್ರೆಸ್ ಹಲವಾರು ವರ್ಷಗಳಿಂದ ಹೇಳಿಕೊಂಡು ಬಂದ ಸುಳ್ಳನ್ನು ಸತ್ಯ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ. ಬಿಜೆಪಿ ಸಂವಿಧಾನ ವಿರೋಧಿ ಅಲ್ಲ ಎಂದರು.ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ನರೇಂದ್ರ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖಂಡರಾದ ಪುಣ್ಯಪಾಲ್, ಶೃಂಗೇರಿ ಶಿವಣ್ಣ, ವಿ.ನೀಲೇಶ್, ಅರುಣಕುಮಾರ್, ದಿನೇಶ್ ಹೊಸೂರು ಇದ್ದರು. ಸಂವಿಧಾನ ಪೀಠಿಕೆಯ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

## ಶೃಂಗೇರಿ ಶ್ರೀ ಶಾರದಾ ಪೀಠದಲ್ಲಿ ಫೆ.3ಕ್ಕೆ ವಿಶೇಷ ಧಾರ್ಮಿಕ ಕಾರ್ಯಕ್ರಮ

**ಶೃಂಗೇರಿ:** ಸಹಕಾರ ಭಾರತಿ ನೇತೃತ್ವದಲ್ಲಿ ಆಡಳಿತ ನಡೆಸುತ್ತಿರುವ ಮಲೆನಾಡು ಅಡಿಕೆ ಮಾರಾಟ ಸಹಕಾರ ಸಂಘದಿಂದ ಅಡಿಕೆ ಬೆಳೆಗಾರರ ಹಿತ ಕಾಪಾಡಲು ಸಂಶೋಧನೆ, ಧಾರ್ಮಿಕವಾಗಿ ಶೃಂಗೇರಿ ಶಾರದಾ ಪೀಠದಲ್ಲಿ ಫೆ.3ರಂದು ವಿಶೇಷ ಧಾರ್ಮಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮ್ಯಾಮ್ಕೋಸ್ ಉಪಾಧ್ಯಕ್ಷ ಹಲ್ಕುಳಿ ಮಹೇಶ್ ಹೇಳಿದರು.ಪಟ್ಟಣದಲ್ಲಿ ಸಹಕಾರ ಭಾರತಿಯಿಂದ ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ಅಡಿಕೆ ಬೆಳೆಗಾರರ ಸಂಕಷ್ಟ ಪರಿಹಾರ ಸಮಿತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಫೆ.3ರ ಲಲಿತಾ ಪಂಚಮಿಯಂದು ಮಠದಲ್ಲಿ ವಿಶೇಷ ಧಾರ್ಮಿಕ ಕಾರ್ಯಕ್ರಮ ನಡೆಯುತ್ತದೆ. ಶಾರದಾ ಪೀಠದಲ್ಲಿ ಅಡಿಕೆ ಬೆಳೆಗಾರರ ಪರವಾಗಿ ಲಲಿತಾಹೋಮ, ಲಕ್ಷಾರ್ಚನೆ, ಈಶ್ವರಗಿರಿಯ ಮಲಹಾನಿಕರೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಶತರುದ್ರಾಭಿಷೇಕ ನಡೆಯಲಿದ್ದು, ಲಲಿತಾಹೋಮದ ಪೂರ್ಣಾಹುತಿಯಲ್ಲಿ ಜಗದ್ಗುರು ಶ್ರೀ ಭಾರತಿತೀರ್ಥ ಸ್ವಾಮೀಜಿ ಪಾಲ್ಗೊಳ್ಳಲಿದ್ದಾರೆ. ಅಡಿಕೆ ಬೆಳೆಗಾರರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.ಫೆ.4ರಂದು ನಡೆಯುತ್ತಿರುವ ಮ್ಯಾಮ್ಕೋಸ್ ಆಡಳಿತ ಮಂಡಳಿ ಚುನಾವಣೆಗೆ ಸಹಕಾರ ಭಾರತಿಯಿಂದ 19 ಜನರು ಸ್ಪರ್ಧೆಗೆ ಇಳಿದಿದ್ದು, ಮತದಾರರು ಸಹಕಾರ ಭಾರತಿ ಅಭ್ಯರ್ಥಿಗಳಿಗೆ ಮತ ನೀಡಬೇಕು. ನಮ್ಮ ತಂಡ ಮ್ಯಾಮ್ಕೋಸ್‌ನ್ನು ಸದೃಢವಾಗಿ ನಿರ್ವಹಿಸುತ್ತಿರುವುದಲ್ಲದೇ, ಭ್ರಷ್ಟಾಚಾರ, ಕಳಂಕರಹಿತವಾಗಿ ಕರ್ತವ್ಯ ನಿರ್ವಹಿಸುತ್ತಿದೆ. ರೈತರ ಹಿತ ಕಾಪಾಡಿಕೊಂಡು, ಸಂಸ್ಥೆಯನ್ನು ಸದೃಢವಾಗಿ ಕಟ್ಟಲಾಗಿದೆ. ಅಡಿಕೆಗೆ ಸ್ಥಿರವಾದ ಬೆಲೆ, ಉತ್ತಮ ಗುಣಮಟ್ಟದ ಪೈಪು, ಕೃಷಿ ಉಪಕರಣ ನೀಡುವ ಯೋಜನೆ ರೂಪಿಸಲಾಗುತ್ತದೆ ಎಂದರು.ಕಾರ್ಯಕ್ರಮದಲ್ಲಿ ಮ್ಯಾಮ್ಕೋಸ್ ನಿರ್ದೇಶಕ ಟಿ.ಕೆ.ಪರಾಶರ, ಪಪಂ ಅಧ್ಯಕ್ಷ ವೇಣುಗೋಪಾಲ್, ಸಹಕಾರ ಭಾರತಿ ಅಧ್ಯಕ್ಷ ನರೇಂದ್ರ, ಕವಿಲುಕೊಡಿಗೆ ಶ್ರೀಧರರಾವ್ ಇದ್ದರು.



# ಸಮಾಜಶಾಸ್ತ್ರದಲ್ಲಿ ಶಾಹಿನ್‌ಗೆ ಪ್ರಥಮ ರ್‍ಯಾಂಕ್



**ಆನಂದಪುರ:** ಯಡೇಹಳ್ಳಿ ಜ್ಞಾನಸಹ್ಯಾದ್ರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ಶಾಹಿನ್ ಅಂತಿಮ ವರ್ಷದ ಸಮಾಜಶಾಸ್ತ್ರ ವಿಷಯದಲ್ಲಿ ಪ್ರಥಮ ರ್‍ಯಾಂಕ್ ಪಡೆದಿದ್ದಾರೆ. ಶಿವಮೊಗ್ಗದಲ್ಲಿ ನಡೆದ ಕುವೆಂಪು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಚಿನ್ನದ ಪದಕವನ್ನು ಪಡೆದಿದ್ದಾರೆ. ಈ ವಿದ್ಯಾರ್ಥಿಗೆ ಜ್ಞಾನ ಸಹ್ಯಾದ್ರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು ಹಾಗೂ ಆಡಳಿತ ಮಂಡಳಿಯವರು ಅಭಿನಂದಿಸಿದ್ದಾರೆ.

# ಪಾದಚಾರಿ ಮಾರ್ಗದ ಮೇಲೆ ವಾಹನ ಚಲಾಯಿಸಿದರೆ ಆಐ ರದ್ದು!

**ಬೆಂಗಳೂರು:** ಪಾದಚಾರಿ ಮಾರ್ಗದ ಮೇಲೆ ವಾಹನ ಚಲಾಯಿಸುವವರ ವಾಹನ ಪರವಾನಗಿಯನ್ನು (ಡಿಎಲ್) ರದ್ದು ಮಾಡಲು ನಗರದ ಸಂಚಾರಿ ಪೊಲೀಸರು ಮುಂದಾಗಿದ್ದಾರೆ. ಪಾದಚಾರಿಗಳ ಸುರಕ್ಷತೆ ದೃಷ್ಟಿಯಿಂದ ಸಂಚಾರಿ ಪೊಲೀಸರು ಈ ನಿಯಮ ಜಾರಿಗೆ ತಂದಿದ್ದಾರೆ. ಈ ಹಿಂದೆ ಪಾದಚಾರಿ ಮಾರ್ಗದ ಮೇಲೆ ಗಾಡಿ ಓಡಿಸಿದರೆ ಸಂಚಾರಿ ಪೊಲೀಸರು ದಂಡ ಹಾಕುತ್ತಿದ್ದರು. ದಂಡ ವಿಧಿಸಿದರೂ ಸವಾರರು ಮಾತ್ರ ನಿಯಮ ಉಲ್ಲಂಘಿಸುವುದನ್ನು ಮುಂದುವರೆಸಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಚಾರಿ ಪೊಲೀಸರು ಈ ಕ್ರಮಕ್ಕೆ ಮುಂದಾಗಿದ್ದಾರೆ.

# ವಿಸಿ ನಾಲೆಗೆ ಬಿದ್ದ ಕಾರು ಓರ್ವ ಸಾವು

**ಬೆಂಗಳೂರು:** ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿ ವಿಸಿ ನಾಲೆಗೆ ಬಿದ್ದ ಪರಿಣಾಮ ಓರ್ವ ವ್ಯಕ್ತಿ ಸಾವನ್ನಪ್ಪಿ, ಇಬ್ಬರು ನಾಪತ್ತೆಯಾಗಿರುವ ಘಟನೆ ಮಂಡ್ಯದಲ್ಲಿ ನಡೆದಿದೆ. ತಿಬ್ಬನಹಳ್ಳಿ ಗ್ರಾಮದ ಬಳಿ ನಡೆದ ಈ ಘಟನೆಯಲ್ಲಿ ಓರ್ವ ವ್ಯಕ್ತಿಯನ್ನು ರಕ್ಷಿಸಲಾಗಿದ್ದು, ಇಬ್ಬರು ನಾಪತ್ತೆಯಾಗಿದ್ದಾರೆ. ಕಾರಿನಲ್ಲಿದ್ದ ನಾಲ್ವರು ಮಂಡ್ಯದ ಹಾಲಹಳ್ಳಿ ಸ್ಲಂ ನಿವಾಸಿಗಳಾಗಿದ್ದು, ಈ ಪೈಕಿ ಕಾರು ಮಾಲೀಕ ಫಯಾಜ್ ಸಾವನ್ನಪ್ಪಿದ್ದರೆ, ನಯಾಜ್ ಎಂಬಾತನನ್ನು ರಕ್ಷಣೆ ಮಾಡಲಾಗಿದೆ. ಉಳಿದ ಇಬ್ಬರು ನಾಪತ್ತೆಯಾಗಿದ್ದು ಅವರಿಗಾಗಿ ಶೋಧ ಕಾರ್ಯಾಚರಣೆ ನಡೆಯುತ್ತಿದೆ. ಸದ್ಯ ಶಿವಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

# ರೈತಸಂಘದ ಮುಖಂಡರಿಂದಲೇ ರೈತರ ಮೇಲಿನ ದೌರ್ಜನ್ಯ

**ಮೂಡಿಗೆರೆ:** ರೈತ ಸಂಘದ ಹೆಸರಿನಲ್ಲಿ ರೈತ ಮುಖಂಡರೋರ್ವರು ತಮ್ಮ ವೈಯಕ್ತಿಕ ಕಾರಣಕ್ಕಾಗಿ ರೈತರ ಮೇಲೆಯೇ ದೌರ್ಜನ್ಯ ಎಸಗುತ್ತಿದ್ದಾರೆ. ಇದನ್ನು ಕೂಡಲೇ ನಿಲ್ಲಿಸಲು ಪೊಲೀಸರು ಕ್ರಮ ವಹಿಸಬೇಕೆಂದು ಪಿ.ಎ.ಪುಟ್ಟಸ್ವಾಮಿಗೌಡ ಒತ್ತಾಯಿಸಿದರು. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಂಜುನಾಥ ಎಂಬುವರು ರೈತ ಸಂಘದ ಹೆಸರಿನಲ್ಲಿ ತನ್ನ ವೈಯಕ್ತಿಕ ವಿಚಾರಕ್ಕೆ ಧರಣಿ ಕೂತು ಅಧಿಕಾರಿಗಳನ್ನು ಹೆದರಿಸುವ ಕಾರ್ಯ ಮಾಡುತ್ತಿದ್ದಾರೆ. ನಿರಂತರವಾಗಿ ಸ್ಥಳೀಯ ರೈತರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ ಎಂದರು. ಇದಕ್ಕೆ ಸಾಕ್ಷಿಯಾಗಿ ಕಡಿದಾಳು ಗ್ರಾಮದ ಸರ್ವೆ ನಂ76ರಲ್ಲಿ ಪೂರ್ವಿಕರ ಕಾಲದಿಂದಲೂ ಅನುಭವವಿರುವ ಹಾಗೂ ನಮ್ಮ ಹೆಸರಿನಲ್ಲಿ ಖಾತೆ ಹೊಂದಿರುವ ಕಾಫಿ ತೋಟ 76 ವರ್ಷದ ಹಿಂದೆಯೇ ಪೋಡು ಆಗಿ, ಗಡಿ ಗುರುತು ಮಾಡಲಾಗಿದೆ. ಈ ಜಾಗ ತನಗೆ ಸೇರಿದ್ದೆಂದು ಮಂಜುನಾಥ್ ಅವರು ತನ್ನ ತೋಟಕ್ಕೆ ಅತಿಕ್ರಮ ಪ್ರವೇಶ ಮಾಡಿ ಸುಮಾರು 60 ವರ್ಷ ಹಳೆಯದಾದ 300ಕ್ಕೂ ಅಧಿಕ ಕಾಫಿ ಗಿಡಗಳನ್ನು ಕಡಿದು ಹಾಕಿದ್ದಾರೆ. ಅಲ್ಲದೇ ಕಾಫಿ ತೋಟದ ಬೇಲಿಯನ್ನು ಕೂಡ ಕಿತ್ತಿದ್ದಾರೆ. ಇದರಿಂದ ಸುಮಾರು 5 ಲಕ್ಷ ರೂ. ನಷ್ಟ ಉಂಟಾಗಿದೆ ಎಂದು ದೂರಿದರು.ನಮ್ಮ ಜಮೀನಿಗೆ ಸಂಬಂಧಿಸಿದಂತೆ 76 ವರ್ಷ ಹಿಂದೆ ಆಗಿದ್ದ ಪೋಡಿಯನ್ನು ಅಧಿಕಾರಿಗಳ ಮೇಲೆ ಒತ್ತಡ ಹಾಕಿ ರದ್ದು ಮಾಡಿಸಿದ್ದಾರೆ. ಇದರ ವಿರುದ್ಧ ನಾವು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಹಾಕಿದ್ದೇವೆ. ಈ ಕಾರಣಕ್ಕೆ ಮಂಜುನಾಥ ಅವರು ಗೂಂಡಗಳನ್ನು ಕರೆತಂದು ನಮ್ಮ ತೋಟದ ಗಿಡಗಳನ್ನು ಕಡಿದು ಹಾಕಿದ್ದಾರೆ ಎಂದು ದೂರಿದರು..

# ಮನುಷ್ಯನ ಹೃದಯಾಳದಿ ಭಗವಂತನ ನೆಲೆ : ಶ್ರೀ ಮರುಳಸಿದ್ಧ ಸ್ವಾಮೀಜಿ



**ಚಿಕ್ಕಮಗಳೂರು, ಫೆ. 4 :** ಮನುಷ್ಯನ ಹೃದಯಾಳದಿ ಭಗವಂತನು ನೆಲೆಸಿರುವನು. ಎಲ್ಲೆಲ್ಲೋ ತೆರಳಿ ಶೋಧಿಸುವ ಮೊದಲು, ಆತ್ಮದಲ್ಲಿ ಅಡಗಿರುವ ಪರಮಾತ್ಮನೊಟ್ಟಿಗೆ ಸನ್ಮಾರ್ಗದಲ್ಲಿ ಸಾಗಿದಾಗ ಬದು ಕು ಸಾತ್ವಿಕ ರೂಪು ಪಡೆದುಕೊಳ್ಳಲಿದೆ ಎಂದು ಬಸವತತ್ವ ಪೀಠದ ಶ್ರೀ ಡಾ. ಬಸವ ಮರುಳಸಿದ್ಧ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಲಕ್ಯಾ ಹೋಬಳಿ ಸಮೀಪ ಗಾಣದಾಳು ಗ್ರಾಮದಲ್ಲಿ ವಿಶ್ವಬಂಧು ಶ್ರೀ ಮರುಳಸಿದ್ಧೇಶ್ವರ ಸ್ವಾಮಿ ನೂತನ ದೇವಾಲಯ ಪ್ರವೇಶೋತ್ಸವ, ಕುಂಭಾಭಿಷೇಕ, ಕಳಸಾರೋಹಣ ಹಾಗೂ ಧಾರ್ಮಿಕ ಸ ಮಾರಂಭದ ದಿವ್ಯಸಾನಿಧ್ಯವಹಿಸಿ ಸೋಮವಾರ ಅವರು ಆಶೀರ್ವಚನ ನೀಡಿದರು.

ಭಕ್ತಾಧಿಗಳು ಮತ್ತು ಗ್ರಾಮಸ್ಥರು ದೇವಾಲಯ ನಿರ್ಮಾಣ ಅಥವಾ ಜೀರ್ಣೋದ್ದಾರಕ್ಕೆ ಮುಂದಾದರೆ ಸಾಲದು, ದೈನಂದಿನ ಪೂಜಾಕೈಂಕರ್ಯಗಳಲ್ಲಿ ತಲ್ಲೀನರಾಗಬೇಕು. ಪ್ರಾರ್ಥನೆ, ಪೂಜೆ-ಯ ಜೊತೆಗೆ ವೈಮ ನಸ್ಸಿನ ಕೆಡಕನ್ನು ತೊಡೆದು, ಸದ್ಗುಣಗಳನ್ನು ಮೈಗೂಡಿಸಿಕೊಂಡು ಸಾಗಿದರೆ ದೇವಾಲಯ ನಿರ್ಮಾಣಗೊಂಡಿದ್ದಕ್ಕೆ ಸಾರ್ಥಕವಾದಂತೆ ಎಂದು ತಿಳಿಸಿದರು.

ಶ್ರೀ ಮರುಳಸಿದ್ದೇಶ್ವರರು ಹಾಗೂ ಬಸವಣ್ಣನವರ ಒಂದೇ ಕಾಲದಲ್ಲಿ ಜೀವಿಸಿದವರು. ಶೋಷಿತರ ಧ್ವನಿ ಯಾಗಿ ಮತ್ತು ಸಂಸ್ಕೃತಿ, ಸಂಪ್ರದಾಯದ ಅಂಕುಡೊಂಕುಗಳನ್ನು ತಿದ್ದಲು ಇಡೀ ಜೀವನವನ್ನೆ ಸಮಾಜಕ್ಕಾಗಿ ಮುಡಿಪಿಟ್ಟ ಶ್ರೇಷ್ಠ ದಾರ್ಶನಿಕರು. ಯಜ್ಞಾಧಿಗಳನ್ನು ವಿರೋಧಿಸಿ ಉತ್ತಮ ಪರಂಪರೆಯನ್ನು ಸಮಾಜಕ್ಕೆ ಧಾರೆಗೈದವರು ಎಂದು ಬಣ್ಣಿಸಿದರು.

ಎದೆಗೂಡಿನಲ್ಲಿ ಪರಮಾತ್ಮನನ್ನು ಕಾಣಲು ಮಾನವ ತನ್ನ ದೃಷ್ಟಿಕೋನ ಬದಲಿಸಿ, ಶ್ರದ್ಧಾಪೂರ್ಕವಾಗಿ ಒಳಗಣ್ಣಿನಿಂದ ಪ್ರಾರ್ಥಿಸಿದರೆ, ತಾನಾಗಿಯೇ ದರ್ಶನ ಭಾಗ್ಯ ಕರುಣಿಸುವನು. ತನ್ನೊಳಗಿನ ದೇವರನ್ನು ಪೂ ಜಿಸುವ ಪರಿಯನ್ನು ಅರಿತುಕೊಳ್ಳಬೇಕು. ಈ ರೀತಿಯಲ್ಲೂ ಮರುಳಸಿದ್ದರು ತನ್ನವ್ಯಾಪ್ತಿಯಲ್ಲಿ ಸಕಲದೈವವು ಒಂದೆಡೆ ನೆಲೆಸಿದ್ದಾನೆ ಎಂಬ ಸಿದ್ಧಾಂತ ಸಾರಿದ್ದರು ಎಂದು ಹೇಳಿದರು.

ಗ್ರಾಮಸ್ಥರು, ದಾನಿಗಳು ಹಾಗೂ ಜನಪ್ರತಿನಿಧಿಗಳ ಸಹಕಾರದಿಂದ ಗಾಣದಾಳು ಶ್ರೀ ಮರುಳಸಿದ್ಧೇಶ್ವರ ಸ್ವಾಮಿಯವರ ಭವ್ಯ ಮಂದಿರ ನಿರ್ಮಾಣಗೊಂಡಿರುವುದು ಶ್ಲಾಘನೀಯ. ಆ ನಿಟ್ಟಿನಲ್ಲಿ ಗ್ರಾಮಸ್ಥರು ಮಕ್ಕಳಿಗೆ ಸಂಸ್ಕೃತಿ, ಸಂಸ್ಕಾರ ಕಲಿಸುವುದಾಗಿ ಬಾಲ್ಯದಿಂದಲೇ ದೇವಾಲಯಕ್ಕೆ ಕಳುಹಿಸುವ ಪದ್ಧತಿ ರೂಢಿಸಬೇಕು ಎಂದು ಕಿವಿಮಾತು ಹೇಳಿದರು.

ಶಾಸಕ ಹೆಚ್.ಡಿ.ತಮ್ಮಯ್ಯ ಮಾತನಾಡಿ ಶ್ರೀ ಮರುಳಸಿದ್ಧರ ಕಾಲಘಟ್ಟದಲ್ಲಿ ಆರ್ಥಿಕ ಸಮಾನತೆ, ಮಹಿ ಳೆಯರಿಗೆ ಗೌರವಿಸುವುದು, ಕಾಯಕವೇ ಕೈಲಾಸ ಎಂಬುದನ್ನು ವಚನಗಳ ಮುಖಾಂತರ ಸಾರಿ ಸಮಸಮಾ ಜಕ್ಕೆ ಹೆಜ್ಜೆಯಿಟ್ಟ ಶ್ರೇಷ್ಠರ ದೇವಾಲಯವನ್ನು ಪುಟ್ಟಗ್ರಾಮದಲ್ಲಿ ಪ್ರತಿಷ್ಠಾಪಿಸಿರುವ ಗ್ರಾಮಸ್ಥರ ಮನಸ್ಸು ಅ ತೀವ ದೊಡ್ಡದು ಎಂದು ಹೇಳಿದರು.

ಪ್ರಸ್ತುತ ದೇವಾಲಯ ಅಭಿವೃದ್ಧಿಗೆ ಶಾಸಕರ ನಿಧಿಯಿಂದ 10 ಲಕ್ಷ ಅನುದಾನ ಪೂರೈಸುವ ಜೊತೆಗೆ ವಿವಿಧ ದಾನಿಗಳು, ಗ್ರಾಮಸ್ಥರ ಸಹಕಾರದಿಂದ ಇಂದು ವಿಜೃಂಭ್ರಮಣೆಯಿಂದ ಲೋಕಾರ್ಪ ಣೆಗೊಂಡಿದ್ದು ಶ್ರೀ ಮರುಳಸಿದ್ಧೇಶ್ವರ ಸ್ವಾಮಿ ಒಕ್ಕಲಿನ ಕುಟುಂಬವು ಮುಕ್ತವಾಗಿ ತೆರಳಿ ಪೂಜಾವಿಧಿವಿಧಾನ ಕೈಗೊಳ್ಳಲು ಅನುವು ಮಾಡಲಾಗಿದೆ ಎಂದರು.

ಬಸವತತ್ವಪೀಠವು ಕೇವಲ ಚಿಕ್ಕಮಗಳೂರು ತಾಲ್ಲೂಕಿಗೆ ಸೀಮಿತವಾಗಿತ್ತು. ಶ್ರೀ ಬಸವ ಮರುಳಸಿದ್ದ ಸ್ವಾಮೀಜಿ ಗದ್ದುಗೆ ವಹಿಸಿಕೊಂಡ ಬಳಿಕ ಚಿಕ್ಕಮಗಳೂರು, ಹಾಸನ ಹಾಗೂ ಶಿವಮೊಗ್ಗದಲ್ಲೂ ಪ್ರತೀತಿ ಪಡೆ ಯುತ್ತಿದೆ. ಮುಂದೆ ಚಿಕ್ಕಮಗಳೂರಿಗೆ ಆಗಮಿಸುವವರು ಶೃಂಗೇರಿ, ರಂಭಾಪುರೀ ಮಠಗಳಿಗೆ ಭೇಟಿ ನೀ ಡಿದಂತೆ, ಬಸವತತ್ವಪೀಠಕ್ಕೆ ಭೇಟಿ ನೀಡುವಂತೆ ಅಭಿವೃದ್ದಿಪಡಿಸಲು ಮುಂದಾಗುತ್ತೇವೆ ಎಂದರು.

ಉದ್ಯಮಿ ಹಾಗೂ ದಾನಿ ಬಿ.ಎನ್. ಚಿದಾನಂದ್ ಮಾತನಾಡಿ ದೇವಾಲಯ ಅಭಿವೃದ್ಧಿ ಹಣ ಕೊಡು ವಷ್ಟು ದೊಡ್ಡವರಲ್ಲ, ಕೇವಲ ಸೇವೆಯ ದೃಷ್ಟಿಯಿಂದ ಕೆಲಸ ನಿರ್ವಹಿಸಿದ್ದೇವೆ. ಭಕ್ತಾಧಿಗಳು ಪ್ರಾರ್ಥನೆ ಹಾ ಗೂ ಆಚರಣೆಗಾಗಿ ತಾವು ಸೇರಿದಂತೆ ಅನೇಕರ ದಾನದಿಂದ ಶ್ರೀ ಮರುಳಸಿದ್ದೇಶ್ವರರ ಭವ್ಯ ಮಂದಿರ ನಿ ರ್ಮಾಣಗೊಂಡು ಲೋಕಾರ್ಪಣೆಗೊಂಡಿದೆ ಎಂದು ಹೇಳಿದರು.

ಜಿ.ಪಂ. ಮಾಜಿ ಅಧ್ಯಕ್ಷೆ ರೇಖಾ ಹುಲಿಯಪ್ಪಗೌಡ ಮಾತನಾಡಿ ಚಂಚಲ ಮನಸ್ಸನ್ನು ನಿಗ್ರಹಿಸಲು ದೇ ವಾಲಯ ಅತ್ಯಂತ ಪುಣ್ಯಸ್ಥಳಗಳು. ಪೂರ್ವಿಕರ ಕಾಲದಲ್ಲಿ ಹಿರಿಯರು ಹಾಕಿಕೊಟ್ಟ ಸಂಪ್ರದಾಯ ಪಾಲಿಸ ಬೇಕು. ಮೊದಲು ಸ್ಥಳೀಯ ದೇವಾಲಯ ಆದ್ಯತೆ ನೀಡಿ, ತದನಂತರ ಪ್ರಸಿದ್ಧ ದೇಗುಲಗಳಿಗೆ ತೆರುವ ಪದ್ಧ ತಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರಡಿಗವಿ ಮಠದ ಶ್ರೀ ಶಿವಶಂಕರ ಶಿವಯೋಗಿ ಸ್ವಾಮೀಜಿ, ಜಿ.ಪಂ. ಮಾಜಿ ಉಪಾ ಧ್ಯಕ್ಷ ಬಿ.ಜಿ.ಸೋಮಶೇಖರ್, ಉದ್ಯಮಿಗಳಾದ ಬಿ.ಎನ್. ರಾಜಶೇಖರ್, ಬಿ.ಎನ್.ಷಡಾಕ್ಷರಿ, ಸಾಹಿತಿ ಚಟ್ನಹಳ್ಳಿ ಮಹೇಶ್, ಸಖರಾಯಪಟ್ಟಣ ಬ್ಲಾಕ್ ಕಾಂಗ್ರೆಸ್ ಮಹಡಿಮನೆ ಸತೀಶ್, ಶ್ರೀ ಮರುಳಸಿದ್ದೇಶ್ವರ ಸೇವಾ ಟ್ರಸ್ಟ್ ಅಧ್ಯಕ್ಷ ಜಿ.ಎಂ.ರಮೇಶ್, ಉಪಾಧ್ಯಕ್ಷ ಜಿ.ರಮೇಶ್, ಗ್ರಾಮಸ್ಥರಾದ ಚಂದ್ರಶೇಖರ್, ಮಲ್ಲಿಕಾರ್ಜುನ್, ಗಿರೀಶ್, ಎಲ್.ಆರ್.ಈಶ್ವರಪ್ಪ ಉಪಸ್ಥಿತರಿದ್ದರು.

# ವಿಶ್ವದಲ್ಲೇ ಅತೀ ದೊಡ್ಡ ಪ್ರಜಾಪ್ರಭುತ್ವ ಭಾರತ




ಚಿಕ್ಕಮಗಳೂರು: ಭಾರತ ವಿಶ್ವದಲ್ಲೇ ಅತೀ ದೊಡ್ಡ ಹಾಗೂ ಶ್ರೇಷ್ಠ ಪ್ರಜಾಪ್ರಭುತ್ವ ರಾಷ್ಟ್ರ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನದ ಪಾತ್ರ ಅತ್ಯಂತ ಮಹತ್ತರವಾದದ್ದು ಎಂದು ಪ್ರಭಾರಿ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಸಿ.ಭಾನುಮತಿ ಹೇಳಿದರು.

ನಗರದ ಕುವೆಂಪು ಕಲಾಮಂದಿರದಲ್ಲಿ ಶನಿವಾರ ಭಾರತ ಚುನಾವಣಾ ಆಯೋಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಆಶ್ರಯದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತವು ಆಡಳಿತಾತ್ಮಕವಾಗಿ ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ವಿಶಿಷ್ಟತೆ ಹೊಂದಿದ ದೇಶವಾಗಿದೆ. ಅಂಬೇಡ್ಕರ್ ನೀಡಿದ ಸಂವಿಧಾನದಿಂದಲೇ 18 ವರ್ಷ ತುಂಬಿದ ಪ್ರತಿಯೊಬ್ಬ ಭಾರತೀಯರಿಗೂ ಮತದಾನ ಮಾಡುವ ಹಕ್ಕಿದೆ. ಅದೇ ರೀತಿ ಭಾರತೀಯ ಪ್ರಜೆಗಳು ಜವಾಬ್ದಾರಿಯಿಂದ ನಿರ್ವಹಿಸಬೇಕಾದ ಕರ್ತವ್ಯಗಳನ್ನು ತಿಳಿಸಿದೆ. 2025ನೇ ಮತದಾರರ ದಿನಾಚರಣೆಯನ್ನು ಮತದಾನಕ್ಕಿಂತ ಇನ್ನೊಂದಿಲ್ಲ. ನಾನು ಖಚಿತವಾಗಿ ಮತದಾನ ಮಾಡುವೆ ಎಂಬ ಘೋಷ ವಾಕ್ಯದೊಂದಿಗೆ ಆಚರಿಸಲಾಗುತ್ತಿದೆ ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ವಿ.ಹನುಮಂತಪ್ಪ ಮಾತನಾಡಿ, ಮತದಾನ ಎಂಬುದು ವಜ್ರಾಯುಧ ಇದ್ದಂತೆ. ಮತದಾರರು ಯಾವುದೇ ಆಸೆ, ಆಮಿಷ, ಜಾತಿ, ಧರ್ಮಕ್ಕೆ ಮರುಳಾಗದೆ ಮತದಾನದ ಹಕ್ಕು ಚಲಾಯಿಸಿ ಪ್ರಜಾಪ್ರಭುತ್ವದ ಅಸ್ತಿತ್ವ ಉಳಿಸಬೇಕು ಎಂದರು.

ಜಿಲ್ಲಾಧಿಕಾರಿ ಸಿ.ಎನ್.ಮೀನಾ ನಾಗರಾಜ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು 2011ರಿಂದ ಆಚರಿಸಲಾಗುತ್ತಿದೆ. ಅಂದಿನ ರಾಷ್ಟ್ರಪತಿ ಪ್ರತಿಭಾದೇವಿ ಸಿಂಗ್ ಪಾಟೀಲ್ ಅವರು ಭಾರತದ ಚುನಾವಣಾ ಆಯೋಗದ 61ನೇ ಸಂಸ್ಥಾಪನಾ ದಿನದಂದು ರಾಷ್ಟ್ರೀಯ ಮತದಾರರ ದಿನವನ್ನಾಗಿ ಆಚರಿಸುವ ಘೋಷಣೆ ಮಾಡಿದರು. ಮತದಾರರನ್ನು ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಲ್ಲಿ ಪ್ರೇರೇಪಿಸುವ ಸಲುವಾಗಿ, ಅವರಲ್ಲಿ ಮತದಾನದ ಮಹತ್ವದ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರತಿವರ್ಷ ಜ.25ರಂದು ಮತದಾನದ ದಿನಾಚರಣೆ ಆಚರಿಸಲಾಗುತ್ತಿದೆ ಎಂದರು.

ಜಿ.ಪಂ. ಸಿಇಒ ಎಚ್.ಎಸ್.ಕೀರ್ತನಾ ಮತದಾರರ ಪ್ರತಿಜ್ಞಾ ವಿಧಿ ಬೋಧಿಸಿದರು. ಚಿಕ್ಕಮಗಳೂರು ಉಪವಿಭಾಗದ ಉಪವಿಭಾಗಾಧಿಕಾರಿ, ಮತದಾರರ ನೋಂದಣಾಧಿಕಾರಿ ಎಸ್.ಆರ್.ರಶ್ಮಿ ಮಾತನಾಡಿದರು.

ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಪ್ರೌಢಶಾಲೆ, ಪದವಿ ಪೂರ್ವ, ಪದವಿ ಕಾಲೇಜು ವಿದ್ಯಾರ್ಥಿಗಳು ರಸಪ್ರಶ್ನೆ, ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ, ಪ್ರಶಸ್ತಿ ಪತ್ರಗಳನ್ನು ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೃಷ್ಣಮೂರ್ತಿ, ಚಿಕ್ಕಮಗಳೂರು ತಾಲ್ಲೂಕು ತಹಸೀಲ್ದಾರ್ ಡಾ.ಸುಮಂತ್, ಜಿಲ್ಲಾಧಿಕಾರಿಗಳ ಕಚೇರಿಯ ಚುನಾವಣಾ ಶಾಖೆಯ ಸಿಬ್ಬಂದಿಗಳು, ಚಿಕ್ಕಮಗಳೂರು ತಾಲ್ಲೂಕು ಕಚೇರಿಯ ಸಿಬ್ಬಂದಿಗಳು ಇದ್ದರು.

# ವಿವೇಕ-ವಿವೇಚನೆಯಿಂದ ಮತ ಚಲಾಯಿಸಿ

**ಹೊನ್ನಾಳಿ:** ತಪ್ಪುದಾರಿಯಲ್ಲಿ ಚುನಾವಣೆಯನ್ನು ಗೆಲ್ಲುವುದಕ್ಕಿಂತ ಗೌರವದಿಂದ ಸೋಲುವುದು ಉತ್ತಮ. ಯಾವುದೇ ಅಭ್ಯರ್ಥಿಯನ್ನು ಗೆಲ್ಲಿಸಲು ಅಥವಾ ಸೋಲಿಸಲು ಕಡ್ಡಾಯವಾಗಿ ಮತದಾನ ಮಾಡಬೇಕು. ವಿಶ್ವದ ಅತಿ ದೊಡ್ಡ ಜನತಾಂತ್ರಿಕ ಪ್ರಕ್ರಿಯೆಯನ್ನು ಮತ ಚಲಾಯಿಸುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಬೇಕೆಂದು ಪ್ರಾಂಶುಪಾಲ ಡಾ. ಬಿ.ಜಿ.ಧನಂಜಯ ಹೇಳಿದರು. ಹೊನ್ನಾಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.ಮತ ಚಲಾಯಿಸುವ ಮುನ್ನ ಮತದಾರರು ವಿವೇಕ ಮತ್ತು ವಿವೇಚನೆಯಿಂದ ಮತ ಚಲಾಯಿಸಬೇಕು. ಮತದಾರ ಭ್ರಷ್ಟನಾದರೆ ಪ್ರಜಾಪ್ರಭುತ್ವಕ್ಕೆ ಗಂಡಾಂತರ ಎದುರಾಗಲಿದೆ. ಮತದಾನದ ಮೂಲಕ ಅರ್ಹ, ದಕ್ಷ, ಕ್ರಿಯಾಶೀಲ, ದೇಶ ಮತ್ತು ಸಂವಿಧಾನದ ಅರಿವು ಹಾಗೂ ಸಾಮಾಜಿಕ ಕಳಕಳಿಯಿರುವ ಜನರ ಪ್ರತಿನಿಧಿಯನ್ನು ಆಯ್ಕೆಮಾಡಿ ಎಂದರು. ಕೆಲವು ವಿದ್ಯಾವಂತರು ಮತದಾನ ಪ್ರಕ್ರಿಯೆಯಿಂದ ದೂರ ಉಳಿದರೆ ಜನತಂತ್ರ ವ್ಯವಸ್ಥೆ ದುರ್ಬಲವಾಗುತ್ತದೆ. ಆದ್ದರಿಂದ ಸ್ಥಿರ ಮತ್ತು ಜನಪರ ಸರ್ಕಾರದ ರಚನೆಯಲ್ಲಿ ಎಲ್ಲಾ ಮತದಾರರು ತಮ್ಮ ಶಾಸನಬದ್ಧ ಹಕ್ಕನ್ನು ಚಲಾಯಿಸಬೇಕು. ಮತದಾರರು ಯಾವುದೇ ಆಸೆ ಆಮಿಷಗಳಿಗೆ ಒಳಗಾಗಬಾರದು. ಯಾವುದೇ ಅರ್ಹ ಮತದಾರ ಮತದಾನದಿಂದ ವಂಚಿತರಾಗಬಾರದು. ಸ್ವತಂತ್ರವಾಗಿ ಮತ್ತು ನಿರ್ಭಿತಿಯಿಂದ ಮತ ಚಲಾಯಿಸಿ ಸಂವಿಧಾನದ ಘನತೆ ಹಾಗೂ ಗೌರವವನ್ನು ಹೆಚ್ಚಿಸಿ ಎಂದರು.ಶಿಕಾರಿಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಪ್ರೊ.ದೇವರಾಜ ಸಿ.ಪಾಟೀಲ್, ಮತದಾರರ ಸಾಕ್ಷರತಾ ಕ್ಲಬ್ ಸಂಚಾಲಕ ಜಿ.ಎಸ್.ರಾಘವೇಂದ್ರರಾವ್, ರಾಷ್ಟ್ರೀಯ ಸೇವಾ ಯೋಜನಾಧಿಕಾರಿ ಹರಾಳು ಮಹಾಬಲೇಶ್ವರ, ಗ್ರಂಥಪಾಲಕ ಎಂ.ನಾಗರಾಜ ನಾಯ್ಕ, ಶ್ರೀನಿವಾಸ್, ಸೀಮಾಬಾನು ಬಿ., ಶಾಂತ ಎಂ., ಶಿವಕುಮಾರ್ ಎಂ., ಮೀನಾಕ್ಷಮ್ಮ, ಅಣ್ಣಪ್ಪ, ರಿಯಾಜ್ ವೈ.ಆರ್ ಇದ್ದರು,

# ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮತದಾರ-ಮತದಾನ ಪ್ರಮುಖ




ಹೊನ್ನಾಳಿ: ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮತದಾರ, ಮತದಾನ ಎರಡು ಬಹು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಪಟ್ಟಣದ ಜೆಎಂಎಫ್‌ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಎಚ್. ದೇವದಾಸ್ ಹೇಳಿದರು.

ತಾಲೂಕಿನ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಶನಿವಾರ ತಾಲೂಕು ಆಡಳಿತ, ತಾಲೂಕು ವಕೀಲರ ಸಂಘ, ಕಾನೂನು ಸೇವಾ ಸಮಿತಿ ಹಾಗೂ ಚುನಾವಣಾ ಸಾಕ್ಷರತಾ ಸಮಿತಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಒಂದು ದೇಶದ ಅಭಿವೃದ್ಧಿ ಮತ್ತು ಭವಿಷ್ಯ ದೇಶದ ಮತದಾರರು ಚುನಾವಣೆಗಳಲ್ಲಿ ಆಯ್ಕೆ ಮಾಡುವ ನಾಯಕರ ಮೇಲೆ ಅವಲಂಭಿತವಾಗಿರುತ್ತದೆ. ದೇಶದ ಸಂವಿಧಾನ ಈ ದೇಶದ ಪ್ರಜೆಗಳಿಗೆ ಮತದಾನ ಎನ್ನುವ ಗುರುತರ ಜವಾಬ್ದಾರಿಯುತ ಹಕ್ಕನ್ನು ದಯಪಾಲಿಸಿದೆ ಎಂದು ಹೇಳಿದರು.

ಇದೇ ಸಂದದರ್ಭದಲ್ಲಿ ತಮ್ಮ ಕಾಲೇಜಿಗೆ ಸಮಯಕ್ಕೆ ಸರಿಯಾಗಿ ಬಸ್ ವ್ಯವಸ್ಥೆ ಇಲ್ಲ ಎಂದು ಕಾಲೇಜಿನ ವಿದ್ಯಾರ್ಥಿಗಳು ನ್ಯಾಯಾಧೀಶರ ಗಮನಕ್ಕೆ ತಂದಾಗ ಅವರು ಮಾತನಾಡಿ ಎಲ್ಲ ವಿದ್ಯಾರ್ಥಿಗಳು ಕಡ್ಡಾಯವಾಗಿ ಬಸ್‌ನಲ್ಲಿಯೇ ಕಾಲೇಜಿಗೆ ಬಂದು ಹೋಗುವುದು ಮಾಡುತ್ತೇವೆ ಎಂದು ಹೇಳಿದರು.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಪುಣ್ಯಕೋಟಿ ಮಾತನಾಡಿ, ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ಕಾಲೇಜುಗಳಲ್ಲಿಯೇ ಮಾಡುವ ಉದ್ದೇಶ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಇರುತ್ತಾರೆ. ಅವರಿಗೆ ಮತದಾನದ ಮಹತ್ವ ತಿಳಿಯಬೇಕಾಗಿದೆ. ಜೊತೆಗೆ ಕಡ್ಡಾಯವಾಗಿ 18 ವರ್ಷ ತುಂಬಿದ ಪ್ರತಿಯೊಬ್ಬರೂ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಬೇಕು. ಈ ಬಗ್ಗೆ ಅವರಿಗೆ ತಿಳುವಳಿಕೆ ನೀಡುವ ಕಾರಣಕ್ಕೆ ಕಾಲೇಜುಗಳಲ್ಲಿ ಮತದಾರರ ದಿನಾಚರಣೆ ಅಚರಿಸಲಾಗುತ್ತಿದೆ. ಎಲ್ಲರೂ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿ ಗುರುತಿನ ಚೀಟಿ ಪಡೆದು ಚುನಾವಣೆಗಳ ಸಂದರ್ಭದಲ್ಲಿ ತಪ್ಪದೇ ಮತ ಚಲಾಯಿಸಬೇಕು. ಜೊತೆಗೆ ಇತರರು ಮತ ಚಲಾಯಿಸುವಂತೆ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಉಪವಿಭಾಗಾಧಿಕಾರಿ ಅಭಿಷೇಕ್ ಮಾತನಾಡಿ, ಚುನಾವಣೆ ನೀತಿ ಸಂಹಿತೆ, ಮತದಾರರ ಪಟ್ಟಿ ತಯಾರಿಕೆ ವಿಷಯಗಳ ಕುರಿತು ಮಾಹಿತಿ ನೀಡಿದರು. ತಹಸೀಲ್ದಾರ್ ಪಟ್ಟರಾಜಗೌಡ ಅವರು ಮತದಾನದ ಬಗ್ಗೆ ಎಲ್ಲರಿಗೂ ಪ್ರತಿಜ್ಞಾವಿಧಿ ಬೋಧಿಸಿದರು. ವಕೀಲರಾದ ಎಚ್.ಕರುಣಾಕರ ಅವರು ಮತದಾರರ ಹಕ್ಕು ಮತ್ತು ಕರ್ತವ್ಯ ಕುರಿತು ಉಪನ್ಯಾಸ ನೀಡಿ-ದರು. ಕಾಲೇಜಿನ ಪ್ರಾಂಶುಪಾಲ ಟಾಕಪ್ಪ ಚೌವ್ಹಾಣ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ತಾಲೂಕು ವಕೀಲರ ಸಂಘದ ಅಧ್ಯಕ್ಷ ಕೆ.ಪಿ.ಜಯಪ್ಪ ಅವರು ಸಂವಿಧಾನ, ಚುನಾವಣೆಗಳ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಸರ್ಕಾರಿ ಸಹಾಯಕ ಅಭಿಯೋಜಕ ಭರತ್ ಭೀಮಯ್ಯ, ಸಿಪಿಐ ಸುನಿಲ್‌ಕುಮಾರ್, ತಾಪಂ ಇಒ ಎಂ.ಆರ್.ಪ್ರಕಾಶ್, ಬಿಆರ್‌ಸಿ ತಿಪ್ಪೇಶಪ್ಪ, ವಕೀಲರಾದ ಚಂದ್ರಪ್ಪ ಮಡಿವಾಳ್, ಬಿ.ಎಂ.ಪುರುಷೋತ್ತಮ್, ಕಾಲೇಜಿನ ಉಪನ್ಯಾಸಕ ವರ್ಗ, ವಿದ್ಯಾರ್ಥಿಗಳು ಇದ್ದರು.

# ಡಿಎಲ್-ಆರ್‌ಸಿ ಕಾರ್ಡ್‌ಗಳ ವಿಲೆಗೆ ಶೀಘ್ರವೇ ಕ್ರಮ ಕೈಗೊಳ್ಳಬೇಕು

**ಮೂಡಿಗೆರೆ:** ಕಳೆದ 2 ತಿಂಗಳಿಂದ ಚಾಲನ ಪ್ರಮಾಣ ಪತ್ರ, ನೊಂದಣಿ ಪ್ರಮಾಣ ಪತ್ರ ಸಾರಿಗೆ ಇಲಾಖೆಯಿಂದ ವಿತರಣೆ ಮಾಡದಿದ್ದರಿಂದ ವಾಹನ ಮಾಲೀಕರು ತೀವ್ರ ತೊಂದರೆ ಅನುಭವಿಸುವಂತಾಗಿದೆ ಎಂದು ಆಟೋ ಚಾಲಕರು, ಮಾಲೀಕರ ಸಂಘದ ಗೌರವಾಧ್ಯಕ್ಷ ಅಮರ್‌ನಾಥ್ ದೂರಿದ್ದಾರೆ. ಶನಿವಾರ ಹೇಳಿಕೆಯಲ್ಲಿ ತಿಳಿಸಿರುವ ಅವರು, ಕಳೆದ ನ.1ರಿಂದ ಇಲ್ಲಿಯವರೆಗೂ ನವೀಕರಣಕ್ಕಾಗಿ, ಹೊಸ ಡಿಎಲ್ ಪಡೆಯಲು ಅರ್ಜಿ ಸಲ್ಲಿಸಿದವರಿಗೆ ಡಿಎಲ್ ವಿತರಿಸಿಲ್ಲ. ಕಳೆದ ನ.20ರಿಂದ ಇಲ್ಲಿಯವರೆಗೂ ಆರ್‌ಸಿ ಕಾರ್ಡ್‌ಗಳನ್ನು ಕೂಡ ವಿತರಣೆ ವಿಲೆ ಮಾಡಿಲ್ಲ. ಇದರಿಂದ ವಾಹನದ ದಾಖಲಾತಿಗಳನ್ನು ಇಟ್ಟುಕೊಳ್ಳದೆ ವಾಹನ ಚಲಾಯಿಸಬೇಕಾದ ಅನಿವಾರ್ಯತೆಗೆ ವಾಹನ ಮಾಲೀಕರು, ಚಾಲಕರು ಸಿಲುಕಿದ್ದಾರೆ. ರಸ್ತೆಯಲ್ಲಿ ಪ್ರತಿದಿನ ಪೊಲೀಸ್, ಸಾರಿಗೆ ಇಲಾಖೆ ತಪಾಸಣೆ ಮಾಡುತ್ತಿದ್ದು, ದೊಡ್ಡ ಪ್ರಮಾಣದಲ್ಲಿ ದಂಡ ಪಾವತಿಸುವ ಅನಿವಾರ್ಯತೆಗೆ ವಾಹನ ಚಾಲಕರು ಸಿಲುಕಿದ್ದಾರೆ. ಸಾರಿಗೆ ಇಲಾಖೆಯಿಂದಾಗುತ್ತಿರುವ ತಪ್ಪಿನಿಂದಾಗಿ ವಾಹನ ಮಾಲೀಕರು ದಂಡ ಕಟ್ಟುವಂತಾಗಿದೆ. ಅಲ್ಲದೆ ವಾಹನವೇನಾದರೂ ಅಪಘಾತಕ್ಕೊಳಗಾದಾಗ, ವೀಮಾ ಪರಿಹಾರದ ಸಂದರ್ಭದಲ್ಲಿ ದಾಖಲಾತಿಗಳನ್ನು ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಈ ಬಗ್ಗೆ ಸರಕಾರ, ಸಾರಿಗೆ ಇಲಾಖೆ ಗಮನಹರಿಸಿ ಕೂಡಲೇ ಸಮಸ್ಯೆ ಪರಿಹರಿಸಬೇಕೆಂದು ಒತ್ತಾಯಿಸಿದ್ದಾರೆ.

# ಸಮಾಜದ ಸ್ವಾಸ್ಥ್ಯ ಕಾಪಾಡಲು ಜಾನಪದ ಕಲೆ ಅಗತ್ಯ : ಸುರೇಶ್




**ಚಿಕ್ಕಮಗಳೂರು:** ಸಮಾಜದ ಸ್ವಾಸ್ಥ್ಯ ಕಾಪಾಡಲು ಜಾನಪದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಅತ್ಯಗತ್ಯ ಎಂದು ಕರ್ನಾಟಕ ಜಾನಪದ ಪರಿಷತ್ತಿನ ಜಿಲ್ಲಾಧ್ಯಕ್ಷ ಜಿ.ಬಿ.ಸುರೇಶ್ ಹೇಳಿದರು.

ಬಾಳೆಹೊನ್ನೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಸೋಮವಾರ ನಡೆದ ಕರ್ನಾಟಕ ಜಾನಪದ ಪರಿಷತ್ತಿನ ಎನ್.ಆರ್‌ಪುರ ತಾಲೂಕು ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವಾಸ ಸಂಸ್ಥೆಯ ಮಾನ್ಯತೆ ಪಡೆದ ಹೆಗ್ಗಳಿಕೆ ಹೊಂದಿರುವ ಕರ್ನಾಟಕ ಜಾನಪದ ಪರಿಷತ್ ಜಾನಪದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಉಳಿಸಿ, ಬೆಳೆಸಲು ಜಿಲ್ಲೆಯಲ್ಲಿ ನಿರಂತರವಾಗಿ ಶ್ರಮಿಸುತ್ತಿದೆ ಹತ್ತು ಹಲವು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ ಎಂದು ತಿಳಿಸಿದರು.

ಹಿರಿಯರಿಂದ ನಮಗೆ ಬಳುವಳಿಯಾಗಿ ಬಂದಿರುವ ಜಾನಪದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ನಾವು ನಮ್ಮ ಮುಂದಿನ ಪೀಳಿಗೆಗೆ ಬಳುವಳಿಯಾಗಿ ನೀಡಬೇಕಾಗಿದೆ. ಜಾನಪದದಲ್ಲಿ 250ಕ್ಕೂ ಹೆಚ್ಚು ಪ್ರಾಕಾರಗಳಿವೆ. ಜಾನಪದವನ್ನು ಮೈಗೂಡಿಸಿಕೊಂಡಲ್ಲಿ ನಮ್ಮ ಬದುಕು ಭವ್ಯವಾಗುತ್ತದೆ ಎಂದು ಹೇಳಿದರು.

ಬಿ ಕಣಬೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ರವಿಚಂದ್ರ ಮಾತನಾಡಿ, ಎಲ್ಲ ಭಾಷೆಗಳಿಗೂ ಎಲ್ಲಾ ಸಂಸ್ಕೃತಿಗಳಿಗೂ ಮೂಲ ದ್ರವ್ಯ ಜಾನಪದವಾಗಿದ್ದು, ಅದು ಉಳಿದರೆ ಮಾತ್ರ ನಮ್ಮ ಸಂಸ್ಕೃತಿ ಉಳಿಯುತ್ತದೆ ಎಂದು ಹೇಳಿದರು.

ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಯಜ್ಞಪುರುಷ ಭಟ್ ಮಾತನಾಡಿ, ಹಳೆಬೇರು ಹೊಸಚಿಗುರು ಕೂಡಿರಲು ಮರಸೊಬಗೆಂಬುವಂತೆ, ಭಾರತೀಯ ಸಂಸ್ಕೃತಿ ಉಳಿದು ಬೆಳೆಯಬೇಕೆಂದರೆ ಜಾನಪದ ಸಂಸ್ಕೃತಿ ಅತಿ ಮುಖ್ಯವಾಗಿದೆ, ಎಲ್ಲಾ ಧರ್ಮ ಸಂಸ್ಕೃತಿ ಸಾಹಿತ್ಯದ ತಳಪಾಯ ಜಾನಪದವೇ ಆಗಿದೆ. ಇದನ್ನು ಸಂರಕ್ಷಿಸಲು ಕರ್ನಾಟಕ ಜಾನಪದ ಪರಿಷತ್ತು ರಾಜ್ಯದಲ್ಲೆಲ್ಲಾ ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ, ಕಜಾಪ ಎನ್.ಆರ್ ಪುರ ತಾಲೂಕು ಅಧ್ಯಕ್ಷ, ಅರಳಿಕೊಪ್ಪ ಸತೀಶ್, ಸಮಾಜದಲ್ಲಿ, ಕುಟುಂಬದಲ್ಲಿ ನ್ಯಾಯ, ನೀತಿ, ಧರ್ಮ, ಶಾಂತಿ ನೆಲೆಸಬೇಕಾದರೆ, ಜನಪದರು ಉಳಿಸಿ ಬೆಳೆಸಿದ, ಜನಪದ ಸಾಹಿತ್ಯ ಕಲೆ ಸಂಸ್ಕೃತಿಯನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಸಾಹಿತಿ ಕೆ.ಟಿ. ವೆಂಕಟೇಶ ಮಾತನಾಡಿ, ಜಾನಪದವೆಂದರೆ ಬರಿ ಹಾಡಲ್ಲ ಇದರಲ್ಲಿ 250ಕ್ಕೂ ಹೆಚ್ಚು ಕಲಾ ಪ್ರಕಾರಗಳಿವೆ. ಅದಲ್ಲದೆ ನೂರಾರು ಜನಜಾನಪದ ವಿದ್ವಾಂಸರು ರಚಿಸಿರುವ ಜೀವನ ಪಾಠದ ಗ್ರಂಥ ಭಂಡಾರವೇ ಅಡಗಿದೆ ಎಂದು ತಿಳಿಸಿದರು.

ಎನ್.ಆರ್ ಪುರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪೂರ್ಣೇಶ್, ಕವಯತ್ರಿ ಲತಾ, ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ತಮನ್ನಾ ಮುನಾವರ್, ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಮಂಜುನಾಥ್, ಶಾಲೆಯ ಮುಖ್ಯ ಶಿಕ್ಷಕ ಕೊಟ್ರೇಶ್‌ರವರನ್ನು ಸನ್ಮಾನಿಸಲಾಯಿತು.

ಎಸ್‌ಡಿಎಮ್‌ಸಿ ಅಧ್ಯಕ್ಷ ಮಹೇಶ್‌ಆಚಾರ್ಯ, ಕಾಂತರಾಜ್, ಚೇತನ್ಯ ವೆಂಕಿ, ಇಬ್ರಾಹಿಂ ಶಾಫಿ, ಉಮೇಶ್, ರಾಜೇಂದ್ರ.ಡಿ, ರವೀಂದ್ರ ಡಿ, ಕಾರ್ತಿಕ್, ಸಿ.ಪಿ.ರಮೇಶ್, ಜಯಪ್ರಕಾಶ್, ಶೇಖರ್, ವಿಶ್ವನಾಥ್, ಸುನಿಲ್ ರಾಜ್ ಭಂಡಾರಿ, ಸುಧಾಕರ್ ಉಪಸ್ಥಿತರಿದ್ದರು.

# 8 ವರ್ಷದ ಬಾಲಕಿ ಮೇಲೆ ಅತ್ಯಾಚಾರ; ಇಬ್ಬರ ವಿರುದ್ಧ ಪೋಕ್ಸೋ ಕಾಯ್ದೆ

**ಬೆಂಗಳೂರು:** ಸರ್ಕಾರಿ ಶಾಲೆಯ ಶೌಚಾಲಯದಲ್ಲಿ 8 ವರ್ಷದ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಇಬ್ಬರು ಆರೋಪಿಗಳ ವಿರುದ್ಧ ಸೋಮವಾರ ಪೋಕ್ಸೋ ಪ್ರಕರಣ ದಾಖಲಿಸಿದ್ದಾರೆ. ಜನವರಿ 31 ರಂದು ನಡೆದಿದ್ದ ಘಟನೆ ತಡವಾಗಿ ಬೆಳಕಿಗೆ ಬಂದಿತ್ತು. ಕೇಕ್ ಕೊಡಿಸಿ, ಚಾಕು ಹಾಕುವುದಾಗಿ ಬೆದರಿಸಿ ಸರ್ಕಾರಿ ಶಾಲೆಯ ಶೌಚಾಲಯದಲ್ಲಿ 8 ವರ್ಷದ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಲಾಗಿತ್ತು. ಸರ್ಕಾರಿ ಶಾಲೆಯ ಎರಡನೇ ತರಗತಿಯವಿದ್ಯಾರ್ಥಿನಿಯಾಗಿರುವ ಬಾಲಕಿಯನ್ನು ಇಬ್ಬರು ಹುಡುಗರು ಶೌಚಾಲಯಕ್ಕೆ ಕರೆದೊಯ್ದಿದ್ದಾರೆ. ಬಳಿಕ ಬಟ್ಟೆ ತೆಗೆಯುವಂತೆ ಬೆದರಿಸಿ, ನಂತರ ಕೋಲಿನಿಂದ ಹೊಡೆದಿದ್ದಾರೆ ಎಂದು ಸಂತ್ರಸ್ಥೆ ಆರೋಪಿಸಿದ್ದಾರೆ.

# ಜನವರಿಯಲ್ಲಿ ಭಾರತದ ಉತ್ಪಾದನಾ ಬೆಳವಣಿಗೆ 6 ತಿಂಗಳ ಗರಿಷ್ಠ ಮಟ್ಟಕ್ಕೆ

**ನವದೆಹಲಿ:** ಭಾರತದ ಉತ್ಪಾದನಾ ವಲಯ 2025ನೇ ವರ್ಷವನ್ನು ಬಲವಾದ ಹೆಜ್ಜೆಯೊಂದಿಗೆ ಪ್ರಾರಂಭಿಸಿದ್ದು, ಜನವರಿಯಲ್ಲಿ ಭಾರತದ ಉತ್ಪಾದನಾ ಬೆಳವಣಿಗೆ ಆರು ತಿಂಗಳ ಗರಿಷ್ಠ ಮಟ್ಟವನ್ನು ತಲುಪಿದೆ.

ಸೋಮವಾರ ಬಿಡುಗಡೆಯಾದ ಮಾಸಿಕ ಸಮೀಕ್ಷೆ ಪ್ರಕಾರ, ಜನವರಿಯಲ್ಲಿ ಭಾರತದ ಉತ್ಪಾದನಾ ಬೆಳವಣಿಗೆ ಆರು ತಿಂಗಳ ಗರಿಷ್ಠ ಮಟ್ಟವನ್ನು ತಲುಪಿದ್ದು, ಸುಮಾರು 14 ವರ್ಷಗಳಲ್ಲಿ ರಫ್ತುಗಳಲ್ಲಿನ ಕಡಿದಾದ ಏರಿಕೆಯಿಂದ ಇದು ಉತ್ತೇಜನಗೊಂಡಿದೆ ಎಂದು ತಿಳಿಸಿದೆ.

ಅಂತೆಯೇ ಫೆಬ್ರವರಿ 2011 ರಿಂದ ಹೊಸ ರಫ್ತುಗಳಲ್ಲಿನ ವೇಗದ ಏರಿಕೆಯಿಂದ ಬೆಂಬಲಿತವಾಗಿ ಋತುಮಾನಕ್ಕೆ ಅನುಗುಣವಾಗಿ ಹೊಂದಾಣಿಕೆ ಮಾಡಲಾದ ಊಖಃಅ ಇಂಡಿಯಾ ಬಿಡುಗಡೆ ಮಾಡಿರುವ ಉತ್ಪಾದನಾ ಖರೀದಿ ವ್ಯವಸ್ಥಾಪಕರ ಸೂಚ್ಯಂಕ (ಕಒಖ) ಜನವರಿಯಲ್ಲಿ ಡಿಸೆಂಬರ್ನ ಒಂದು ವರ್ಷದ ಕನಿಷ್ಠ 56.4 ರಿಂದ 57.7 ಕ್ಕೆ ಏರಿತು ಎಂದು ತಿಳಿಸಿದೆ. ಅಂತೆಯೇ ಕಒಖ ಪರಿಭಾಷೆಯಲ್ಲಿ, 50 ಕ್ಕಿಂತ ಹೆಚ್ಚಿನ ಪ್ರಮಾಣವು ವಿಸ್ತರಣೆಯನ್ನು ಸೂಚಿಸುತ್ತದೆ, ಆದರೆ 50 ಕ್ಕಿಂತ ಕಡಿಮೆ ಪ್ರಮಾಣವು ಇಳಿಕೆಯನ್ನು ಸೂಚಿಸುತ್ತದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಈ ಅಂಕಿ ಅಂಶವು ಜಾಗತಿಕವಾಗಿ ಬಳಕೆ ಪ್ರಮಾಣ ದುರ್ಬಲವಾಗಿರುವುದರಿಂದ ಮತ್ತು ಕಳೆದ ಕೆಲವು ತ್ರೈಮಾಸಿಕಗಳಲ್ಲಿ ಬೆಳವಣಿಗೆಯಲ್ಲಿ ನಿಧಾನಗತಿಯನ್ನು ಕಂಡಿರುವ ಏಷ್ಯಾದ ಮೂರನೇ ಅತಿದೊಡ್ಡ ಆರ್ಥಿಕತೆಯಾದ ಭಾರತಕ್ಕೆ ನೆಮ್ಮದಿಯ ನಿಟ್ಟುಸಿರು ಬಿಡುವಂತೆ ಮಾಡಿದೆ. ಖ&ಕ ಗ್ಲೋಬಲ್ ಸಂಗ್ರಹಿಸಿದ ಊಖಃಅ ಅಂತಿಮ ಭಾರತ ಉತ್ಪಾದನಾ ಖರೀದಿ ವ್ಯವಸ್ಥಾಪಕರ ಸೂಚ್ಯಂಕ (ಖಓಕಒಖ=ಇಅಖ), ಡಿಸೆಂಬರ್ನ 12 ತಿಂಗಳ ಕನಿಷ್ಠ 56.4 ರಿಂದ ಕಳೆದ ತಿಂಗಳು 57.7 ಕ್ಕೆ ಏರಿದ್ದು, ಇದು 58.0 ಕ್ಕೆ ಏರಿಕೆಯನ್ನು ತೋರಿಸಿದ ಆರಂಭಿಕ ಅಂದಾಜಿಗಿಂತ ಸ್ವಲ್ಪ ಕಡಿಮೆಯಾಗಿದೆ ಎಂದು ಹೇಳಿದೆ

ಇದು ಮುಂಬರುವ 12 ತಿಂಗಳುಗಳಿಗೆ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಸಮೀಕ್ಷೆ ಪ್ರಾರಂಭವಾದ ಕನಿಷ್ಠ ಮಾರ್ಚ್ 2005 ರಿಂದ ಸಂಸ್ಥೆಗಳು ತಮ್ಮ ಕಾರ್ಯಪಡೆಯನ್ನು ಪ್ರಬಲ ವೇಗದಲ್ಲಿ ವಿಸ್ತರಿಸುತ್ತಿವೆ ಎಂದು ವರದಿ ಹೇಳಿದೆ.

ವಿಜನವರಿಯಲ್ಲಿ ಭಾರತದ ಅಂತಿಮ ಉತ್ಪಾದನಾ ಕಒಖ ಆರು ತಿಂಗಳ ಗರಿಷ್ಠ ಮಟ್ಟವನ್ನು ತಲುಪಿದೆ. ದೇಶೀಯ ಮತ್ತು ರಫ್ತು ಬೇಡಿಕೆ ಎರಡೂ ಪ್ರಬಲವಾಗಿದ್ದು, ಹೊಸ ಆದೇಶಗಳ (ಔಡಿಜಜಿಥಿ) ಬೆಳವಣಿಗೆಯನ್ನು ಬೆಂಬಲಿಸುತ್ತದೆಹಿ ಎಂದು ಊಖಃಅ ಯ ಭಾರತದ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಾಂಜುಲ್ ಭಂಡಾರಿ ಹೇಳಿದರು.

ಇನ್ಪುಟ್ ಬೆಲೆಗಳು ಸುಮಾರು ಒಂದು ವರ್ಷದಲ್ಲಿ ಅತ್ಯಂತ ದುರ್ಬಲ ವೇಗದಲ್ಲಿ ಏರಿಕೆಯಾಗಿದ್ದು, ಕಳೆದ ತಿಂಗಳು ಸಂಸ್ಥೆಗಳು ಮಾರಾಟದ ಬೆಲೆಗಳನ್ನು ನಿಧಾನಗತಿಯಲ್ಲಿ ಹೆಚ್ಚಿಸಲು ಅನುವು ಮಾಡಿಕೊಟ್ಟಿವೆ. ಹಣದುಬ್ಬರವು ಕಳೆದ ವರ್ಷದ ಬಹುಪಾಲು ಭಾರತೀಯ ರಿಸರ್ವ್ ಬ್ಯಾಂಕಿನ ಮಧ್ಯಮ-ಅವಧಿಯ ಗುರಿಯಾದ 4% ಗಿಂತ ಹೆಚ್ಚಿನ ಮಟ್ಟದಲ್ಲಿದೆ ಎಂಬುದನ್ನು ಗಮನಿಸಿದರೆ ಇದು ಸ್ವಾಗತಾರ್ಹ ಸುದ್ದಿಯಾಗಿದೆ ಎಂದು ವರದಿ ಹೇಳಿದೆ.

# ವಾರದ ಮೊದಲ ದಿನವೇ SENSEX ಕುಸಿತ; ಏಷ್ಯನ್ ಮಾರುಕಟ್ಟೆ ನೀರಸ ವಹಿವಾಟು!



**ಮುಂಬೈ:** ಕೇಂದ್ರ ಬಜೆಟ್ ಉತ್ಸಾಹದಲ್ಲಿದ್ದ ಭಾರತೀಯ ಷೇರುಮಾರುಕಟ್ಟೆ ವಾರದ ಮೊದಲ ದಿನವೇ ನೀರಸ ವಹಿವಾಟು ನಡೆಸಿದ್ದು, ಸೆನ್ಸೆಕ್ಸ್ ಮತ್ತು ನಿಫ್ಟಿ ಎರಡೂ ರೆಡ್ ನಲ್ಲಿ ಅಂತ್ಯಗೊಂಡಿವೆ.

ಹೌದು.. ಸೋಮವಾರ ಷೇರುಮಾರುಕಟ್ಟೆ ಸೂಚ್ಯಂಕಗಳು ರೆಡ್ ನಲ್ಲಿ ವಹಿವಾಟು ಅಂತ್ಯಗೊಳಿಸಿದ್ದು, ಭಾರತ ಮಾತ್ರವಲ್ಲದೇ ಇತರೆ ಏಷ್ಯನ್ ಮಾರುಕಟ್ಟೆಗಳೂ ಕೂಡ ನೀರಸ ವಹಿವಾಟು ನಡೆಸಿವೆ.

ಸೋಮವಾರ ಭಾರತೀಯ ಷೇರುಮಾರುಕಟ್ಟೆ ಕುಸಿತದೊಂದಿಗೆ ದಿನದ ವಹಿವಾಟು ಅಂತ್ಯಗೊಳಿಸಿದ್ದು, ಷೇರುಮಾರುಕಟ್ಟೆ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಎರಡೂ ರೆಡ್ ನಲ್ಲಿ ವಹಿವಾಟು ಅಂತ್ಯಗೊಳಿಸಿದೆ.

ಇಂದಿನ ವಹಿವಾಟಿನಲ್ಲಿ ಸೆನ್ಸೆಕ್ಸ್ ಶೇ.0.41ರಷ್ಟು ಇಳಿಕೆ ಕಂಡಿದ್ದರೆ, ನಿಫ್ಟಿ ಕೂಡ ಶೇ.0.52ರಷ್ಟು ಕುಸಿತ ದಾಖಲಿಸಿದೆ. ಸೆನ್ಸೆಕ್ಸ್ ಇಂದು 319.22ಅಂಕಗಳ ಇಳಿಕೆಯೊಂದಿಗೆ 77,186.74 ಅಂಕಗಳಿಗೆ ಕುಸಿತವಾಗಿದ್ದರೆ, ನಿಫ್ಟಿ 121.10 ಅಂಕಗಳ ಕುಸಿತದೊಂದಿಗೆ 23,361.05 ಅಂಕಗಳಿಗೆ ಇಳಿಕೆಯಾಗಿ ದಿನದ ವಹಿವಾಟು ಅಂತ್ಯಗೊಳಿಸಿದೆ.

ಏಷ್ಯನ್ ಮಾರುಕಟ್ಟೆಗಳ ನೀರಸ ವಹಿವಾಟು!

ಭಾರತ ಮಾತ್ರವಲ್ಲದೇ ಸಿಯೋಲ್, ಟೋಕಿಯೊ ಮತ್ತು ಹಾಂಗ್ ಕಾಂಗ್ನಲ್ಲಿನ ಏಷ್ಯಾದ ಮಾರುಕಟ್ಟೆಗಳು ಗಮನಾರ್ಹವಾಗಿ ಕುಸಿತದೊಂದಿಗೆ ದಿನದ ವಹಿವಾಟು ಮುಕ್ತಾಯಗೊಳಿಸಿದವು. ಯುರೋಪಿಯನ್ ಮಾರುಕಟ್ಟೆಗಳು ಗಣನೀಯ ನಷ್ಟವನ್ನು ಅನುಭವಿಸಿದರೆ, ಅಮೆರಿಕ ಮಾರುಕಟ್ಟೆಗಳು ಕೂಡ ಕುಸಿತದೊಂದಿಗೆ ಮುಕ್ತಾಯಗೊಂಡವು.

ಯಾರಿಗೆ ಲಾಭ? ಯಾರಿಗೆ ನಷ್ಟ?

ಇಂದಿನ ವಹಿವಾಟಿನಲ್ಲಿ ಸೆನ್ಸೆಕ್ಸ್ ನಲ್ಲಿ ಪಟ್ಟಿ ಮಾಡಲಾದ ಸಂಸ್ಥೆಗಳ ಪೈಕಿ ಬಜಾಜ್ ಫೈನಾನ್ಸ್ ಸುಮಾರು ಶೇಕಡಾ 5 ರಷ್ಟು ಏರಿಕೆ ಸಾಧಿಸಿದ್ದರೆ, ಉಳಿದಂತೆ ಮಹೀಂದ್ರಾ & ಮಹೀಂದ್ರಾ, ಬಜಾಜ್ ಫಿನ್ಸರ್ವ್,

ಭಾರ್ತಿ ಏರ್ಟೆಲ್ ಮತ್ತು ಮಾರುತಿ ಸಂಸ್ಥೆಯ ಷೇರುಗಳು ಲಾಭಾಂಶ ಕಂಡಿದೆ. ಅಂತೆಯೇ ಲಾರ್ಸೆನ್ & ಟೂಬ್ರೊ, ಟಾಟಾ ಮೋಟಾರ್ಸ್, ಹಿಂದೂಸ್ತಾನ್ ಯೂನಿಲಿವರ್, ಏಷ್ಯನ್ ಪೇಂಟ್ಸ್, ಐಟಿಸಿ, ಪವರ್ ಗ್ರಿಡ್, ಎನ್ಟಿಪಿಸಿ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಸಂಸ್ಥೆಯ ಷೇರುಗಳು ನಷ್ಟ ಕಂಡಿವೆ.

# ಹಳ್ಳಿಜೀವನ ಚೆಂದವ್ರೋ ಸಿಟಿ ಜೀವನ ಚೆಂದವ್ರೋ?

ದೂರದ ಬೆಟ್ಟ ನುಣ್ಣಗೇ ಅಂತ ಸುಮ್ಮನೆ ಹೇಳಿಲ್ಲ. ಹಳ್ಳಿ ಜೀವನ ತುಂಬಾ ಚಂದ. ನಾನು ಬಯಸಿ ಮದುವೆ ಆದದ್ದು ಸಿಟಿ ಜೀವನ ಬೇಕು ಅಂತ ಇಲ್ಲಿ ಜೀವನ ಮಾಡೋಕೆ ಸಾಕಷ್ಟು ಹಣ ಬೇಕು, ಸಂಪಾದನೆ ಮಾಡೋಕೆ ಹುಶಾರ್ ಇರಲಿ ಇಲ್ಲದೆ ಹೋಗಲಿ. ದುಡಿಯಲೇ ಬೇಕು.ಅಷ್ಟೇ ಅಲ್ಲ ಇಲ್ಲಿ ಊಟ ಇಲ್ಲದಿದ್ದರೂ ಒಳ್ಳೆಯ ಬಟ್ಟೆ ಹಾಕಿದರೆ ಅಷ್ಟೇ ಬೆಲೆ. ಇದಷ್ಟೇ ಅಲ್ಲ ನಮಗೆ ಅಕ್ಕ ಪಕ್ಕದ ಮನೆಯವರ ಪರಿಚಯ ಸಹ ಇರೋದಿಲ್ಲ. ಎಲ್ಲದಕ್ಕಿಂತ ಹೆಚ್ಚಾಗಿ ಮಾತನಾಡಲು ಸಮಯವೂ ಇರಲ್ಲ. ಎದ್ರೆ ಕೆಲ್ಸಕ್ಕೆ ಹೋಗೋದು ಬಂದ್ರೆ ಅಡುಗೆ ಊಟ ನಿದ್ದೆ. ಮುಗಿತು. ಬಿಟ್ರೆ ಮೊಬೈಲ್. ಜೊತೆ ಸಮಯ ಕಳಿಯೋದು.ಇಲ್ಲಿ ಪ್ರತಿಯೊಂದಕ್ಕೂ ಹೆಚ್ಚಿನ ಹಣ ಕೊಟ್ಟೆ ಖರೀದಿ ಮಾಡಬೇಕು. ಸಿಟಿ ಲೀ ಕೈ ತುಂಬಾ ದುಡ್ಡು ಬರುತ್ತೆ ಸ್ಯಾಲರಿ ದಿನ ಅದೇ ತಿಂಗಳ ಅಂತ್ಯ ಖಾಲಿಯಾಗಿರುತ್ತೆ. ಯಾವಾಗ ಸಂಬಳ ಬರುತ್ತೋ ಅಂತ ಕಾಯ್ತಾ ಇರ್ತೀವೆ. ಇಲ್ಲಿ ಹುಶಾರಿಲ್ಲದೇ ಮಲಗಿದರೆ ಸತ್ತಿದಿಯ ಬದುಕಿದಿಯ ಅಂತ ಕೇಳೋಕೂ ಯಾರೂ ಇಲ್ಲ ಉಪವಾಸ ಮಲಗಿದ್ರು ತಂದು ಕೊಡೋರು ಯಾರೂ ಇರಲ್ಲ. ಯಾಕಂದರೆ ಎಲ್ಲರೂ ನಮ್ಮಂತೆ ಬ್ಯುಸಿ ಬ್ಯುಸಿ.






ಹಳ್ಳಿಯಲ್ಲಿ ಒಂದು ದಿನ ಮಾಡಿ 3 ದಿನ ಮನೆಲಿ ಡಿಜಿಣ ಮಾಡಿದ್ರು ತೊಂದರೆ ಅಗಲ. ಜಿಜಟಿಣ ಇಲ್ಲ ಅಂದ್ರೆ ಗೆಡ್ಡೆ ಗೆಣಸು ಮನೆಲಿ ಬೆಳೆದ ಪದಾರ್ಥ ನ ಸೇರಿಸಿ ಒಂದು ಹೊತ್ತಿನ ಅಡುಗೆ ಮಾಡಿ ಠಿಣಣುರಜ ಕೂತು ಊಟ ಮಾಡ್ತಾರೆ. ಯಾರಾದ್ರೂ ಹುಶಾರಿಲ್ಲ ಅಂತ ಗೊತ್ತಾದ್ರೆ ಏನಾದ್ರು ಮಾಡ್ಕೊಂಡು ಬಂದು ನೋಡಿ ಮಾತಾಡ್ಸಿ ಹೋಗ್ತಾರ್ ಕಷ್ಟ ಸುಖ ಅಂದ್ರೆ ಎಲ್ರು ಜೊತೆ ಆಗ್ತಾರೆ. ಒಳ್ಳೆಯ ತಂಪಾದ ವಾತಾವರಣ ಹಳ್ಳಿಯಲಿ ಸಿಗುತ್ತೆ ಹಾಗಾಗಿ ಹಳ್ಳಿಯ ಜನರು ಅರೋಗ್ಯವಂತ ಜೀವನ ನಡೆಸ್ತಾರೆ. ಅವರು ನೆಮ್ಮದಿಯ ಬದುಕು ಬದುಕ್ತಾರೆ.

## ಅತಿಯಾದ ಕಾಫಿ ಸೇವನೆಯಿಂದ BP, Anxiety ಹೆಚ್ಚಳ!



**ಬೆಂಗಳೂರು:** ಕಾಫಿ ಕುಡಿಯುವ ಅಭ್ಯಾಸ ಯಾರಿಗೆ ತಾನೇ ಇಲ್ಲ ಹೇಳಿ. ಆದರೆ, ಅತಿಯಾದರೆ ಅಮೃತವೂ ವಿಷವಾಗುತ್ತದೆ ಎಂಬ ಮಾತಿದೆ. ಕಾಫಿ ಕೂಡ ದೀರ್ಘಕಾಲಿಕ ರೋಗಗಳನ್ನು ತಂದೊಡ್ಡುವ ಸಾಧ್ಯತೆಗಳಿದ್ದು. ಎಚ್ಚರವಹಿಸುವಂತೆ ವೈದ್ಯರು ಸಲಹೆ ನೀಡಿದ್ದಾರೆ.

ಅತಿಯಾದ ಕಾಫಿ ಸೇವನೆಯು ಅಧಿಕ ರಕ್ತದೊತ್ತಡ ಹಾಗೂ ಆತಂಕ (ಂಟಿಥುಜಣಥಿ) ಸಮಸ್ಯೆಯನ್ನು ಹೆಚ್ಚಿಸುತ್ತದೆ ಎಂದು ಅಧ್ಯಯನವೊಂದು ಹೇಳಿದೆ.

ಆತಂಕ (ಂಟಿಥುಜಣಥಿ) ಸಮಸ್ಯೆಯೊಂದಿಗೆ ಆಸ್ಪತ್ರೆಗೆ ಬರುವ ಸಾಕಷ್ಟು ರೋಗಿಗಳು ಸಾಮಾನ್ಯವಾಗಿ ಅತಿಯಾದ ಕಾಫಿ ಸೇವನೆ ಮಾಡುವ ಅಭ್ಯಾಸವನ್ನು ರೂಢಿಸಿಕೊಂಡಿರುತ್ತಾರೆ. ಏಕೆಂದರೆ ಕೆಲಸ ಸಮಯದಲ್ಲಿ ಕಾಫಿ ಸುಲಭವಾಗಿ ಲಭ್ಯವಿರುವ ಕಾರಣ ಅಭ್ಯಾಸವನ್ನು ಬೆಳೆಸಿಕೊಂಡಿರುತ್ತಾರೆ. ಆದರೆ, ಇದರಿಂದ ಅನೇಕ ಆರೋಗ್ಯ ಸಮಸ್ಯೆಗಳು ಎದುರಾಗುತ್ತಿದ್ದರೂ ಗಮನ ಹರಿಸುವುದಿಲ್ಲ.

ನಮ್ಮಲ್ಲಿ ಅನೇಕರು ಕೆಲಸ ಒತ್ತಡ ದೂರಾಗಿಸಲು ಅತಿಯಾಗಿ ಕಾಫಿ ಸೇವನೆ ಮಾಡುವುದುಂಟು. ಆದರೆ, ಇದು ಸಮಸ್ಯೆಯನ್ನು ಉಲ್ಬಣಿಸುತ್ತದೆ ಎಂಬ ಅರಿವು ಅವರಿಗಿರುವುದಿಲ್ಲ. ಅತಿಯಾದ ಕಾಫಿ ಸೇವನೆ ರಕ್ತದೊತ್ತಡವನ್ನು ಹಾಗೂ ಆತಂಕದ ಸಮಸ್ಯೆಗಳನ್ನು ಹೆಚ್ಚು ಮಾಡುತ್ತದೆ ಎಂದು ವೈದ್ಯರು ತಿಳಿಸಿದ್ದಾರೆ.

ಜನರಲ್ ಹಾಸ್ಪಿಟಲ್ ಸೈಕಿಯಾಟ್ರಿಯಲ್ಲಿನ ಅಧ್ಯಯನಗಳಲ್ಲಿ ಒಂದಾಗಿರುವ ಮಾಸಿಕ ಆರೋಗ್ಯ ಜರ್ನಲ್ ಈ ಕುರಿತು ಅಧ್ಯಯನ ನಡೆಸಿದ್ದು, ಅಧ್ಯಯನದಲ್ಲಿ ಅತಿಯಾದ ಕೆಫೀನ್ ಸೇವನೆಯು ಆತಂಕ (ಂಟಿಥುಜಣಥಿ) ಹದಗೆಡುವಂತೆ ಮಾಡುತ್ತದೆ ಎಂದು ತಿಳಿದುಬಂದಿದೆ.

ಅಮೇರಿಕನ್ ಜರ್ನಲ್ ಆಫ್ ಕ್ಲಿನಿಕಲ್ ನ್ಯೂಟ್ರಿಷನ್‌ನಲ್ಲಿನ ಮತ್ತೊಂದು ಸಂಶೋಧನೆಯು ಅಧಿಕ ಕೆಫೀನ್ ಸೇವನೆಯನ್ನು ರಕ್ತದೊತ್ತಡ ಸಮಸ್ಯೆಯನ್ನು ಹೆಚ್ಚಿಸುತ್ತದೆ. ಇದು ಹೃದಯರಕ್ತನಾಳದ ಅಸ್ವಸ್ಥತೆಗಳ ಅಪಾಯವನ್ನು ಹೆಚ್ಚಿಸುತ್ತದೆ ಎಂದು ತಿಳಿಸಿದೆ.

ಪ್ರತಿನಿತ್ಯ ಮೂರು-ನಾಲ್ಕು ಕಪ್‌ಗಳು ಅಥವಾ 400 ಮಿಗ್ರಾಂ ಕೆಫೀನ್ ಅನ್ನು ಸೇವಿಸುವುದು ಸುರಕ್ಷಿತವೆಂದು ಹೇಳಲಾಗುತ್ತದೆ. ಆದರೆ, ಅದಕ್ಕಿಂತೂ ಹೆಚ್ಚು ಸೇವನೆ ಅಪಾಯಕಾರಿ ಎಂದು ವೈದ್ಯರು ತಿಳಿಸಿದ್ದಾರೆ.ಮುಖ್ಯವಾಗಿ ಗರ್ಭಿಣಿಯರು ಜಾಗರೂಕರಾಗಿರಬೇಕು ಏಕೆಂದರೆ ಅತಿಯಾದ ಕೆಫೀನ್ ಸೇವನೆ ಗರ್ಭಪಾತ ಮತ್ತು ಕಡಿಮೆ ತೂಕದ ಅಪಾಯವನ್ನು ಹೆಚ್ಚಿಸುತ್ತದೆ. ಇದಲ್ಲದೆ, ಕಾಫಿ ಸೇವನೆಯು ನೇರವಾಗಿ ಸಕ್ಕರೆಯ ಬಳಕೆಯನ್ನು ಹೆಚ್ಚಿಸುತ್ತದೆ ಎಂದು ಹೇಳಿದ್ದಾರೆ.ಆಸ್ಟರ್ ಸಿಎಂಐ ಆಸ್ಪತ್ರೆಯ ಕ್ಲಿನಿಕಲ್ ನ್ಯೂಟ್ರಿಷನ್ ಮತ್ತು ಡಯೆಟಿಕ್ಸ್ ವಿಭಾಗದ ಮುಖ್ಯಸ್ಥೆ ಎಡ್ವಿನಾ ರಾಜ್ ಅವರು ಮಾತನಾಡಿ, ಅತಿಯಾದ ಕಾಫಿ ಸೇವನೆಯು ಹೆಚ್ಚಿದ ರಕ್ತದೊತ್ತಡ ಸೇರಿದಂತೆ ವಿವಿಧ ಅಡ್ಡಪರಿಣಾಮಗಳಿಗೆ ಕಾರಣವಾಗಬಹುದು. ಇದು ಅಗತ್ಯವಾದ ಸೂಕ್ಷ್ಮ ಪೋಷಕಾಂಶಗಳ ಹೀರಿಕೊಳ್ಳುವಿಕೆಗೆ ಅಡ್ಡಿಪಡಿಸುತ್ತದೆ ಮತ್ತು ಕಬ್ಬಿಣಾಂಶ ಕೊರತೆಯನ್ನು ಹೆಚ್ಚಿಸುತ್ತದೆ ಎಂದು ತಿಳಿಸಿದ್ದಾರೆ.ಅತಿಯಾದ ಕಾಫಿ ಸೇವನೆಯು ಆಸ್ಟಿಯೊಪೊರೋಸಿಸ್ (ದುರ್ಬಲ ಮೂಳೆಗಳು) ಮತ್ತು ಟೈಪ್ 2 ಮಧುಮೇಹದ ಅಪಾಯವನ್ನು ಹೆಚ್ಚಿಸಬಹುದು ಎಂದು ಕೆಲವು ಅಧ್ಯಯನಗಳು ತಿಳಿಸಿವೆ. ಇದಲ್ಲದೆ, ತಲೆನೋವು, ಆಯಾಸ, ಗ್ಯಾಸ್ಟ್ರಿಕ್ ಸಮಸ್ಯೆಗಳನ್ನು ಉಂಟು ಮಾಡಬಹುದು. ಕಾಫಿ ಜೊತೆಗೆ ಸಕ್ಕರೆ ಸೇವನೆ ಕೂಡ ಹೆಚ್ಚಾಗುವುದರಿಂದ ಆಗಾಗ್ಗೆ ಮೂತ್ರ ವಿಸರ್ಜನೆ, ಅನಿಯಮಿತ ಹೃದಯ ಬಡಿತ, ಕಿರಿಕಿರಿ ಮತ್ತು ಆತಂಕಗಳಿಗೆ ಕಾರಣವಾಗಬಹುದು ಎಂದು ಹೇಳಿದ್ದಾರೆ.ಫೋರ್ಟಿಸ್ ಆಸ್ಪತ್ರೆಯ ಆಂತರಿಕ ವೈದ್ಯಕೀಯ ವಿಭಾಗದ ಹಿರಿಯ ಸಲಹೆಗಾರ ಡಾ.ಅನಂತ ಪದ್ಮನಾಭ ಅವರು ಮಾತನಾಡಿ, ಕಾಫಿ ಸೇವನೆಯು ಸಾಮಾನ್ಯ ಅಭ್ಯಾಸ. ಆದರೆ, ಯಾವುದೂ ಅತಿಯಾಗಬಾರದು. ಕೆಲಸದ ಒತ್ತಡ ನಿರ್ವಹಿಸಲು ಸಾಕಷ್ಟು ಜನರು ಹಲವು ಬಾರಿ ಕಾಫಿ ಸೇವನೆ ಮಾಡುವುದುಂಟು.

# ಮೆದುಳು ತಿನ್ನುವ ಅಮೀಬಾ ಸೋಂಕು

## ಕೆರೆ-ಕಟ್ಟೆ, ಈಜುಕೊಳಗಳಿಗೆ ಇಳಿಯುವ ಮುನ್ನ ಇರಲಿ ಎಚ್ಚರ..!

**ಬೆಂಗಳೂರು:** ದಕ್ಷಿಣ ರಾಜ್ಯಗಳಲ್ಲಿ ಮಳೆ ಹಿನ್ನೆಲೆ ಕೆರೆ ಕಟ್ಟೆ, ಕೊಳಗಳು ತುಂಬಿದ್ದು, ಈಜಾಡುವುದನ್ನು ತಪ್ಪಿಸುವುದು ಸೂಕ್ತ. ನಿಂತ ನೀರಿನಲ್ಲಿ ಮಿದುಳು ತಿನ್ನುವ ಅಮೀಬಾಗಳಿರುತ್ತವೆ. ಅವು ದೇಹದಲ್ಲಿ ಸೇರಿಕೊಳ್ಳುವ ಸಾಧ್ಯತೆಗಳಿವೆ ಎಂದು ವೈದ್ಯರು ಎಚ್ಚರಿಕೆ ನೀಡಿದ್ದಾರೆ.

ಈಗಾಗಲೇ ಇಂತಹ ಮಿದುಳು ತಿನ್ನುವ ಅಮೀಬಾಕ್ಕೆ ಕೇರಳದಲ್ಲಿ ಈಗಾಗಲೇ ಇಬ್ಬರು ಬಲಿಯಾಗಿದ್ದಾರೆ. ಅಮೀಬಿಕ್ ಎನ್ಸೆಫಾಲಿಟಿಸ್ ಅಪರೂಪ ಹಾಗೂ ಮಾರಣಾಂತಿಕವಾಗಿದ್ದು, ಕೇಂದ್ರ ನರಮಂಡಲದ ಮೇಲೆ ಪರಿಣಾಮ ಬೀರುತ್ತದೆ. ಇದು ಮುಕ್ತ ಜೀವಂತ ಅಮೀಬಾ ಆಗಿರುವ ನೈಗ್ಲೇರಿಯಾ ಫೌಲೇರಿ ಯಿಂದ ಉಂಟಾಗುತ್ತದೆ. ಇದು ತಾಜಾ ನೀರಿನ ಸೆಲೆಗಳಾದ, ಕೆರೆ, ನದಿಗಳಲ್ಲೂ ಕಾಣಬಹುದಾಗಿದೆ.

ಈ ಸೋಂಕಿನ ಲಕ್ಷಣಗಳು ಎಂದರೆ ತಲೆನೋವು, ಜ್ವರ, ತಲೆಸುತ್ತು, ವಾಂತಿ, ಗೊಂದಲ, ಸೀನು, ಭ್ರಮೆ, ಬೆಳಕಿನ ಸೂಕ್ಷ್ಮತೆ ಮತ್ತು ಕೋಮಾ ಆಗಿದೆ. ಅಮೀಬಿಕ್ ಎನ್ಸಿಫಾಲಿಟಿಸ್ನಲ್ಲಿ ಎರಡು ವಿಧಗಳಿವೆ. ಪ್ರಾಥಮಿಕ ಮೆನಿಂಗೊಎನ್ಸೆಫಾಲಿಟಿಸ್ (ಪಿಎಎಂ) ಮತ್ತು ಗ್ರ್ಯಾನುಲೋಮಾಟಸ್ ಅಮೀಬಿಕ್ ಎನ್ಸೆಫಾಲಿಟಿಸ್ (ಜಿಎಇ). ಪಿಎಂನ ಆರಂಭಿಕ ಲಕ್ಷಣಗಳನ್ನು ಮೆನಿಂಜೈಟಿಸ್ನಿ



ರೀತಿಯಲ್ಲಿದೆ. ಜಿಎಇ ಲಕ್ಷಣಗಳು ಮೆದುಳಿನ ಬಾವು, ಎನ್ಸೆಫಾಲಿಟಿಸ್ ಅಥವಾ ಮೆನಿಂಜೈಟಿಸ್ ಹೊಂದಿದೆ. ಇದರ ಸಾವಿನ ದರ 90ರಷ್ಟಿದೆ.

ಈ ಹಿನ್ನೆಲೆಯಲ್ಲಿ ಪೋಷಕರು ನೀರಿನ ಮೂಲಗಳಲ್ಲಿ ಮಕ್ಕಳು ಆಡುವ ಮುನ್ನ ಎಚ್ಚರಿಕೆವಹಿಸಬೇಕು

ಎಂದು ಫೋರ್ಟಿಸ್ ಆಸ್ಪತ್ರೆಯ ನರಶಸ್ತ್ರಚಿಕಿತ್ಸೆಯ ಸಲಹೆಗಾರ ಡಾ.ವಿಕಾಸ್ ನಾಯಕ್ ಹೇಳಿದ್ದಾರೆ.

ಪಿಎಎಂ ಕೇಂದ್ರ ನರ ವ್ಯವಸ್ಥೆ ಮೇಲೆ ತ್ವರಿತ ಪರಿಣಾಮ ಬೀರುತ್ತದೆ. ಇದರ ಸಾವಿನ ದರ 90ರಷ್ಟಿದೆ. ಅಮೀಬಾ ನೈಗ್ಲೇರಿಯಾ ಫೌಲೇರಿ ಇರುವಂತಹ ನೀರಿನ ಸೆಲೆಗಳಲ್ಲಿ ಆರೋಗ್ಯಯುತ ಮಕ್ಕಳು ಮತ್ತು ಯುವ ವಯಸ್ಕರರಲ್ಲೂ ಈ ಸೋಂಕು ತಗಲುತ್ತದೆ. ಈ ಅಮೀಬಾವು ತಾಜಾ ಮತ್ತು ಬೆಚ್ಚಗಿನ ನೀರು ಮತ್ತು ಮಣ್ಣಿನಲ್ಲಿ ಅಡಗಿರುತ್ತದೆ ತಿಳಿಸಿದ್ದಾರೆ.

ಈ ಸೋಂಕು ತಗುಲಿದ ವಾರದೊಳಗೆ ಇದರ ಲಕ್ಷಣಗಳಾದ ಕುತ್ತಿಗೆ ನೋವು, ಸೀನುವಿಕೆ, ಗೊಂದಲ, ಭ್ರಮೆ ಮತ್ತು ವ್ಯಕ್ತಿತ್ವ ಬದಲಾವಣೆ, ಫೋಟೋಫೋಬಿಯಾ, ಸಮತೋಲನ ನಷ್ಟಗಳು ಕಾಣುತ್ತದೆ. ಇವುಗಳನ್ನು ಆರಂಭಿಕ ಹಂತದಲ್ಲಿ ಪತ್ತೆಯಾಗದಿದ್ದರೆ, ಕೋಮಾ, ಮಿದುಳಿನ ಊತ ಮತ್ತು ಸಾವಿಗೆ ಕಾರಣವಾಗುತ್ತದೆ,

ಈ ಸೋಂಕಿಗೆ ಒಳಗಾಗುವುದನ್ನು ತಡೆಯಲು ಇರುವ ಪ್ರಮುಖ ಮುನ್ನೆಚ್ಚರಿಕೆ ಎಂದರೆ, ನಿಂತ ನೀರಿನಲ್ಲಿ ಈಜುವುದು, ಡೈವಿಂಗ್ ಮಾಡುವುದನ್ನು ತಪ್ಪಿಸುವುದಾಗಿದೆ. ಒಂದು ವೇಳೆ

ಈಜು ಅನಿವಾರ್ಯವಾದರೆ, ಮೂಗಿಗೆ ಕ್ಲಿಪ್ನಂತಹ ಸುರಕ್ಷತಾ ಕ್ರಮ ತೆಗೆದುಕೊಳ್ಳುವುದು ಅವಶ್ಯವಾಗಿದೆ. ಸೋಂಕು ಪತ್ತೆ ಮಾಡಲು ಹಾಗೂ ಚಿಕಿತ್ಸೆ ನಿರ್ಧರಿಸಲು ಮೆದುಳಿನ ಬಯಾಪ್ಸಿಗೆ ಶಿಫಾರಸು ಮಾಡಲಾಗುತ್ತದೆ ಎಂದು ಆಸ್ಟರ್ ಸಿಎಂಐ ಆಸ್ಪತ್ರೆಯ ಸಾಂಕ್ರಾಮಿಕ ರೋಗ ಮತ್ತು ಪ್ರವಾಸ ಮೆಡಿಸಿನ್ ಕನ್ಸಲ್ಟೆಂಟ್ ಡಾ ಸ್ವಾತಿ ರಾಜಗೋಪಾಲ್ ಹೇಳಿದ್ದಾರೆ.

# ಯಾರಾದರೂ ಎಲ್ಲಿಗಾದರೂ ಹೊರಟಾಗ ಎಲ್ಲಿಗೆ ಅಂತ ಕೇಳಬಾರದು ಎಂದು ಹಿರಿಯರು ಹೇಳುತ್ತಾರೆ ಯಾಕೆ

ಸಾಮಾಜಿಕ ನಂಬಿಕೆಗಳು ಮೂಢನಂಬಿಕೆಗಳಾಗಿ ಪರಿವರ್ತನೆಯಾದ ರೀತಿಗೆ ಒಂದು ಉದಾಹರಣೆ ಇದು.

ಹಿರಿಯರು ಎಂದರೆ ನಮ್ಮ ಪೂರ್ವಿಕರು ಎನ್ನುವ ಅರ್ಥದಲ್ಲಿ ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನ ಮಾಡೋಣ. ನಮ್ಮ ಅಜ್ಜ ಅಜ್ಜಿಯರ ಕಾಲಕ್ಕೆ ಮಕ್ಕಳಿರಲವ್ವ ಮನೆ ತುಂಬಾ ಎನ್ನುವ ಸೂತ್ರ. ಕನಿಷ್ಠ ಎಲ್ಲರ ಮನೆಯಲ್ಲೂ ಏಳರಿಂದ ಎಂಟು ಮಕ್ಕಳು. ಇವರಲ್ಲಿ ಯಾರಾದರೂ ಒಬ್ಬರು ಹಿರಿಯರು ಹೊರಗೆ ಹೊರಟರೆ ಅವರಿಗೆ ಎಡತಾಕಿ ಎಲ್ಲಿಗೆ ?ಎಂಬ ಪ್ರಶ್ನೆ ಒಡುತ್ತಿದ್ದರು. ಇಂಥ ಕಡೆ ಎಂಬ ಉತ್ತರ ಸಿಕ್ಕಿದೊಡನೆ "ನಾನು ಬರ್ತೀನಿ" ಎಂದು ಜೊತೆಯಲ್ಲಿ ಹೊರಟು ನಿಲ್ಲುತ್ತಿದ್ದರು. ಅವನ ಹಠ ತಡೆಯಲಾರದೆ ಅವನನ್ನು ಕರೆದುಕೊಂಡು ಹೊರಟರೆ ಆತನ ಹಿಂದೆ ಮತ್ತೊಬ್ಬರು. ಹೀಗೆ ಮಕ್ಕಳನ್ನು ನಿಭಾವಣೆ ಮಾಡುವುದೇ ದೊಡ್ಡ ಸಮಸ್ಯೆಯಾಗುತ್ತಿತ್ತು. ಈಗಲೂ ಎರಡು ಮೂರು ಮಕ್ಕಳಿರುವ ಮನೆಗಳಲ್ಲೂ ಇಂತಹ ಸಮಸ್ಯೆಗಳು ಎದುರಾಗುತ್ತಿರುತ್ತದೆ. ಹಾಗಾಗಿ ಅವರು ಮನೆಯಿಂದ ಹೊರಟಾಗ ಎಲ್ಲಿಗೆ ಎಂಬ ಪ್ರಶ್ನೆಯನ್ನು ಕೇಳಬಾರದು ಎಂದು ಮಕ್ಕಳನ್ನು ನಿರ್ಬಂಧಿಸುತ್ತಿದ್ದರು. ಇನ್ನೂ ಮಗ ಮಗಳಿಗೆ ಹೆಣ್ಣು / ಗಂಡು ನೋಡಲು ಇಲ್ಲವೇ ಆಸ್ತಿ ಒಡವೆ ಇತ್ಯಾದಿ,



ಕೊಳ್ಳಲು ಇಲ್ಲವೇ ಮಾರಲು ಹೊರಟಾಗ ಯಾರಾದರೂ ಎದುರಾಗಿ ಅವರಿಗೆ ಉತ್ತರ ದೊರೆತರೆ ಅವರ ವಾಪಸ್ಸು ಬರುವುದರೊಳಗೆ ಊರಿಗೆ ಟಾಂಟಾಂ ಮಾಡುತ್ತಿದ್ದರು. ಎಲ್ಲವನ್ನು ಸೇರಿಸಿ ಈ ನಿರ್ಬಂಧಗಳನ್ನು ಹೇಳಿ ಮುಂದೆ ಅದೇ ವಾಡಿಕೆಯಾಗಿ ,ಪದ್ಧತಿಯಾಗಿ ಪರಿವರ್ತನೆಯಾಗಿದೆ. ಇದು ನನ್ನ ಅನಿಸಿಕೆ.

# ಕಾಜು ಮಶ್ರೂಮ್ ಮಸಾಲಾ



**ಬೇಕಾಗುವ ಪದಾರ್ಥಗಳು...**

ಮಶ್ರೂಮ್- 2 ಬಟ್ಟಲು ,ಹಸಿಮೆಣಸಿನ ಕಾಯಿ-3 ಕೊತ್ತಂಬರಿ ಸೊಪ್ಪು-ಸ್ವಲ್ಪ ಪುದೀನಾ- ಸ್ವಲ್ಪ ಈರುಳ್ಳಿ-2 ಗೋಡಂಬಿ- 2 ಹಿಡಿಯಷ್ಟು ಸೋಂಪು-ಸ್ವಲ್ಪ ಎಣ್ಣೆ- ಸ್ವಲ್ಪಅರಿಶಿಣ-ಸ್ವಲ್ಪ ಉಪ್ಪು- ರುಚಿಗೆ ತಕ್ಕಷ್ಟು ಕಾಳು ಮೆಣಸಿನ ಪುಡಿ- ಅರ್ಧ ಚಮಚ ದನಿಯಾ ಪುಡಿ- 1 ಚಮಚ ಜೀರಿಗೆ ಪುಡಿ- 1/4 ಚಮಚಚಿಕನ್ ಮಸಾಲಾ ಪುಡಿ- 1 ಚಮಚ ಕರಿಬೇವು-ಸ್ವಲ್ಪ ಕಸೂರಿ ಮೇಥಿ-ಸ್ವಲ್ಪ ಟೊಮೆಟೋ- 1ತುಪ್ಪ ಅಥವಾ ಬೆಣ್ಣೆ- 1 ದೊಡ್ಡ ಚಮಚ

**ಮಾಡುವ ವಿಧಾನ...**

* ಮೊದಲಿಗೆ ಮಿಕ್ಸಿ ಜಾರ್'ಗೆ ಹಸಿಮೆಣಸಿನ ಕಾಯಿ, ಶುಂಠಿ, ಬೆಳ್ಳುಳ್ಳಿ, ಕೊತ್ತಂಬರಿ ಸೊಪ್ಪು, ಪುದೀನಾ. 1 ಈರುಳ್ಳಿ ಹಾಗೂ 1 ಹಿಡಿ ಗೋಡಂಬಿ ಹಾಕಿ ರುಬ್ಬಿಟ್ಟುಕೊಳ್ಳಿ.* ಒಲೆಯ ಮೇಲೆ ಬಾಣಲೆ ಇಟ್ಟು ಅದಕ್ಕೆ ಸ್ವಲ್ಪ ಎಣ್ಣೆ ಹಾಕಿ, ಕಾದ ನಂತರ ಸೋಂಪು ಹಾಗೂ ಸಣ್ಣಗೆ ಕತ್ತರಿಸಿದ ಈರುಳ್ಳಿ ಹಾಕಿ ಕೆಂಪಗೆ ಹುರಿದುಕೊಳ್ಳಿ. ಇದಕ್ಕೆ ಚೆನ್ನಾಗಿ ತೊಳೆದು ಕತ್ತರಿಸಿಕೊಂಡ ಮಶ್ರೂಮ್ ಹಾಕಿ 5 ನಿಮಿಷ ಹುರಿಯಿರಿ.* ಬಳಿಕ ಉಪ್ಪು, ಅರಿಶಿನ, ಜೀರಿಗೆ ಪುಡಿ, ದನಿಯಾ ಪುಡಿ, ಕಾಳು ಮೆಣಸಿನ ಪುಡಿ, ಚಿಕನ್ ಮಸಾಲಾ ಎಲ್ಲವನ್ನೂ ಹಾಕಿ ಮಿಶ್ರಣ ಮಾಡಿ. 2 ನಿಮಿಷ ಬಿಡಿ.
* ನಂತರ ಕರಿಬೇವು, ಕಸೂರಿ ಮೇಥಿ ಹಾಗೂ ಟೊಮೆಟೋ ಹಾಕಿ, ಟೊಮೆಟೋ ಮೆತ್ತಾಗಾಗುವವರೆಗ ಕೈಯಾಡಿಸಿ. ಬಳಿಕ ರುಬ್ಬಿಕೊಂಡಿದ್ದ ಮಸಾಲೆ ಹಾಕಿ, ಚೆನ್ನಾಗಿ ಮಿಶ್ರಣ ಮಾಡಿ.
* ಇದೀಗ ಒಲೆಯ ಮೇಲೆ ಪ್ಯಾನ್ ಇಟ್ಟು ಅದಕ್ಕೆ ತುಪ್ಪ ಅಥವಾ ಬೆಣ್ಣೆ ಹಾಕಿ ಉಳಿದ ಗೋಡಂಬಿಯನ್ನು ಕೆಂಪಗೆ ಹುರಿದುಕೊಳ್ಳಿ. ಇದನ್ನು ಮಶ್ರೂಮ್ ಮಸಾಲೆಗೆ ಹಾಕಿ ಮಿಶ್ರಣ ಮಾಡಿದರೆ, ರುಚಿಕರವಾದ ಮಶ್ರೂಮ್ ಕಾಜೂ ಮಸಾಲಾ ಸವಿಯಲು ಸಿದ್ಧ.

## ಚಿಕನ್ ಘೀರೋಸ್ಟ್-

**ಬೇಕಾಗುವ ಪದಾರ್ಥಗಳು...**



ಚಿಕನ್- 1 ಕೆಜಿ ನಿಂಬೆ ರಸ- 1 ಚಮಚ ಅರಿಶಿನ-ಸ್ವಲ್ಪ ಉಪ್ಪು- ರುಚಿಗೆ ತಕ್ಕಷ್ಟು ಮೊಸರು- 1 ಬಟ್ಟಲು ಎಣ್ಣೆ- ಸ್ವಲ್ಪ ತುಪ್ಪ- 200 ಎಂಎಲ್ ದನಿಯಾ- 1.5 ಚಮಚ ಕಾಳುಮೆಣಸು- 1 ಚಮಚ ಒಣಗಿದ ಮೆಣಸಿನ ಕಾಯಿ- 5 ಕಾಶ್ಮೀರಿ ಚಿಲ್ಲಿ- 5 ಜೀರಿಗೆ- 1 ಚಮಚ ಮೆಂತ್ಯೆ-1/4 ಚಮಚ ಬೆಳ್ಳುಳ್ಳಿ- ಸ್ವಲ್ಪ ಹುಣಸೆ ರಸ- 1 ಚಮಚ ಬೆಲ್ಲ-ಸ್ವಲ್ಪ ಕರಿಬೇವು-ಸ್ವಲ್ಪ

**ಮಾಡುವ ವಿಧಾನ...**

* ಮೊದಲಿಗೆ ಒಂದು ಪಾತ್ರೆಗೆ ಚೆನ್ನಾಗಿ ತೊಳೆದ ಚಿಕನ್, ನಿಂಬೆರಸ, ಅರಿಶಿನದ ಪುಡಿ, ಉಪ್ಪು ಹಾಗೂ ಮೊಸರು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ ಅರ್ಧಗಂಟೆ ನೆನೆಯಲು ಬಿಡಿ.
*ಇದೀಗ ಒಲೆಯ ಮೇಲೆ ಒಂದು ಬಾಣಲೆ ಇಟ್ಟು ಅದಕ್ಕೆ ಎಣ್ಣೆ ಹಾಗೂ 150 ಎಂಎಲ್ ತುಪ್ಪ ಹಾಕಿ. ಕಾದ ನಂತರ ಇದಕ್ಕೆ ಚಿಕನ್ ಪೀಸ್ ಗಳನ್ನು ಹಾಕಿ ಬೇಯಲು ಬಿಡಿ.
*ಇದೀಗ ಒಲೆಯ ಮೇಲೆ ಪ್ಯಾನ್ ಇಟ್ಟು ಅದಕ್ಕೆ ದನಿಯಾ, ಕಾಳುಮೆಣಸು, ಒಣಗಿದ ಮೆಣಸಿನ ಕಾಯಿ, ಕಾಶ್ಮೀರಿ ಚಿಲ್ಲಿ, ಜೀರಿಗೆ ಹಾಗೂ ಮೆಂತ್ಯ ಹಾಕಿ ಕೆಂಪಗೆ ಹುರಿದುಕೊಳ್ಳಿ. ಇದು ತಣ್ಣಗಾದ ಬಳಿಕ ಮಿಕ್ಸಿ ಜಾರ್'ಗೆ ಹಾಕಿಕೊಳ್ಳಿ. ಬಳಿಕ ಸ್ವಲ್ಪ ಬೆಳ್ಳುಳ್ಳಿ, ಹುಣಸೆ ರಸ, ಬೆಲ್ಲ ಹಾಗೂ ಸ್ವಲ್ಪ ನೀರು ಹಾಕಿ ಪೇಸ್ಟ್ ರೀತಿ ರುಬ್ಬಿಕೊಳ್ಳಿ.
* ಇದೀಗ ಅದಾಗಲೇ ಬೇಯಲು ಬಿಟ್ಟಿದ್ದ ಚಿಕನ್ ಪೀಸ್ ಗಳನ್ನು ಒಂದು ಪ್ಲೇಟ್ ನಲ್ಲಿ ತೆಗೆದಿಟ್ಟುಕೊಳ್ಳಿ. ಚಿಕನ್ ಬೇಯಿಸಿಕೊಂಡ ಬಾಣಲೆಗೇ ರುಬ್ಬಿಕೊಂಡ ಮಸಾಲೆಯನ್ನು ಹಾಗೂ ರುಚಿಗೆ ತಕ್ಕಷ್ಟು ಉಪ್ಪು ಹಾಕಿ. ಮಸಾಲೆಯಿಂದ ಎಣ್ಣೆ ಬಿಡುವವರೆಗೆ ಕುದಿಸಿ. ಬಳಿಕ ಬೇಯಿಸಿದ ಚಿಕನ್ ಪೀಸ್ ಹಾಕಿ. 10 ನಿಮಿಷದ ಬಳಿಕ ಉಳಿದ 50 ಎಂಎಲ್ ತುಪ್ಪ ಹಾಕಿ. 3 ನಿಮಿಷದ ಬಳಿಕ ಕರಿಬೇವು ಹಾಕಿ, 2 ನಿಮಿಷ ಕುದಿಯಲು ಬಿಟ್ಟರೆ ರುಚಿಕರವಾದ ಚಿಕನ್ ಘೀರೋಸ್ಟ್ ಸವಿಯಲು ಸಿದ್ಧ.

## ಬೀಟ್ರೂಟ್ ಕಬಾಬ್



**ಬೇಕಾಗುವ ಪದಾರ್ಥಗಳು...**

ಬೀಟ್ರೂಟ್- 2 ರವೆ- 3 ಚಮಚ ಈರುಳ್ಳಿ- 1 ದೊಡ್ಡ ಗಾತ್ರದ್ದು ಶೆಜ್ವಾನ್ ಸಾಸ್- 2 ಚಮಚ ಆಲೂಗಡ್ಡೆ- 2ಮೈದಾ ಹಿಟ್ಟು- 1 ಬಟ್ಟಲು ಅಕ್ಕಿ ಹಿಟ್ಟು- 4 ಚಮಚ ಕಡಲೆಹಿಟ್ಟು- 4 ಚಮಚ ಕಾರ್ನ್ ಫ್ಲೋರ್- 4 ಚಮಚ ಕೊತ್ತೊಂಬರಿ ಸೊಪ್ಪು- ಸ್ವಲ್ಪ ಉಪ್ಪು- ರುಚಿಗೆ ತಕ್ಕಷ್ಟು ಜೀರಿಗೆ- ಒಂದು ಚಮಚ ಜೀರಿಗೆ ಎಣ್ಣೆ - ಕರಿಯಲು ಬೆಣ್ಣೆ- 1 ಚಮಚ

**ಮಾಡುವ ವಿಧಾನ...**

* ಆಲೂಗಡ್ಡೆಯನ್ನು ಬೇಯಿಸಿ ಸಿಪ್ಪೆ ತೆಗೆದು, ಪೇಸ್ಟ್ ರೀತಿ ಮಾಡಿ. ಇದಕ್ಕೆ ತುರಿದ ಬೀಟ್ರೂಟ್ ಹಾಕಿ. ಬಳಿಕ ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ. 15-20 ನಿಮಿಷ ಬಿಡಿ
* ನಂತರ ಅದಕ್ಕೆ ರವಾ, ಕಡಲೆ ಹಿಟ್ಟು, ಅಕ್ಕಿ ಹಿಟ್ಟು, ಮೈದಾ ಹಿಟ್ಟು, ಕಾರ್ನ್ ಫ್ಲೋರ್ ಸೇರಿಸಿ ಮಿಶ್ರಣ ಮಾಡಿ. ಬಳಿಕ ಸಣ್ಣಗೆ ಹೆಚ್ಚಿದ ಈರುಳ್ಳಿ, ಬೆಣ್ಣೆ, ಕೊತ್ತೊಂಬರಿ ಸೊಪ್ಪು, ಜೀರಿಗೆ ಹಾಗೂ ಸಾಸ್ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ.* ನಂತರ ಚಿಕ್ಕಚಿಕ್ಕ ಉಂಡೆ ಮಾಡಿ (ಕಬಾಬ್ ರೀತಿಯಲ್ಲಿ) ಕಾದ ಎಣ್ಣೆಯಲ್ಲಿ ಹಾಕಿ ಕಂದು ಬಣ್ಣ ಬರುವವರೆಗೆ ಕರಿಯಿರಿ. ಇದೀಗ ರುಚಿಕರವಾದ ಬೀಟ್ರೂಟ್ ಕಬಾಬ್ ಸವಿಯಲು ಸಿದ್ಧ.

## ಡಾಬಾ ಸ್ಟೈಲ್ ಪನ್ನೀರ್ ಬುರ್ಜಿ ಗ್ರೇವಿ-

**ಬೇಕಾಗುವ ಪದಾರ್ಥಗಳು...**



ಪನ್ನೀರ್ 300 ಗ್ರಾಂ ಈರುಳ್ಳಿ 1 ಟೊಮೆಟೋ 2 ಕಡಲೇಹಿಟ್ಟು 2 ಚಮಚ ಅರಿಶಿಣಪುಡಿ- ಅರ್ಧ ಚಮಚ ಬ್ಲಾಕ್ ಸಾಲ್ಟ್ ಅರ್ಧ ಚಮಚ ಕಸೂರಿ ಮೇಥಿ 1 ಚಮಚ ದನಿಯಾಪುಡಿ 1 ಚಮಚ ಅಚ್ಚಖಾರದಪುಡಿ 1 ಚಮಚ ಗರಂಮಸಾಲ 1 ಚಮಚ ಮೊಸರು ಮುಕ್ಕಾಲು ಬಟ್ಟಲು ಹಾಲು ಕಾಲು ಬಟ್ಟಲುತುಪ್ಪ 4 ಚಮಚ ಬೆಣ್ಣೆ 2 ಚಮಚ ಕಾಶ್ಮೀರಿ ಚಿಲ್ಲಿ ಪೌಡರ್ 1 ಚಮಚ ಜೀರಿಗೆ ಅರ್ಧ ಚಮಚಹಸಿಮೆಣಸಿನಕಾಯಿ 3 ಶುಂಠಿ ಸ್ವಲ್ಪ ಕೊತ್ತಂಬರಿಸೊಪ್ಪು ಸ್ವಲ್ಪ ನಿಂಬೆರಸ ಸ್ವಲ್ಪಉಪ್ಪು ರುಚಿಗೆ ತಕ್ಕಷ್ಟು

**ಮಾಡುವ ವಿಧಾನ...**

ಮೊದಲಿಗೆ ಒಲೆಯ ಮೇಲೆ ಪ್ಯಾನ್ ಇಟ್ಟು ಇದಕ್ಕೆ 2 ಚಮಚ ಕಡಲೇಹಿಟ್ಟನ್ನು ಹಾಕಿ ಲೋ ಫ್ಲೇಮ್ ನಲ್ಲಿ ಸುವಾಸನೆ ಬರುವವರೆಗೂ ಹುರಿದುಕೊಳ್ಳಿ. ಕಡಲೇಹಿಟ್ಟು ಸ್ವಲ್ಪ ಬಣ್ಣ ಬದಲಾಗುತ್ತಿದ್ದಂತೆ ಒಂದು ಬೌಲ್ ಗೆ ತೆಗೆದಿಟ್ಟುಕೊಳ್ಳಿ.ಹುರಿದ ಕಡಲೇಹಿಟ್ಟಿಗೆ ಅರಿಶಿಣಪುಡಿ, ಬ್ಲಾಕ್ ಸಾಲ್ಟ್, ಕಸೂರಿ ಮೇಥಿಯನ್ನು ಹಾಕಿ ಪೌಡರ್ ರೀತಿ ಮಾಡಿ ಹಾಕಿಕೊಳ್ಳಬೇಕು. ಹಾಗೇ ಇದಕ್ಕೆ ದನಿಯಾಪುಡಿ, ಅಚ್ಚಖಾರದಪುಡಿ, ಗರಂಮಸಾಲ, ಮೊಸರು, ಕಾಲು ಕಪ್ ಹಾಲು ಹಾಕಿ ಎಲ್ಲವನ್ನೂ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಬೇಕು.ಇದೀಗ ಒಲೆಯ ಮೇಲೆ ಪ್ಯಾನ್ ಇಟ್ಟು ಇದಕ್ಕೆ 2 ಚಮಚ ತುಪ್ಪ ಹಾಕಿ. ತುಪ್ಪ ಕರಗಿದ ನಂತರ, 1 ಚಮಚ ಕಾಶ್ಮೀರಿ ಚಿಲ್ಲಿ ಪೌಡರ್ ಅನ್ನು ಹಾಕಿ ಸುಮ್ಮನೆ ಬೆಚ್ಚಗೆ ಮಾಡಿ ಸ್ಟೌವ್ ಆಫ್ ಮಾಡಿಕೊಳ್ಳಿ. ಈ ಮಿಶ್ರಣವನ್ನು ಮಸಾಲೆ ಮಿಶ್ರಣದ ಜೊತೆ ಸೇರಿಸಿಕೊಂಡು ಮಿಕ್ಸ್ ಮಾಡಿಕೊಳ್ಳಬೇಕು.ಒಲೆಯ ಮೇಲೆ ಮತ್ತೊಂದು ಪ್ಯಾನ್ ಇಟ್ಟು ಇದಕ್ಕೆ 2 ಚಮಚ ತುಪ್ಪ, 2 ಚಮಚ ಬೆಣ್ಣೆಯನ್ನು ಹಾಕಿ ಬಿಸಿ ಮಾಡಿಕೊಳ್ಳಬೇಕು. ನಂತರ ಅದಕ್ಕೆ ಜೀರಿಗೆ, ಸಣ್ಣದಾಗಿ ಹೆಚ್ಚಿಕೊಂಡ ಈರುಳ್ಳಿ, ಹಸಿಮೆಣಸಿನಕಾಯಿ, ಶುಂಠಿ ಸ್ವಲ್ಪ ಹಾಕಿ ಗೋಲ್ಡನ್ ಕಲರ್ ಬರುವವರೆಗೂ ಫ್ರೈ ಮಾಡಿಕೊಳ್ಳಬೇಕು. ನಂತರ 2 ಸಣ್ಣದಾಗಿ ಹಚ್ಚಿರುವ ಟೊಮೆಟೋ ಹಾಕಿ ಫ್ರೈ ಮಾಡಬೇಕು.* ಟೊಮೆಟೋ ಮೆತ್ತಗೆ ಆದ ಮೇಲೆ ಮಸಾಲೆ ಮಿಶ್ರಣವನ್ನು ಹಾಕಿ, ರುಚಿಗೆ ತಕ್ಕಷ್ಟೆ ಉಪ್ಪು, ಸ್ವಲ್ಪ ಕೊತ್ತಂಬರಿಸೊಪ್ಪು ಹಾಕಿ ಬೇಯಿಸಬೇಕು.

# ಆರುಂಡಿ ಶ್ರೀನಿವಾಸ್ ಎಂಬ ಕಪ್ಪು ಮಣ್ಣಿನ ಹೊಳಪು

ಅವಿಭಜಿತ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಆರುಂಡಿ ಗ್ರಾಮದಲ್ಲಿ ಹುಟ್ಟಿದ ಶ್ರೀನಿವಾಸ್‌ಮೂರ್ತಿ ಗೆಳೆಯರ ಪಾಲಿಗೆ ಆರುಂಡಿ ಶೀನು, ಕಿರಿಯರ ಪಾಲಿಗೆ ಸೀನಣ್ಣ, ಗೆಳತಿಯರ ಪಾಲಿಗೆ ಶೀನು.. ಹೀಗೆ ನಾನಾ ನಾಮರೂಪಗಳಿಂದ ಕರೆಯಲ್ಪಟ್ಟ ಕವಿ, ಲೇಖಕ, ಪತ್ರಕರ್ತ.

ಈ ಶ್ರೀನಿವಾಸ್‌ಮೂರ್ತಿ ನನಗೂ ಸೀನಣ್ಣನೇ. ವಯಸ್ಸಿನಲ್ಲಿ ಹಿರಿಯನಾದರೂ ವೃತ್ತಿಕ್ಷೇತ್ರದ ಸಂಗಾತಿಯಷ್ಟೆ ಅಲ್ಲ, ಅನುಗಾಲದ ಗೆಳೆಯ.

ಆರುಂಡಿಯ ಫಲವತ್ತಾದ ಮಣ್ಣಿನ ಬಣ್ಣವನ್ನೆ ಧರಿಸಿರುವ ಶ್ರೀನಿವಾಸ್‌ಮೂರ್ತಿ 'ಆರುಂಡಿ ಶ್ರೀನಿವಾಸ್' ಆಗಿದ್ದು ತನ್ನೊಳಗಿನ ಓದು,ಬರಹ, ಕವಿತ್ವದಿಂದಲೆ. ಪಕ್ಕದ ಊರಾದ ಕೊನಗವಳ್ಳಿಯ ಲಂಕೇಶ್ ಮೇಸ್ಟ್ರ ಪ್ರಭಾವಳಿಗೆ ಸಿಕ್ಕು ಬೆಳದಿಂಗಳ ಕವಿಯಾಗಿ ಕಂಗೊಳಿಸಿದ್ದ ಶೀನು ಫಲವತ್ತಾದ ಮಣ್ಣುಗುಣವೇ ಮೈವೆತ್ತಿದಂತೆ ಹೊಳೆಯುತ್ತಾರೆ.

ಅಪ್ಪ ಮೇಸ್ಟ್ರು ಅನ್ನೋದು ಬಿಟ್ರೆ ಬೇರಾವ ಸಾಮಾಜಿಕ ಪ್ರಭಾವಳಿಗಳಿಂದ ವಂಚಿತವೇ ಆಗಿರುವ ಸಮುದಾಯದಿಂದ ಬಂದ ಶೀನು ಹೊಟ್ಟೆಪಾಡಿಗೆ ಎಂಪಿಎಂ ಉದ್ಯೋಗ ಅವಲಂಬಿಸಿದರು. ಬದುಕಿನ ಜಂಜಾಟಗಳ ನಡುವೆ ಅವರೊಳಗಿನ ಕವಿ, ಲೇಖಕ ಜೀವಿಸುತ್ತಲೆ ಇದ್ದ, ಬದುಕಿನ ತಿರುವುಗಳಿಗೆ ಸಿಕ್ಕು ನುಜ್ಜುಗುಜ್ಜಾಗಿ ಕೆಲಸ ಬಿಟ್ಟು ಹಸಿವು, ಬಡತನದ ಉರಿಯ ನಡುವೆಯೂ ಪತ್ರಕರ್ತನಾಗಿ ಬರವಣಿಗೆಯ ಸುಖಕ್ಕೆ ತನ್ನನ್ನು ತಾನು ಚಾಚಿಕೊಂಡ ಶೀನಣ್ಣನ ವ್ಯಕ್ತಿತ್ವದೊಳಗೆ ಸಮಾಜದ ಸುಖವನ್ನು ಬಯಸುವ ಪತ್ರಕರ್ತನೊಬ್ಬ ಮಿಸುಕಾಡುತ್ತಲೆ ಇದ್ದಾನೆ.

'ಕಪ್ಪು ಮಣ್ಣಿನ ಕಣ್ಣು' ಕೃತಿಯ ಮೂಲಕ ತನ್ನ ಹುಟ್ಟೂರನ್ನು ಲೋಕಕ್ಕೆ ಪರಿಚಯಿಸುವ ಈ ಗೆಳೆಯ ಸೀನು ಹಳ್ಳಿಯ ಬಾವಿ ಕಟ್ಟೆಯೊಂದು ಇಡೀ ಊರಿನ ಜೀವನಾಡಿಯಾಗಿರುತ್ತದೆ. ಪ್ರೇಮಿಗಳ ನಿಲ್ದಾಣವೂ ಆಗಿರುತ್ತದೆ ಎಂಬುದನ್ನು ಅದೆಷ್ಟು ಚಲನಶೀಲವಾಗಿ ಕಾಣಿಸುತ್ತಾರೆಂದರೆ ಕಪ್ಪು ಮಣ್ಣಿನ ಕಣ್ಣಿನ ಕೃತಿಯಲ್ಲಿ ಆಯ್ದ ಲೇಖನ ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಯ 2014-17 ನೇ ಸಾಲಿನ ಪದವಿ ತರಗತಿಗಳಿಗೆ ಪಠ್ಯವಾಗಿದ್ದು ಅವರ ಭೌದ್ಧಿಕ ಸತ್ವಕ್ಕೆ ಹಿಡಿದ ಕನ್ನಡಿ. ಈ ಕೃತಿಯ ಆ ಮೂಲಕ ತನ್ನ ಹುಟ್ಟೂರಿನ ಋಣ ತೀರಿಸುತ್ತಾರೆ. ಹರೆಯದ ತವಕಗಳಿಗೆ 'ಮೊಡವೆ ' ಮತ್ತು 'ಹುಣ್ಣಿಮೆ ಪದ್ಯಗಳ' ಸಂಕಲನ, ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡ ತಮ್ಮ ಲೇಖನಗಳ ಸಂಗ್ರಹ 'ಬಯಲದನಿ' ಉತ್ಕೃಷ್ಟ ಬರಹಕ್ಕೆ



ಸಾಕ್ಷಿಯಾಗುತ್ತದೆ. ಸೀನು ಹುಣ್ಣಿಮೆಯ ಸಖನಂತೆ, ಹೂವುಗಳ ವರ್ಣಿಕನಂತೆ, ಸೌಂದರ್ಯ ಉಪಾಸನೆಯ ರಸಿಕನಂತೆಯೂ ಕಂಡರೆ ಅದು ನಿಜವೇ. ಅಷ್ಟೇ ಅಲ್ಲ, ಅವರಳೊಗೊಬ್ಬ ವಿಮರ್ಶಕ, ಅಪ್ಪಟ ವೃತ್ತಿಪರ ಪತ್ರಕರ್ತನೊಬ್ಬ ಇದ್ದಾನೆ ಅನ್ನೋದು ಕೂಡ ನಿಜವೆ.

ಸೀನಣ್ಣನನ್ನು ಅವರ ಆಪ್ತ ಬಳಗ "ಅಮ್ಮ" ಎಂದು ಕರೆಯುತ್ತದೆ. ಮನುಷ್ಯ ಮೂಲತಃ 'ಈವಿಲ್' (ಕೇಡು) ಎಂದು ಕರೆದ ಲಂಕೇಶ್ ಮೇಸ್ಟ್ರು ಅವರ ಮಾತನ್ನು ಸುಳ್ಳಾಗಿಸುವಷ್ಟು ಸದಾ ಎಲ್ಲಾ ಜೀವಿಗಳ ಕುರಿತಾದ ಅಂತಃಕರಣದಿಂದ ಸೀನು ಬದುಕುತ್ತಿದ್ದಾರೆ ಎಂದರೆ ಅದು ಅತಿಶಯೋಕ್ತಿಯೇನಲ್ಲ. ಭಾವುಕತೆ ಇವರ ದೌರ್ಬಲ್ಯ, ತನ್ನ ಸುಪರ್ದಿಗೆ ಬಂದ ಗೆಳೆತನವನ್ನು ಜೋಪಾನವಾಗಿ ಕಾಪಿಟ್ಟುಕೊಳ್ಳುವ ಕಕ್ಕುಲತೆಯೇ ಅವರ ಸ್ಟ್ರೆಂಥ್ ಅನ್ನಬಹುದು. ಹಾಗಾಗಿಯೇ ಸೀನು ಆಪ್ತ ಬಳಗಕ್ಕೆ 'ಅಮ್ಮ'ನಂತೆ ಸದಾ ಕಾಣುತ್ತಾರೆ.

ಇನ್ನೂ ಪತ್ರಿಕೋದ್ಯಮದ ಅಂಗಳಕ್ಕೆ ಬಂದರೆ ಸೀನಣ್ಣ ನಿಷ್ಣಾತ ನೈಜ ಪತ್ರಕರ್ತ, ಬರವಣಿಗೆ ಕೌಶಲ್ಯ ಸಿದ್ದಿಸಿಕೊಂಡಿರುವ ಇವರು ಎಂತಹುದ್ದೇ ವರದಿಯನ್ನು ಕುಂತಲ್ಲೆ ಸಿದ್ದಪಡಿಸಿ ಹತ್ತಾರು ಪತ್ರಿಕೆಗಳಿಗೆ ರವಾನಿಸಬಲ್ಲರು. ರಾಜಕೀಯ ಒಳನೋಟದ ಕಸುಬು ಮತ್ತು ಕಸುವು ಸೀನಣ್ಣ ಅವರಿಗಿರುವುದರಿಂದಲೆ ಇವತ್ತು ಶಿವಮೊಗ್ಗದಿಂದ ಬೆಂಗಳೂರಿನವರೆಗೂ ಹತ್ತಾರು ಪತ್ರಿಕೆಗಳಿಗೆ ವಿಶ್ಲೇಷಣಾತ್ಮಕ ವರದಿಗಳನ್ನು ಬರೆಯುತ್ತಾರೆ. ಒಬ್ಬ ನೈಜ, ಪ್ರಾಮಾಣಿಕ ಪತ್ರಕರ್ತನ ದುಃಸ್ಥಿತಿಯಂತೆ ಕಳೆದ ಇಪ್ಪತ್ತು ವರ್ಷಗಳ ಅವರ ಪತ್ರಕರ್ತ ಬದುಕು ಅವರನ್ನು ಆರ್ಥಿಕವಾಗಿ ಸದೃಢಗೊಳಿಸಲಿಲ್ಲ ಎಂಬುದು ನಿಜ, ಇದರ ಹೊರತಾಗಿಯೂ ಶೀನಣ್ಣ ಪತ್ರಕರ್ತ ಬದುಕನ್ನು ತನ್ನ ಮಿತಿಯೊಳಗೆ ಕೈ-ಬಾಯಿ ಕೆಡಿಸಿಕೊಳ್ಳದೆ ಗಾಢವಾಗಿ ಪ್ರೀತಿಸುತ್ತಲೆ ಇದ್ದಾರೆ.

ಪ್ರಶಸ್ತಿ, ಸನ್ಮಾನಗಳೆಂದರೆ ಬಸವನಹುಳುವಿನಂತೆ ಸಂಕೋಚದ ಮುದ್ದೆಯಾಗುವ ಆರುಂಡಿಶೀನಣ್ಣನಿಗೆ ಕರ್ನಾಟಕ ರಾಜ್ಯ ಸರ್ಕಾರದ ಕರ್ನಾಟಕ ಮಾಧ್ಯಮ ಅಕಾಡೆಮಿಯ 2024 ನೇ ಸಾಲಿನ ವಾರ್ಷಿಕ ಪ್ರಶಸ್ತಿ ಅರಸಿ ಬಂದಿದೆ. ಒಬ್ಬ ಪತ್ರಕರ್ತನ ವೃತ್ತಿ ಪರತೆಗೆ ಇದಕ್ಕಿಂತ ಸಾರ್ಥಕವಾದ ಗೌರವ ಇನ್ನೆನಿರಲು ಸಾಧ್ಯ?

ಅಭಿನಂದನೆಗಳು ಸೀನಣ್ಣ.

**-ರವಿಕುಮಾರ್ ಟೆಲೆಕ್ಸ್**

## ಅಪರಿಚಿತ ವಾಹನ ಡಿಕ್ಕಿ ಕೋತಿ ಸಾವು

**ಬಣಕಲ್:** ಅಪಘಾತದಲ್ಲಿ ಮೃತಪಟ್ಟ ಕೋತಿಯ ಶಾಸ್ತ್ರೋಕ್ತ ಅಂತ್ಯಸಂಸ್ಕಾರ ನೆರವೇರಿಸಿದ ಮತ್ತಿಕಟ್ಟೆ ಹರೀಶ್ ಹಾಗೂ ಯುವಕರ ಕಾರ್ಯಕ್ಕೆ ಶ್ಲಾಘನೆ ವ್ಯಕ್ತವಾಗಿದೆ. ಚಾರ್ಮಾಡಿಯ ಘಾಟಿಯಲ್ಲಿ ರಸ್ತೆ ದಾಟುತ್ತಿದ್ದಾಗ ಕೋತಿಗೆ ಕಾರು ಡಿಕ್ಕಿಯಾಗಿದೆ. ಸ್ಥಳದಲ್ಲೇ ಕೋತಿ ಸಾವಿಗೀಡಾಗಿದ್ದು, ರಸ್ತೆಯಲ್ಲಿ ತೆರಳುತ್ತಿದ್ದವರ ಕರುಳು ಹಿಂಡುವಂತಾಗಿದೆ. ಅಪಘಾತ ಮಾಡಿದ ಕಾರು ನಿಲ್ಲಿಸದೇ ಹೋಗಿದ್ದರಿಂದ ಕೋತಿ ನರಳುತ್ತ ರಸ್ತೆ ಮಧ್ಯದಲ್ಲೇ ಪ್ರಾಣಬಿಟ್ಟಿದೆ .ಅಲೇಖಾನ್‌ನಲ್ಲಿ ವಾರ್ಷಿಕ ಪೂಜೆ ಮುಗಿಸಿಕೊಂಡು ಅದೇ ಮಾರ್ಗದಲ್ಲಿ ಬರುತ್ತಿದ್ದ ಮತ್ತಿಕಟ್ಟೆಯ ಹರೀಶ್ ಹಾಗೂ ಜಾವಳಿ ಗ್ರಾಮದ ಯುವಕರು ವಾಹನ ನಿಲ್ಲಿಸಿ ಕೂಡಲೇ ಕೋತಿಯ ಮೃತದೇಹವನ್ನು ರಸ್ತೆಯಿಂದ ಎತ್ತಿಕೊಂಡು ಧಾರ್ಮಿಕ ವಿಧಿ ವಿಧಾನಗಳ ಮೂಲಕ ಅಲ್ಲೇ ಸಮೀಪದಲ್ಲೇ ಮಣ್ಣು ಮಾಡುವ ಮೂಲಕ ಅಂತ್ಯ ಸಂಸ್ಕಾರ ನಡೆಸಿದರು. ಯುವಕರ ಮಾನವೀಯ ಕಾರ್ಯಕ್ಕೆ ಶ್ಲಾಘನೆ ವ್ಯಕ್ತವಾಗಿದೆ.

## ಮನುಷ್ಯನ ಹೃದಯಾಳದಿ ಭಗವಂತನ ನೆಲೆ : ಶ್ರೀ ಮರುಳಸಿದ್ದ ಸ್ವಾಮೀಜಿ

**ಚಿಕ್ಕಮಗಳೂರು, ಫೆ. 4 :** ಮನುಷ್ಯನ ಹೃದಯಾಳದಿ ಭಗವಂತನು ನೆಲೆಸಿರುವನು. ಎಲ್ಲೆಲ್ಲೋ ತೆರಳಿ ಶೋಧಿಸುವ ಮೊದಲು, ಆತ್ಮದಲ್ಲಿ ಅಡಗಿರುವ ಪರಮಾತ್ಮನೊಟ್ಟಿಗೆ ಸನ್ಮಾರ್ಗದಲ್ಲಿ ಸಾಗಿದಾಗ ಬದು ಕು ಸಾತ್ವಿಕ ರೂಪ ಪಡೆದುಕೊಳ್ಳಲಿದೆ ಎಂದು ಬಸವತತ್ವ ಪೀಠದ ಶ್ರೀ ಡಾ. ಬಸವ ಮರುಳಸಿದ್ಧ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಲಕ್ಯಾ ಹೋಬಳಿ ಸಮೀಪ ಗಾಣದಾಳು ಗ್ರಾಮದಲ್ಲಿ ವಿಶ್ವಬಂಧು ಶ್ರೀ ಮರುಳಸಿದ್ಧೇಶ್ವರ ಸ್ವಾಮಿ ನೂತನ ದೇವಾಲಯ ಪ್ರವೇಶೋತ್ಸವ, ಕುಂಭಾಭಿಷೇಕ, ಕಳಸಾರೋಹಣ ಹಾಗೂ ಧಾರ್ಮಿಕ ಸಮಾರಂಭದ ದಿವ್ಯಸಾನಿಧ್ಯವಹಿಸಿ ಸೋಮವಾರ ಅವರು ಆರ್ಶೀವಚನ ನೀಡಿದರು.

ಭಕ್ತಾಧಿಗಳು ಮತ್ತು ಗ್ರಾಮಸ್ಥರು ದೇವಾಲಯ ನಿರ್ಮಾಣ ಅಥವಾ ಜೀರ್ಣೋದ್ಧಾರಕ್ಕೆ ಮುಂದಾದರೆ ಸಾಲದು, ದೈನಂದಿನ ಪೂಜಾಕೈಂಕರ್ಯಗಳಲ್ಲಿ ತಲ್ಲೀನರಾಗಬೇಕು. ಪ್ರಾರ್ಥನೆ, ಪೂಜೆ-ಯ ಜೊತೆಗೆ ವೈಮ ನಸ್ಸಿನ ಕೆಡಕನ್ನು ತೊಡೆದು, ಸದ್ಗುಣಗಳನ್ನು ಮೈಗೂಡಿಸಿಕೊಂಡು ಸಾಗಿದರೆ ದೇವಾಲಯ ನಿರ್ಮಾಣಗೊಂಡಿದ್ದಕ್ಕೆ ಸಾರ್ಥಕವಾದಂತೆ ಎಂದು ತಿಳಿಸಿದರು.

ಶ್ರೀ ಮರುಳಸಿದ್ದೇಶ್ವರರು ಹಾಗೂ



ಬಸವಣ್ಣನವರ ಒಂದೇ ಕಾಲದಲ್ಲಿ ಜೀವಿಸಿದವರು. ಶೋಷಿತರ ಧ್ವನಿ ಯಾಗಿ ಮತ್ತು ಸಂಸ್ಕೃತಿ, ಸಂಪ್ರದಾಯದ ಅಂಕುಡೊಂಕುಗಳನ್ನು ತಿದ್ದಲು ಇಡೀ ಜೀವನವನ್ನೆ ಸಮಾಜಕ್ಕಾಗಿ ಮುಡಿಪಿಟ್ಟ ಶ್ರೇಷ್ಟ ದಾರ್ಶನಿಕರು. ಯಜ್ಞಾಧಿಗಳನ್ನು ವಿರೋಧಿಸಿ ಉತ್ತಮ ಪರಂಪರೆಯನ್ನು ಸಮಾಜಕ್ಕೆ ಧಾರೆಗೈದವರು ಎಂದು ಬಣ್ಣಿಸಿದರು.

ಎದೆಗೂಡಿನಲ್ಲಿ ಪರಮಾತ್ಮನನ್ನು ಕಾಣಲು ಮಾನವ ತನ್ನ ದೃಷ್ಟಿಕೋನ ಬದಲಿಸಿ, ಶ್ರದ್ದಾಪೂರ್ವಕವಾಗಿ ಒಳಗಣ್ಣಿನಿಂದ ಪ್ರಾರ್ಥಿಸಿದರೆ, ತಾನಾಗಿಯೇ ದರ್ಶನ ಭಾಗ್ಯ ಕರುಣಿಸುವನು. ತನ್ನೊಳಗಿನ ದೇವರನ್ನು ಪೂ ಜಿಸುವ ಪರಿಯನ್ನು ಅರಿತುಕೊಳ್ಳಬೇಕು. ಈ ರೀತಿಯಲ್ಲೂ ಮರುಳಸಿದ್ದರು ತನ್ನ ವ್ಯಾಪ್ತಿಯಲ್ಲಿ ಸಕಲದೈವವು ಒಂದೆಡೆ ನೆಲೆಸಿದ್ದಾನೆ ಎಂಬ ಸಿದ್ಧಾಂತ ಸಾರಿದ್ದರು ಎಂದು ಹೇಳಿದರು.

ಗ್ರಾಮಸ್ಥರು, ದಾನಿಗಳು ಹಾಗೂ ಜನಪ್ರತಿನಿಧಿಗಳ ಸಹಕಾರದಿಂದ ಗಾಣದಾಳು ಶ್ರೀ ಮರುಳಸಿದ್ಧೇಶ್ವರ ಸ್ವಾಮಿಯವರ ಭವ್ಯ ಮಂದಿರ ನಿರ್ಮಾಣಗೊಂಡಿರುವುದು ಶ್ಲಾಘನೀಯ. ಆ ನಿಟ್ಟಿನಲ್ಲಿ ಗ್ರಾಮಸ್ಥರು ಮಕ್ಕಳಿಗೆ ಸಂಸ್ಕೃತಿ, ಸಂಸ್ಕಾರ ಕಲಿಸುವುದಾಗಿ ಬಾಲ್ಯದಿಂದಲೇ ದೇವಾಲಯಕ್ಕೆ ಕಳುಹಿಸುವ ಪದ್ಧತಿ ರೂಢಿಸಬೇಕು ಎಂದು ಕಿವಿಮಾತು ಹೇಳಿದರು.

ಶಾಸಕ ಹೆಚ್.ಡಿ.ತಮ್ಮಯ್ಯ ಮಾತನಾಡಿ ಶ್ರೀ ಮರುಳಸಿದ್ಧರ ಕಾಲಘಟ್ಟದಲ್ಲಿ ಆರ್ಥಿಕ ಸಮಾನತೆ, ಮಹಿಳೆಯರಿಗೆ ಗೌರವಿಸುವುದು, ಕಾಯಕವೇ ಕೈಲಾಸ ಎಂಬುದನ್ನು ವಚನಗಳ ಮುಖಾಂತರ ಸಾರಿ ಸಮಸಮಾ ಜಕ್ಕೆ ಹೆಜ್ಜೆಯಿಟ್ಟ ಶ್ರೇಷ್ಟರ ದೇವಾಲಯವನ್ನು ಪುಟ್ಟ ಗ್ರಾಮದಲ್ಲಿ ಪ್ರತಿಷ್ಟಾಪಿಸಿರುವ ಗ್ರಾಮಸ್ಥರ ಮನಸ್ಸು ಅ ತೀವ ದೊಡ್ಡದು ಎಂದು ಹೇಳಿದರು.

ಪ್ರಸ್ತುತ ದೇವಾಲಯ ಅಭಿವೃದ್ದಿಗೆ ಶಾಸಕರ ನಿಧಿಯಿಂದ 10 ಲಕ್ಷ ಅನುದಾನ ಪೂರೈಸುವ ಜೊತೆಗೆ ವಿವಿಧ ದಾನಿಗಳು, ಗ್ರಾಮಸ್ಥರ ಸಹಕಾರದಿಂದ ಇಂದು ವಿಜೃಂಭ್ರಮಣೆಯಿಂದ ಲೋಕಾರ್ಪಣೆಗೊಂಡಿದ್ದು ಶ್ರೀ ಮರುಳಸಿದ್ಧೇಶ್ವರ ಸ್ವಾಮಿ ಒಕ್ಕಲಿನ ಕುಟುಂಬವು ಮುಕ್ತವಾಗಿ ತೆರಳಿ ಪೂಜಾವಿಧಿವಿಧಾನ ಕೈಗೊಳ್ಳಲು ಅನುವು ಮಾಡಲಾಗಿದೆ ಎಂದರು.

ಬಸವತತ್ವ ಪೀಠವು ಕೇವಲ ಚಿಕ್ಕಮಗಳೂರು ತಾಲ್ಲೂಕಿಗೆ ಸೀಮಿತವಾಗಿತ್ತು. ಶ್ರೀ ಬಸವ ಮರುಳಸಿದ್ದ ಸ್ವಾಮೀಜಿ ಗದ್ದುಗೆ ವಹಿಸಿಕೊಂಡ ಬಳಿಕ ಚಿಕ್ಕಮಗಳೂರು, ಹಾಸನ ಹಾಗೂ ಶಿವಮೊಗ್ಗದಲ್ಲೂ ಪ್ರತೀತಿ ಪಡೆ ಯುತ್ತಿದೆ. ಮುಂದೆ ಚಿಕ್ಕಮಗಳೂರಿಗೆ ಆಗಮಿಸುವವರು ಶೃಂಗೇರಿ, ರಂಭಾಪುರೀ ಮಠಗಳಿಗೆ ಭೇಟಿ ನೀ ಡಿದಂತೆ, ಬಸವತತ್ವಪೀಠಕ್ಕೆ ಭೇಟಿ ನೀಡುವಂತೆ ಅಭಿವೃದ್ದಿಪಡಿಸಲು ಮುಂದಾಗುತ್ತೇವೆ ಎಂದರು.

ಉದ್ಯಮಿ ಹಾಗೂ ದಾನಿ ಬಿ.ಎನ್. ಚಿದಾನಂದ್ ಮಾತನಾಡಿ ದೇವಾಲಯ ಅಭಿವೃದ್ಧಿ ಹಣ ಕೊಡು ವಷ್ಟು ದೊಡ್ಡವರಲ್ಲ, ಕೇವಲ ಸೇವೆಯ ದೃಷ್ಟಿಯಿಂದ ಕೆಲಸ ನಿರ್ವಹಿಸಿದ್ದೇವೆ. ಭಕ್ತಾಧಿಗಳು ಪ್ರಾರ್ಥನೆ ಹಾ ಗೂ ಆಚರಣೆಗಾಗಿ ತಾವು ಸೇರಿದಂತೆ ಅನೇಕರ ದಾನದಿಂದ ಶ್ರೀ ಮರುಳಸಿದ್ದೇಶ್ವರರ ಭವ್ಯ ಮಂದಿರ ನಿ ರ್ಮಾಣಗೊಂಡು ಲೋಕಾರ್ಪಣೆಗೊಂಡಿದೆ ಎಂದು ಹೇಳಿದರು.

ಜಿ.ಪಂ. ಮಾಜಿ ಅಧ್ಯಕ್ಷೆ ರೇಖಾ ಹುಲಿಯಪ್ಪಗೌಡ ಮಾತನಾಡಿ ಚಂಚಲ ಮನಸ್ಸನ್ನು ನಿಗ್ರಹಿಸಲು ದೇ ವಾಲಯ ಅತ್ಯಂತ ಪುಣ್ಯಸ್ಥಳಗಳು. ಪೂರ್ವಿಕರ ಕಾಲದಲ್ಲಿ ಹಿರಿಯರು ಹಾಕಿಕೊಟ್ಟ ಸಂಪ್ರದಾಯ ಪಾಲಿಸ ಬೇಕು. ಮೊದಲು ಸ್ಥಳೀಯ ದೇವಾಲಯ ಆದ್ಯತೆ ನೀಡಿ, ತದನಂತರ ಪ್ರಸಿದ್ಧ ದೇಗುಲಗಳಿಗೆ ತೆರುವ ಪದ್ಧ ತಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರಡಿಗವಿ ಮಠದ ಶ್ರೀ ಶಿವಶಂಕರ ಶಿವಯೋಗಿ ಸ್ವಾಮೀಜಿ, ಜಿ.ಪಂ. ಮಾಜಿ ಉಪಾ ಧ್ಯಕ್ಷ ಬಿ.ಜಿ.ಸೋಮಶೇಖರ್, ಉದ್ಯಮಿಗಳಾದ ಬಿ.ಎನ್. ರಾಜಶೇಖರ್, ಬಿ.ಎನ್.ಷಡಾಕ್ಷರಿ, ಸಾಹಿತಿ ಚಟ್ನಹಳ್ಳಿ ಮಹೇಶ್, ಸಖರಾಯಪಟ್ಟಣ ಬ್ಲಾಕ್ ಕಾಂಗ್ರೆಸ್ ಮಹಡಿಮನೆ ಸತೀಶ್, ಶ್ರೀ ಮರುಳಸಿದ್ದೇಶ್ವರ ಸೇವಾ ಟ್ರಸ್ಟ್ ಅಧ್ಯಕ್ಷ ಜಿ.ಎಂ.ರಮೇಶ್, ಉಪಾಧ್ಯಕ್ಷ ಜಿ.ರಮೇಶ್, ಗ್ರಾಮಸ್ಥರಾದ ಚಂದ್ರಶೇಖರ್, ಮಲ್ಲಿಕಾರ್ಜುನ್, ಗಿರೀಶ್, ಎಲ್.ಆರ್.ಈಶ್ವರಪ್ಪ ಉಪಸ್ಥಿತರಿದ್ದರು.

## ಕಲಾವಿದ ಹನುಮಂತಯ್ಯರಿಗೆ ಗೌರವ ಡಾಕ್ಟರೇಟ್ ಪದವಿ



**ಭದ್ರಾವತಿ:** ನಗರದ ರಂಗಭೂಮಿ ಹಾಗೂ ಚಲನಚಿತ್ರ ಕಿರುತೆರೆ ನಟ ವೈ.ಕೆ. ಹನುಮಂತಯ್ಯರವರ ಕಲಾ ಸೇವೆಯನ್ನು ಪರಿಗಣಿಸಿ ಹೊಸೂರಿನ ಏಷ್ಯಾ ಇಂಟರ್‌ನ್ಯಾಷನಲ್ ಕಲ್ಚರ್ ರಿಸರ್ಚ್ ಯೂನಿವರ್ಸಿಟಿ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

ರಾಜ್ಯ ಸರ್ಕಾರಿ ಸ್ವಾಮ್ಯದ ನಗರದ ಮೈಸೂರು ಕಾಗದ ಕಾರ್ಖಾನೆಯ ಸಕ್ಕರೆ ಘಟಕದಲ್ಲಿ ಸುಮಾರು 29 ವರ್ಷ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿರುವ ವೈ.ಕೆ.ಹನುಮಂತಯ್ಯರವರು ಸುಮಾರು 5 ದಶಕಗಳಿಂದ ರಂಗಭೂಮಿ ಕಲಾವಿ ದರಾಗಿ ಗುರುತಿಸಿಕೊಂಡಿದ್ದು, ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹಾಗು ಜಾನಪದ ಸೇರಿದಂತೆ ಒಟ್ಟು 60ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಇವರ ಅಭಿನಯದ ನಾಟಕಗಳು ಸುಮಾರು 180 ಬಾರಿ ಪ್ರದರ್ಶನಗೊಂಡಿವೆ. ಅಲ್ಲದೆ ಹನುಮಂತಯ್ಯರವರು ನೃತ್ಯ ಕಲಾವಿದರಾಗಿದ್ದು, ಎಲ್ಲಾ ಪ್ರಕಾರದ ನೃತ್ಯಗಳನ್ನು ಪ್ರದರ್ಶಿಸಿದ್ದಾರೆ. 250ಕ್ಕೂ ಹೆಚ್ಚು ಬೀದಿ ನಾಟಕಗಳಲ್ಲಿ ಅಭಿನಯಿಸಿದ್ದು, ಚಲನಚಿತ್ರ ಕಿರುತೆರೆ ನಟ-ರಾಗಿದ್ದಾರೆ.

## ಕಾಲಮಿತಿಯಲ್ಲಿ ಜಲಜೀವನ ಮಿಷನ್ಯೋಜನೆ ಅನುಷ್ಠಾನಕ್ಕೆ ಶ್ರಮಿಸಿ : ಗುರುದತ್ತಹೆಗಡೆ

**ಶಿವಮೊಗ್ಗ :** ಗ್ರಾಮೀಣ ಭಾಗದ ಜನರಿಗೆ ಶುದ್ಧವಾದ ಸುರಕ್ಷಿತ ಕುಡಿಯುವ ನೀರನ್ನು ಒದಗಿಸಿ, ಸಮಸ್ಯೆಯಿಂದ ಜನರನ್ನು ಹೊರ ತರುವ ನಿಟ್ಟಿನಲ್ಲಿ ಸರ್ಕಾರ ಜಾರಿಗೆ ತಂದ ಮಹತ್ವಾಕಾಂಕ್ಷಿ ಜಲಜೀವನ್ ಮಿಷನ್ ಯೋಜನೆಯ ಸಮರ್ಪಕ ಅನುಷ್ಟಾನಕ್ಕಾಗಿ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ನಿಗಧಿಪಡಿಸಿದ ಕಾಲಮಿತಿಯೊಳಗಾಗಿ ಕಾರ್ಯ ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿ ಗುರುದತ್ತಹೆಗಡೆ ಅವರು ಹೇಳಿದರು.

ಅವರು ಇಂದು ತಮ್ಮ ಕಚೇರಿ ಸಭಾಂಗಣದಲ್ಲಿ ಜಲಜೀವನ್ ಮಿಷನ್ ಯೋಜನೆಯ ಅನುಷ್ಠಾನದಲ್ಲಿ ಜಿಲ್ಲೆಯ ಕೆಲವು ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬಂದಿರುವ ನಿವೇಶನ, ಅರಣ್ಯಭೂಮಿ ಮತ್ತಿತರ ಸಮಸ್ಯೆ-ಸವಾಲುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ಏರ್ಪಡಿಸಲಾಗಿದ್ದ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಜಿಲ್ಲೆಯ ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪೈಪ್ಲೈನ್ ಅಳವಡಿಸಲು ಸವಾಲುಗಳು ಎದುರಾಗಿವೆ. ಅಲ್ಲದೆ ಮಲೆನಾಡಿನ ಕೆಲವು ಪ್ರದೇಶಗಳಲ್ಲಿ ಯೋಜನೆಯ ಅನುಷ್ಠಾನಕ್ಕಾಗಿ ಆಯ್ಕೆಗೊಳಿಸಿರುವ ಭೂಮಿ ಅರಣ್ಯ ಇಲಾಖೆಗೆ ಒಳಪಟ್ಟಿದ್ದು, ಅರಣ್ಯ ನಿಯಮಗಳು ಅಡಚಣೆಯಾಗಿವೆ. ಆದ್ದರಿಂದ ಅಲ್ಲಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಅನುಷ್ಠಾನ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಖುದ್ದು ಭೇಟಿ ನೀಡಿ ದೊರೆಯುವ ಸೂಕ್ತ ಹಾಗೂ ಪರ್ಯಾಯ ಸ್ಥಳಗಳನ್ನು ಗುರುತಿಸಿ ಕಾಲಮಿತಿಯಲ್ಲಿ ಯೋಜನೆಯ ಅನುಷ್ಠಾನಕ್ಕೆ ಮುಂದಾಗುವಂತೆ ಅವರು ತಿಳಿಸಿದರು.

## ಮೂರು ದಿನಗಳ ಕಾಲ ಯಲ್ಲಮ್ಮ ದೇವಿಯ ಪುನರ್ ಪ್ರತಿಷ್ಟಾಪನಾ ಮಹೋತ್ಸವ

**ಸಾಗರ:** ಇಂದಿನಿಂದ ಮೂರು ದಿನಗಳ ಕಾಲ ಶ್ರೀ ಯಲ್ಲಮ್ಮ ದೇವಿಯ ಪುನರ್ ಪ್ರತಿಷ್ಠಾ ಮಹೋತ್ಸವ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ ಎಂದು ಯಲ್ಲಮ್ಮ ದೇವಿ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಎಸ್.ಬಿ.ರಘುನಾಥ್ ತಿಳಿಸಿದರು.

ಇಲ್ಲಿನ ಸೊರಬ ರಸ್ತೆಯಲ್ಲಿರುವ ಶ್ರೀ ಯಲ್ಲಮ್ಮ ದೇವಸ್ಥಾನದಲ್ಲಿ ಸೋಮ ವಾರ ಮೂರು ದಿನಗಳ ಕಾಲ ನಡೆಯುವ ಯಲ್ಲಮ್ಮ ದೇವಿ ಪುನರ್ ಪ್ರತಿಷ್ಠಾಪನಾ ಮತ್ತು ನೂತನ ದೇವಸ್ಥಾನ ಪ್ರತಿಷ್ಠಾ ಮಹೋತ್ಸವ ಕಾರ್ಯಕ್ರಮದ ಧಾರ್ಮಿಕ ವಿಧಿವಿಧಾನಗಳಲ್ಲಿ ಪಾಲ್ಗೊಂಡು ಮಾತನಾಡು ತ್ತಿದ್ದರು.

ಯಲ್ಲಮ್ಮ ದೇವಸ್ಥಾನಕ್ಕೆ ನೂರಾರು ವರ್ಷಗಳ ಇತಿಹಾಸವಿದ್ದು, ಅತ್ಯಂತ ಕಾರಣಿಕ ದೇವಸ್ಥಾನವಾಗಿದೆ. ಕಳ್ಳತನ ನಡೆದಾಗ, ಮಾಟಮಂತ್ರ ತೆಗೆಸಲು ಸೇರಿದಂತೆ ಬೇರೆಬೇರೆ ಸಂದರ್ಭದಲ್ಲಿ ಶ್ರೀದೇವಿಯ ಪಲ್ಲಕ್ಕಿಯನ್ನು ತೆಗೆದುಕೊಂಡು ಹೋಗಲಾಗುತ್ತಿದ್ದು, ಸಾಕಷ್ಟು ಜನರಿಗೆ ಇದರಿಂದ ಉಪಯೋಗವಾಗಿದೆ. ಈ ಹಿನ್ನೆಲೆಯಲ್ಲಿ ದೇವಸ್ಥಾನಕ್ಕೆ ಹೆಚ್ಚು ಭಕ್ತರು ಬರುತ್ತಿದ್ದಾ-ರೆ ಎಂದರು.

ಸುಮಾರು 2.50 ಕೋಟಿ ರೂ. ವೆಚ್ಚದಲ್ಲಿ ನೂತನ ಶಿಲಾಮಯ ದೇವ ಸ್ಥಾನ ನಿರ್ಮಿಸಲಾಗಿದ್ದು, ಇಂದಿನಿಂದ ಮೂರು ದಿನಗಳ ಕಾಲ ವಿವಿಧ ಧಾರ್ಮಿಕ



ಕಾರ್ಯಕ್ರಮಗಳ ಮೂಲಕ ದೇವಸ್ಥಾನ ಲೋಕಾರ್ಪಣೆ ಯಾಗಲಿದೆ. ಮಂಗಳವಾರ ಪ್ರತಿಷ್ಠಾ ಮಹೋತ್ಸವದ ಮುಖ್ಯ ಕಾರ್ಯ ಕ್ರಮಗಳು ನಡೆಯಲಿದ್ದು, ಮಧ್ಯಾಹ್ನ ಸಾಮೂಹಿಕ ಅನ್ನ ಸಂತರ್ಪಣೆ ಇರುತ್ತದೆ. ಸಂಜೆ ಭರತನಾಟ್ಯ, ಸುಗಮ ಸಂಗೀತ ಕಾರ್ಯಕ್ರಮ ಸಹ ಏರ್ಪಡಿಸಲಾಗಿದೆ ಎಂದರು.

ಇದಕ್ಕೂ ಮೊದಲು ಗಣಪತಿ ಕೆರೆಯಿಂದ ಗಂಗೆಯನ್ನು ತುಂಬಿಕೊಂಡು ಯಲ್ಲಮ್ಮ ದೇವಸ್ಥಾನಕ್ಕೆ ಮೆರವಣಿಗೆ ಮೂಲಕ ತರಲಾಯಿತು. ನೂರಾರು ಮಹಿಳೆಯರು ಪೂರ್ಣಕುಂಭದೊಂದಿಗೆ ಮೆರವಣಿಗೆಯಲ್ಲಿ ಪಾಲ್ಗೊಂಡಿ ದ್ದರು.

ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಲೋಕೇಶಕುಮಾರ್, ಉಪಾಧ್ಯಕ್ಷ ಶಶಿಧರಮೂರ್ತಿ, ಸಹ ಕಾರ್ಯದರ್ಶಿ ಉಮೇಶ್ ಹಿರೇನೆಲ್ಲೂರು, ಕೋಶಾಧ್ಯಕ್ಷ ಚಂದ್ರಕಾಂತ್ ಜಿಂಗಾಡೆ, ಮದನ್ ಸಿಂಗ್, ರಾಜೇಂದ್ರ ಸಿಂಗ್, ಕುಸುಮ ಸುಬ್ಬಣ್ಣ, ಜನಾರ್ದನ ಆಚಾರಿ ಇನ್ನಿತರರು ಹಾಜರಿ ದ್ದರು.

## ಬಂದೂಕು ದುರುಪಯೋಗಪಡಿಸಿದರೆ ಕಠಿಣ ಕಾನೂನು ಕ್ರಮ : ರಮೇಶ್ ಬಾಬು

**ಚಿಕ್ಕಮಗಳೂರು:** ಆತ್ಮ ರಕ್ಷಣೆಗಾಗಿ ಪಡೆದುಕೊಂಡ ಬಂದೂಕುಗಳನ್ನು ವನ್ಯಜೀವಿಗಳ ಹತ್ಯೆ ಮಾಡುವುದಕ್ಕೆ ಬಳಸುವುದು ಕಾನೂನಿನ ಅನ್ವಯ ಅಪರಾಧದೊಂದಿಗೆ ಪ್ರಜ್ಞಾವಂತ ಸಮಾಜದ ಲಕ್ಷಣವಲ್ಲ ಎಂದು ಉಪಅರಣ್ಯ ಸಂರಕ್ಷಣಾಧಿಕಾರಿ ರಮೇಶ್ ಬಾಬು ಹೇಳಿದರು.

ನಗರದ ಸಶಸ್ತ್ರ ಮೀಸಲು ಪಡೆಯ ಕ್ರೀಡಾಂಗಣದಲ್ಲಿ ಇಂದು ಪೊಲೀಸ್ ಇಲಾಖೆಯ ವತಿಯಿಂದ ಆಯೋಜಿಸಿದ್ದ ಬಂದೂಕು ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಬಂದೂಕುಗಳನ್ನು ದುರುಪಯೋಗ ಪಡಿಸಿಕೊಂಡರೆ ಅವರ ವಿರುದ್ಧ ಪೊಲೀಸ್ ಇಲಾಖೆಯು ಇಲಾಖೆಯೊಂದಿಗೆ ಅರಣ್ಯ ಇಲಾಖೆಯು ಕಠಿಣ ಕಾನೂನು ಕ್ರಮಕೈಗೊಳ್ಳುವುದಾಗಿ ಎಚ್ಚರಿಸಿದರು.

ಸಮಾಜವನ್ನು ಶಸಕ್ತಗೊಳಿಸಲು ಮತ್ತು ಆರೋಗ್ಯ ಪೂರ್ಣಗೊಳಿಸಲು ನಾಗರಿಕ ಬಂದೂಕು ತರಬೇತಿ ಕಾರ್ಯಕ್ರಮ ಆಯೋಜಿಸಿರುವ ಪೊಲೀಸ್ ಇಲಾಖೆಯ ಕ್ರಮ ಶ್ಲಾಘನೀಯ ಎಂದು ಹೇಳಿದರು.

ದೊಡ್ಡ ಜಿಲ್ಲೆಯಾಗಿ, ಪ್ರಾಕೃತಿಕವಾಗಿಯೂ ಸಂಪತ್ಭರಿತ ಜಿಲ್ಲೆಯಾಗಿದ್ದು, ಇಲ್ಲಿನ ಕೃಷಿಕರು ಜೀವ ಮತ್ತು ಬೆಳೆ ರಕ್ಷಿಸಿಕೊಳ್ಳಲು ಬಂದೂಕುಗಳು ಅತ್ಯವಶ್ಯಕವಾಗಿದೆ. ಮಲೆನಾಡಿಗರ ಬಂದೂಕಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದಾರೆ. ಬಂದೂಕು ಎಂಬುದು ಹೆಮ್ಮೆಯ ಪ್ರತೀಕವೂ ಹೌದು ಎಂದು ಹೇಳಿದರು.

ಮಲೆನಾಡಿನ ದುರ್ಗಮ ಪ್ರದೇಶಗಳ ತೋಟಗಳಲ್ಲಿ ವಾಸಿಸುವ ಒಂಟಿ ಮನೆಗಳಲ್ಲಿ ವಾಸಿಸುವ ಕೃಷಿಕ ಮಾಲೀಕರಿಗೆ ಬಂದೂಕು ಆತ್ಮವಿಶ್ವಾಸ ಮೂಡಿಸಿದರೊಂದಿಗೆ ತುರ್ತು ಪರಿಸ್ಥಿತಿಯಲ್ಲಿ ಆಪದ್ಬಾಂಧವನಾಗಿ ರಕ್ಷಣೆ ನೀಡುತ್ತದೆ ಎಂದು ಹೇಳಿದ ಅವರು ಇಂತಹ ಬಂದೂಕು ತರಬೇತಿ ಶಿಬಿರಗಳು ಬಂದೂಕು ಬಳಕೆಯ ಕೌಶಲ್ಯ ಕಲಿಸಿ, ಕೆಲವು ಅವಘಡಗಳು ಸಂಭವಿಸಿದಾಗ ಕೈಗೊಳ್ಳಬೇಕಾದ ಕಾನೂನಾತ್ಮಕ ಕ್ರಮಗಳು ಬಗ್ಗೆ ಅರಿವು ಮೂಡಿಸಲು ಸಹಕಾರಿಯಾಗಿದೆ ಎಂದರು.

ಬಂದೂಕು ಪರವಾನಿಗೆ ಪಡೆಯಲು ಅರ್ಜಿ ಸಲ್ಲಿಸುವ ವ್ಯಕ್ತಿಯು ಯಾವುದೇ ಅಪರಾಧಿ ಹಿನ್ನೆಲೆ ಒಂದಿರಬಾರದು ಎಂಬ ಪ್ರಮುಖ ಶರತ್ತು ವಿಧಿಸಿದ್ದು, ಬಂದೂಕು ಪಡೆಯಲು ಇಚ್ಚಿಸುವವರು ಬಹು ಎಚ್ಚರಿಕೆಯಿಂದ ಹಾಗೂ ಸಂಯಮದಿಂದ ವರ್ತಿಸುವ ಅವಶ್ಯಕತೆ ಇದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ದಾಖಲಾಗಿರುವ ವನ್ಯಜೀವಿ



ಕಳ್ಳ ಬೇಟೆ 180 ಪ್ರಕರಣಗಳ ಪೈಕಿ ನೂರಕ್ಕೂ ಹೆಚ್ಚು ಪರವಾನಗಿ ಪಡೆದ ಬಂದೂಕುಗಳನ್ನು ಉಪಯೋಗಿಸಿವುದು ಬಂದಿರುವುದು ದುರಾದೃಷ್ಟಕರ ಎಂದು ವಿಷಾಧಿಸಿದರು. ಜಿಲ್ಲೆಯಲ್ಲಿ ವಿದ್ಯಾವಂತರು, ಕಾನೂನಿಗೆ ಬೆಲೆ ಕೊಡುವ ಸುಸಂಸ್ಕೃತ ಜನರಿದ್ದು, ಆ ಪೈಕಿ ಕೆಲವೇ ಮಂದಿಯ ದುರ್ವರ್ತನೆ ಅವರು ಶಿಕ್ಷೆ ಅನುಭವಿಸಬೇಕಾಗಿದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಮಾನವ ಮತ್ತು ವನ್ಯಜೀವಿಗಳ ನಡುವೆ ಸಂಘರ್ಷ ಏರ್ಪಟ್ಟಿರುವುದಕ್ಕೆ ಸರ್ಕಾರ ಮತ್ತು ಅರಣ್ಯ ಇಲಾಖೆ ವನ್ಯಜೀವಿಗಳ ಸಂರಕ್ಷಣೆಯಿಂದ ವನ್ಯಜೀವಿಗಳ ಸಂಖ್ಯೆಯು ಹೆಚ್ಚಾಗಿದೆ ಆದರೆ ಪ್ರಾಣಿಗಳು ಹೆಚ್ಚಾಗಿದೆ ಎಂಬ ಕಾರಣ-ಕ್ಕೆ ಅವನ್ನು ಹತ್ಯೆ ಮಾಡುವ ಕಾನೂನು ದೇಶದಲ್ಲಿ ಇಲ್ಲ, ನಿಯಮ ಮೀರಿ ವನ್ಯಜೀವಿಗಳ ಹತ್ಯೆ ಮಾಡಿದರೆ ಇಲಾಖೆ ಕಠಿಣ ಕ್ರಮಕೈಗೊಳ್ಳುತ್ತದೆ ಎಂದು ಹೇಳಿದರು.

ಕಳೆದ ಏಳು ಎಂಟು ವರ್ಷಗಳಲ್ಲಿ ವನ್ಯಜೀವಿಗಳಿಂದ ಬೆಳೆ ಹಾನಿಯೂ ಸೇರಿದಂತೆ ಉತ್ಪನ್ನಗಳು ನಷ್ಟವಾಗಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ವತಿಯಿಂದ 12 ಕೋಟಿ ಪರಿಹಾರ ನೀಡಲಾಗಿದೆ. 2024-25 ನೇ ಸಾಲಿನಲ್ಲಿ ವನ್ಯ ಜೀವಿಗಳಿಂದ ನಾಲ್ಕುವರೆ ಕೋಟಿ ನಷ್ಟವಾಗಿರುವ ಬಗ್ಗೆ ಅರ್ಜಿಗಳು ಬಂದಿದ್ದು, ಇದನ್ನು ಇಲಾಖೆ ಮಟ್ಟದಲ್ಲಿ ಚರ್ಚಿಸಿ ಅವರಿಗೆ ಇಲಾಖೆಯ ವತಿಯಿಂದ ತಲುಪಿಸಬೇಕಾದ ಪರಿಹಾರವನ್ನು ತಲುಪಿಸಲು ಪ್ರಾಮಾಣಿಕವಾಗಿ ಇಲಾಖೆ ಕಾರ್ಯನಿರ್ವಹಿಸಲಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿಕ್ರಂ ಅಮಟೆ ಮಾತನಾಡಿ, ಪೊಲೀಸ್ ಇಲಾಖೆ ಮತ್ತು ನಾಗರೀಕರ ನಡುವಿನ ಅಂತರವನ್ನು ಕಡಿಮೆಗೊಳಿಸುವುದೇ ಈ ಬಂದೂಕು ತರಬೇತಿಯ ಮೂಲ ಉದ್ದೇಶ ಎಂದು ಹೇಳಿದರು.

ನಾಗರೀಕರಿಗೆ ಬಂದೂಕು ತರಬೇತಿ ನೀಡುವುದು, ಅದರೊಂದಿಗೆ ಪರವಾನಗಿ ನೀಡುವುದು, ಪೊಲೀಸ್ ಇಲಾಖೆಯ ಆದ್ಯ ಕರ್ತವ್ಯ ಎಂದು ಹೇಳಿದ ಅವರು, ಪೊಲೀಸ್ ಇಲಾಖೆಯನ್ನು ಜನಸ್ನೇಹಿಯಾಗಿ ಪರಿವರ್ತನೆಗೊಳಿಸಲು ನಾಗರೀಕರ ಸಹಕಾರ ಅತ್ಯಗತ್ಯ ನಾಗರೀಕರು ಎಂದರು.

ಪೊಲೀಸ್ ಇಲಾಖೆಯ ಮೇಲಿನ ಭೀತಿಯಿಂದ ನಾಗರೀಕರು ದೂರ ಉಳಿಯುವುದು ಸರಿಯಲ್ಲ. ನಾಗರೀಕರು ಸಹ ಇಲಾಖೆಯ ಅಧಿಕಾರಿಗಳೊಂದಿಗೆ ಆಪ್ತತೆಯಿಂದ ವರ್ತಿಸಬೇಕು. ಸಮಾಜದ ಒಳಿತಿಗೆ ಹಾಗೂ ರಕ್ಷಣೆಗಾಗಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಇಲಾಖೆಗೆ ಸಾರ್ವಜನಿಕರಿಂದ ದೊರೆಯುವ ಮಾಹಿತಿಯು ಅತ್ಯಂತ ಅಮೂಲ್ಯವಾದದ್ದು, ಆ ನಿಟ್ಟಿನಲ್ಲಿ ನಾಗರಿಕರು ಪೋಲಿಸ್ ಇಲಾಖೆಯೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಶಿಬಿರಾರ್ಥಿಯಾಗಿ ಭಾಗವಹಿಸಿದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಬಿ ಸುಜೇಂದ್ರ ಮಾತನಾಡಿ, ತರಬೇತಿ ಪಡೆದು ಖರೀದಿಸಿದ ಬಂದೂಕುಗಳಿಂದ ಪ್ರಾಣಿಗಳ ಬೇಟೆ ಮಾಡುವುದು ಮಾನವೀಯತೆಯ ಲಕ್ಷಣವಲ್ಲ. ವನ್ಯಜೀವಿಗಳು ನಮ್ಮ ಪರಿಸರದ ಒಂದು ಭಾಗ ಅವುಗಳಿಗೂ ಭಾವನೆಗಳಿದ್ದು, ಪ್ರಾಣಿಗಳ ಭಾವನೆ ಅರಿತು ಮನುಷ್ಯ ವರ್ತಿಸಬೇಕು ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮೌಲ್ಯಮಾಪನ ತಜ್ಞರ ಸಮಿತಿ ಅಧ್ಯಕ್ಷ ಎ.ಎನ್ ಮಹೇಶ್ ಡಿ.ವೈ.ಎಸ್.ಪಿ ಶೈಲೇಂದ್ರ, ಆರ್.ಪಿ.ಐ.ಸಹದೇವ್ ಇದ್ದರು. ವಕೀಲ ಹರೀಶ್ ಪ್ರಸ್ತಾವಿಕವಾಗಿ ಮಾತನಾಡಿದರು. ಶಿಬಿರಾರ್ಥಿಗಳು ಅಭಿಪ್ರಾಯ ಹಂಚಿಕೊಂಡರು.

Published and Owned by : **PRATHIBHA M.S.,** Published at : No. 900/A2, Opp-Banashankri Temple Arch, Main Road, Shakti Nagara, Davanagere, Karnataka-577004. Printed by : **MALLIKARJUNAPPA H.G.** Printed at : SHIVA MEDIA HOUSE, No.900/A2, Opp-Banashankari Temple Arch, Main Road, Davanagere, Karnataka-577004. Editor: **MALLIKARJUNAPPA H.G.**